ದುಡಿವ ಜನರ ಪ್ರಾಣ ಮಿತ್ರ
ಐಕ್ಯರಂಗ
ಸಂಪುಟ 25 ಸಂಚಿಕೆ 2
ಜನವರಿ 12, 2003 ಬೆಲೆ ರೂ. 3.00



ಜನವರಿ 10 ರಂದು
ಬೆಂಗಳೂರಿನ ಕೇಂದ್ರ ರೇಷ್ಮೆ ಮಂಡಳಿ ಎದುರು
ಅಖಿಲ ಭಾರತ ಪ್ರದರ್ಶನ

ರೇಷ್ಮೆ ಗೂಡಿನಲ್ಲೇ ರೈತರು ಸಾಯಬೇಕೆ?



ಕಮಲಾಪುರ ದುರ್ಘಟನೆ ಜಾತಿ ವೈಷಮ್ಯದ ದಳ್ಳುರಿ



ಇದೋ ಶಿಕ್ಷಣದ ಕೇಸರೀಕರಣ




ದ್ವೇಷ, ತಲ್ಲಣಗಳ ಕಳೆದ ವರ್ಷ



ಬದುಕಿಗಾಗಿ ಹೆಣ್ಣಿನ ಹೋರಾಟ 'ದ್ವೀಪ'

ಲಿಬ್ಯಾ ಮರುಭೂಮಿಯಲ್ಲಿ ಭಾರತೀಯ ಬಂಡಾಯ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

11



ಕಳೆದ ಸಂಚಿಕೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಗಳ ಅಂತರ್ಯುದ್ದ ಬೇಗುದಿ, ಬ್ರಿಟಿಷರ ಭರವಸೆಗಳು ಹಾಗೂ ಆಶ್ವಾಸನೆಗಳನ್ನು ನಂಬುತ್ತಿದ್ದ ನಮ್ಮ ರಾಜಕಾರಣಿಗಳ ಅವಿವೇಕ, ಬಾಬ್‌ಕಟ್ ಚಿನಾಲಿ ಕುಟುಂಬದ ಜೊತೆ ಸಂಘಟೆಯ ಲೇ। 'ಎಕ್ಸ್' ಸೇರಿದ್ದು, ಕಿಲ್ನರ್ ಬಾರ್ ಬ್ರಿಟಿಷ್ ವಿರೋಧಿ ಕ್ಲಬ್ ಆಗಿ ಪರಿವರ್ತನೆ ಮತ್ತು ಆ ಅಂದದ ಹುಡುಗಿ ನಿಜವಾದ ಉದ್ದೇಶ ತಿಳಿದು ದಂಗು ಬಡಿದ ಮೇ। ಜಯಪಾಲ್ ಸಿಂಗ್ ಈ ಬಗ್ಗೆ ಓದಿರುವಿರಿ.... ಮುಂದೆ.....

ಕನ್ನಡಕ್ಕೆ: ವಿಶ್ವ ಕುಂದಾಪುರ

ನಾನು ಚೆಲುವೆಯರ ಆರಾಧಕ. ಆ ಮೋಹನಾಂಗಿಯ ಕೂದಲು ಅಂದವಾಗಿತ್ತು. ನಾನು ಜೀವನವಿಡೀ ಕಂಡ ಭಾರತೀಯ ಮಹಿಳೆಯ ಮಮತೆಯೆಂಬ ಮಾರ್ದವತೆ ಈ ಮೋಹನಾಂಗಿಯ ಉದ್ದೇಶ ಅರಿತ ಮೇಲೆ ಮಂಜಿನಂತೆ ಕರಗಿ ಹೋದಂತೆ ಭಾಸವಾಯಿತು. ಅದೊಂದು ಭಯಾನಕ ಅನುಭವವಾಯಿತು. ರಾಕ್ಷಸಿಯೊಬ್ಬಳು ಸ್ವತಃ ಮಕ್ಕಳನ್ನೇ ನುಂಗಿ ನೀರು ಕುಡಿದಂತೆನಿಸಿತು. ಆ ಸ್ತ್ರೀಯ ಕಿವಿಯಲ್ಲಿ ನೇತಾಡುತ್ತಿದ್ದ ದೊಡ್ಡ ರಿಂಗು ನೇಣು ಕುಣಿಕೆಯಂತೆ ಭಾಸವಾಯಿತು. ಅದರ ರಿಂಗಣದ ಸದ್ದನ್ನು ನನ್ನ ಹೃದಯ ಬಡಿತದಲ್ಲಿ ಕೇಳಬಹುದಿತ್ತು. ನಾನು ಬೆವೆತು ಒದ್ದೆಯಾಗಿ ಹೋದೆ. ಕಾಲ ಕೆಳಗಿನ ಭೂಮಿ ಕುಸಿದಂತೆನಿಸಿತು.

ಪ್ಯಾರಿ ಹೋಟೇಲ್‌ನ ಚಾಂಡಿಯ ಕೋಣೆಯಲ್ಲಿ ಮಧ್ಯರಾತ್ರಿಯಲ್ಲಿ ನನ್ನ ಸಹೋದ್ಯೋಗಿಗಳನ್ನು ಒಟ್ಟು ಸೇರಿಸಿದೆ. ಚಾಂಡಿ ಆ ಸಂಜೆ ಅಲ್ಲಿರಲಿಲ್ಲ. ವಾಯುಪಡೆಯ ಸಿಖ್ ಅಧಿಕಾರಿಯೊಬ್ಬ ಸಮಸ್ಯೆಯ ಪರಿಹಾರಕ್ಕೆ ಉತ್ತಮ ಸಲಹೆಯೊಂದನ್ನು ಮಂಡಿಸಿದ.

"ಜೈ! ನೀನು ತಕ್ಷಣವೇ ಪಡ್ರೆಯ ಮನೆಗೆ ಹೋಗಬೇಕು. ಆಕೆ ನೀಡಿದ ಪತ್ರದಲ್ಲಿ ಸಾಮ್ರಾಜ್ಯದ ವಿರುದ್ಧ ಪಿತೂರಿ ಹೂಡುವಂಥ ಅಂಶಗಳು ಇರುವುದರಿಂದ ಅದನ್ನು ಪೋಲೀಸರಿಗೆ ನೀಡುವುದಾಗಿ ಆಕೆಗೆ ಹೇಳಬೇಕು. ಇದೊಂದು ಹೀನ ಅಪರಾಧ. ಪೋಲೀಸರಿಗೆ ಒಪ್ಪಿಸುವುದಾಗಿ ಆಕೆಯನ್ನು ಹೆದರಿಸು" ಎಂದು ಆ ಅಧಿಕಾರಿ ಹೇಳಿದ.

ನಾನು ಮುಂಜಾವು ಮೂರುಗಂಟೆ ವೇಳೆಗೆ ಪಡ್ರೆ ಮನೆ ತಲುಪಿದೆ. ಮನೆಯ ಆವರಣದ ಹೊರಗಡೆ ಇಬ್ಬರು ಸಹೋದ್ಯೋಗಿಗಳು ಗುಂಡು ತುಂಬಿದ್ದ ಪಿಸ್ತೂಲ್ ಹಿಡಿದು ಕಾವಲು ನಿಂತಿದ್ದರು. ನಮ್ಮ 'ನಿಲುವನ್ನು' ಆಕೆ ಒಪ್ಪದಿದ್ದರೆ ಅವಳನ್ನು ಮುಗಿಸಲು ನಾವು ನಿರ್ಧರಿಸಿದ್ದೆವು.

"ತರುಣಿಯೇ, ನೀನೊಂದು ತಪ್ಪು ಮಾಡಿದ್ದೀಯಾ. ನೀನು ತಪ್ಪಾಗಿ ಪತ್ರವನ್ನು ನನಗೆ ಕೊಟ್ಟಿರುವೆ. ನೀನು ತಪ್ಪು ಮಾಡಿರುವುದು ಮಾತ್ರವೇ ಅಲ್ಲದೆ ವಿಧೇಯತೆಯಿಂದ ಸಾಮ್ರಾಟನ ಸೇವೆ ಮಾಡಿದ ಕುಟುಂಬವೊಂದರ ಅಧಿಕಾರಿಯ ವಿಧೇಯತೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿರುವಿ. ನಿನ್ನನ್ನು ಪೋಲೀಸರಿಗೆ ಒಪ್ಪಿಸಬೇಕಾಗುತ್ತದೆ, ಮಿಸ್!"

ನನ್ನ ಮಾತಿನಿಂದ ಒಂದಿಷ್ಟೂ ಬೆದರಿದಂತೆ ಕಾಣಲಿಲ್ಲ ಆ ಬೆಡಗಿ. "ನಾನು ತಪ್ಪು ಮಾಡಿರಬಹುದು. ಲೆಫ್ಟಿನೆಂಟ್ 'ಎಕ್ಸ್' ನೀಡಿದ ಕವರ್‌ನ ಒಳಗಡೆ ಏನಿತ್ತೆಂಬುದು ನನಗೆ ಗೊತ್ತಿರಲಿಲ್ಲ. ಏನೇ ಇರಲಿ, ಆ ಪತ್ರವನ್ನು ನನಗೇ ಕೊಡಿ ಅದನ್ನು ಲೇ 'ಎಕ್ಸ್'ಗೆ ವಾಪಸು ಕೊಡುತ್ತೇನೆ. ಒಬ್ಬ ಮುಗ್ಧ ಭಾರತೀಯ ಹುಡುಗಿಗೆ ಮುಜುಗರ ಉಂಟುಮಾಡಲು ಪತ್ರವನ್ನು ಪೋಲೀಸರ ವಶಕ್ಕೆ ಏಕೆ ಒಪ್ಪಿಸುವಿರಿ?" ಎಂದಳಾಕೆ.

"ಮಹಿಳೆಯರನ್ನು ಗೌರವಿಸಲು ತರಬೇತಾದ ಅಧಿಕಾರಿ ನಾನಲ್ಲ. ನಾನು ನಿನ್ನನ್ನು ಪೋಲೀಸರ ಕೈಗೆ ಒಪ್ಪಿಸುವುದಿಲ್ಲ. ಆದರೆ ನನ್ನ ಕಮಾಂಡಿಂಗ್ ಆಫೀಸರ್‌ಗೆ ನಿಶ್ಚಿತವಾಗಿಯೂ ಈ ವಿಷಯವನ್ನು ತಿಳಿಸುತ್ತೇನೆ" ಎಂದೆ.

ಕ್ಯಾಂಪ್ ಅಡ್ಜುಟೆಂಟ್‌ಗೆ ವಿಷಯ ತಿಳಿಸಿ ಪತ್ರವನ್ನು ಒಪ್ಪಿಸಿದೆ. ಸೇನೆಯ ಸಮವಸ್ತ್ರದಲ್ಲಿರುವ ಈ ಟೀ ಪ್ಲಾಂಟರ್ ನನ್ನನ್ನು ತುಂಬಾ ದ್ವೇಷಿಸುತ್ತಿದ್ದ.

ಆಘಾತ ಹಾಗೂ ಕಳವಳಗೊಂಡ ಆ ಅಧಿಕಾರಿ ಮಹಿಳೆಯ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದ. ನಾನು ನಿದ್ದೆ ಮಾಡಬಹುದೆಂದು ಹೇಳಿದ.

ಮರುದಿನ ಬೆಳಗ್ಗೆ 10 ಗಂಟೆಗೆ ಅಡ್ಜುಟೆಂಟ್ ಕಛೇರಿಗೆ ಹೋಗಿ ಆ ಸ್ತ್ರೀಯನ್ನು ಬಂಧಿಸಲಾಗಿದೆಯೇ ಎಂದು ಪರಿಶೀಲಿಸಿದೆ.

"ಓಹ ವರ್ಮಾ, ಆಕೆ ಕಲ್ಕತ್ತಾದ ಗೌರವಾನ್ವಿತ ಕುಟುಂಬವೊಂದರ ಹುಡುಗಿ. ಆಕೆಗೆ ಯಾರೋ ಬುದ್ಧಿವಂತರು ಮೋಸ ಮಾಡಿದ್ದಾರೆ. ಇದು ಏನೇನೂ ಅಲ್ಲ. ಈ ದಿನಗಳಲ್ಲಿ ಇಂಥ ವಿಷಯಗಳು ಹರಡುತ್ತಲೇ ಇರುತ್ತವೆ. ಇಂಥ ನಾನ್ಸೆನ್ಸ್‌ಗಳನ್ನು ನಂಬಬೇಡ" ಎಂದು ಅಧಿಕಾರಿ ಹೇಳಿದ.

ಹೀಗೆ ಆಗುತ್ತದೆಂದು ನನಗೆ ಗೊತ್ತಿತ್ತು. ನಿಜ ಹೇಳಬೇಕೆಂದರೆ ಅಡ್ಜುಟೆಂಟ್ ಪಡ್ರೆಯ ಮನೆಗೆ ಹೋಗಿ ವಿಷಯವನ್ನು ಅಲ್ಲಿಯೇ ಇತ್ಯರ್ಥಪಡಿಸಿದ್ದ.

ನಾನು ಲೆಫ್ಟಿನೆಂಟ್ 'ಎಕ್ಸ್' ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಈ ಬುದ್ಧಿವಂತ ದೇಶಾಭಿಮಾನಿ, ಸಮಚಿತ್ತದ, ಗಂಭೀರ ಮನುಷ್ಯ ಸಂಘಟನೆಯ ಪಿತೂರಿ ನಿಯಮಗಳನ್ನು ಪಾಲಿಸಿದ್ದ. ಆತ ತನ್ನ ನಿಜವಾದ ಹೆಸರನ್ನು ಹಾಗೂ ಯುನಿಟ್‌ನ ಹೆಸರನ್ನು ಈ ಮಹಿಳೆಗೆ ಹೇಳಿರಲಿಲ್ಲ.

ಮರುದಿನ ಬೆಳಗ್ಗೆ ಅತಿಶೀಘ್ರ ಸಂಪರ್ಕಸಾಧನದ ಮೂಲಕ ಲೆ। ಎಕ್ಸ್‌ಗೆ ಸಂದೇಶ ರವಾನಿಸಿ ಈ 'ಹೊಸ ಶೋಧ'ದಿಂದ ದೂರ ಉಳಿಯುವಂತೆ ಹಾಗೂ ಇನ್ನು ಮುಂದೆ ಹೆಚ್ಚು ಜಾಗ್ರತೆಯಿಂದ ಇರುವಂತೆ ಸೂಚಿಸಲಾಯಿತು. ಯುದ್ಧದ ತೀವ್ರ ಕಲರವದಿಂದಾಗಿ ಲೆ। ಎಕ್ಸ್‌ರನ್ನು ಮುಂದೆ ಯಾವತ್ತೂ ಕಂಡುಹಿಡಿಯಲಾಗಲಿಲ್ಲ. ಈ ಮೋಹನಾಂಗಿ ಪ್ರತಿದಿನವು ಗ್ರೇಟ್ ಈಸ್ಟರ್ನ್ ಹೋಟೇಲ್‌ಗೆ ಬಂದು ಅಲ್ಲಿಗೆ ಭೇಟಿ ನೀಡುವ ಭಾರತೀಯ ಅಧಿಕಾರಿಗಳ ಬಳಿ ತೆರಳಿ ಮೊಸಳೆ ಕಣ್ಣೀರು ಸುರಿಸುತ್ತಾ ಲೆಫ್ಟಿನೆಂಟ್ ಎಕ್ಸ್ ಬಗ್ಗೆ ವಿಚಾರಿಸುತ್ತಿದ್ದಳು. ಲೆ। ಎಕ್ಸ್‌ರ ನಿಜವಾದ ಹೆಸರಾಗಲಿ ಯುನಿಟ್ ಹೆಸರಾಗಲೀ ಆಕೆಗೆ ಗೊತ್ತೇ ಇರಲಿಲ್ಲ.

ಲಿಬ್ಯಾ ಮರುಭೂಮಿಯಲ್ಲಿ ಭಾರತೀಯ ಬಂಡಾಯ....

"ಆತ ತನ್ನ ಜೀವನವನ್ನು ಪೂರ್ತಿ ಹಾಳು ಮಾಡಿದನು" ಎಂದು ಈ ಮಾಯಾಂಗನೆ ಹಲುಬಿದಳು. ಕರುಣಾಮಯಿ ಭಾರತೀಯರು ಆಕೆಯ ಸ್ಥಿತಿಯನ್ನು ಕಂಡು ಮರುಗಿರಬಹುದು. ಈಗ ಭಾರತೀಯ ಸೇನೆಯಲ್ಲಿ ಒಬ್ಬ ಕರ್ನಲ್ ಆಗಿರುವ ಲೆಫ್ಟಿನೆಂಟ್ ಎಕ್ಸ್ ತಮ್ಮ ಆ ಅವಧಿಯ ನೆನಪುಗಳನ್ನೇನಾದರೂ ಬರೆದಿದ್ದೇ ಆದಲ್ಲಿ ಈ ಮಹಿಳೆಯ ಪ್ರಸ್ತಾವ ಪ್ರಧಾನವಾಗಿ ಆ ಬರಹದಲ್ಲಿ ಖಂಡಿತಕ್ಕೂ ಇದ್ದೇ ಇರುತ್ತದೆ. ನನಗೆ ಗೊತ್ತಿರುವ ಈ ಮಹಿಳೆಯ ಗುರುತನ್ನು ಒಂದಲ್ಲ ಒಂದು ದಿನ ಬಹಿರಂಗ ಪಡಿಸುವಂತೆ ಈ ಅಂಕಣದ ಮೂಲಕ ನಾನು ಲೆ. ಎಕ್ಸ್‌ರಿಗೆ ಮನವಿ ಮಾಡುತ್ತೇನೆ.

ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರ ಬಾಡಿಗೆ ಸೈನಿಕರಿಗಾಗಿ ಭಾಗವಹಿಸಿದ ಭಾರತೀಯ ಸೈನಿಕರು ಯುದ್ಧ ಕಾಲದಲ್ಲಿ ಲಿಬ್ಯಾ ಮರುಭೂಮಿಯಲ್ಲಿ ಬ್ರಿಟಿಷರ ವಿರುದ್ಧ ಬಂಡಾಯದ ಕಹಳೆಯೂದಿದರು. ಚಾಲಕರಿಗೆ ಎಸಗಿದ ತಾರತಮ್ಯದ ವಿರುದ್ಧ ಅತೃಪ್ತಿಯ ಕಟ್ಟೆಯೊಡೆಯಿತು. ಅದು ದಂಗೆಯಾಗಿ ಪರಿವರ್ತನೆಗೊಂಡಿತು.

1946 ರಲ್ಲಿ ನಾನು ಭೂಗತನಾಗುವ ಮುಂಚೆ ಕೂಚ್ ಬಿಹಾರ್‌ನ ಆಕೆ ಒಬ್ಬ ರಾಜಕುಮಾರನ ಜತೆ ಕೊಲ್ಕತಾ ರೇಸ್‌ಕೋರ್ಸ್‌ನಲ್ಲಿ ಇದ್ದುದನ್ನು ನೋಡಿದ್ದೆ. ಆಗ ಆಕೆ ತಲೆ ತಿರುಗಿಸಿ ಹೋಗಿದ್ದಳು. ಅವಳೀಗ ವಿವಾಹಿತೆಯಾಗಿದ್ದು ಮಕ್ಕಳೂ ಇದ್ದಾರೆ. ಅವಳು, ಗಂಡ, ಮಕ್ಕಳು, ಮನೆ ಎಲ್ಲವೂ ಚೆನ್ನಾಗಿರಲೆಂದು ನಾನು ಹಾರೈಸುತ್ತೇನೆ. ಆದರೆ ಆಕೆ ಹಾಕಿಕೊಂಡ ದೇಶಪ್ರೇಮದ ಸೋಗು ನನ್ನನ್ನಿಂದು ಅತಿಯಾಗಿ ಕಾಡುತ್ತಿದೆ, ನೋವುಂಟು ಮಾಡುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶದ್ರೋಹಿಗಳೇ ಆಡಳಿತದ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿರುವುದರಿಂದ ಕಾಂಗ್ರೆಸ್ ಹೈಕಮಾಂಡ್‌ಗೆ ಇದು ಕಿರಿಕಿರಿಯ ವಿಷಯ ಅನಿಸದಿರಬಹುದು.

ಆ ಸ್ತ್ರೀ ಅಂಬಾಲಾಕ್ಕೆ ತಂದ ಪತ್ರದಲ್ಲಿ ಒಂದು ಐತಿಹಾಸಿಕ ಸುದ್ದಿಯಿತ್ತು. ಲಿಬ್ಯಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಅದೇ ತಾನೇ ಬಂದ ಭಾರತೀಯ ಸೇನಾ ವಿಭಾಗವೊಂದು (ಡಿವಿಜನ್) ಭಾರತೀಯ ಚಾಲಕರ ಬಂಡಾಯದ ಸುದ್ದಿಯನ್ನು ಹೊತ್ತು ತಂದಿತ್ತು.

1942 ರ ಆರಂಭಿಕ ತಿಂಗಳುಗಳಲ್ಲಿ ಲಿಬ್ಯಾ ಮರುಭೂಮಿಯಲ್ಲಿ ಭಾರತೀಯ ಚಾಲಕರು ವ್ಯಾಪಕವಾಗಿ ಬಂಡಾಯವೆದ್ದಿದ್ದ ಮಾಹಿತಿಯದು. ಬರ್ಮಾದಲ್ಲಿ ಜಪಾನಿಯರು ನಡೆಸುತ್ತಿದ್ದ ದಬ್ಬಾಳಿಕೆ ತಡೆಯುವ ವಿಫಲ ಕಾರ್ಯಾಚರಣೆಗಾಗಿ ಈ ಡಿವಿಜನ್ ಕೊಲ್ಕತಾ ಮೂಲಕ ಹೋಗಿತ್ತು.

ಗ್ರಾಂಡ್ ಹೋಟೆಲ್ ಮತ್ತು ಆಲಿಪುರ ಶಿಬಿರದಲ್ಲಿನ ನಮ್ಮ ಸಂಘಟನೆ ಈ ಬಂಡಾಯದ ಮಾಹಿತಿಯನ್ನು ವಿವರವಾಗಿ ಸಂಗ್ರಹಿಸಿತು. ಮಾಹಿತಿ ಕಲೆ ಹಾಕಲು ಲೆ. ಎಕ್ಸ್ ತುಂಬಾ ಶ್ರಮಪಟ್ಟರು.

ಆಗಷ್ಟೇ ಹುಟ್ಟಿ ಬೆಳೆಯುತ್ತಿದ್ದ ನಮ್ಮ ಸಂಘಟನೆಯ ಜನರು ಯುದ್ಧ ಕರ್ತವ್ಯದ ಮೇಲೆ ಮಧ್ಯಪೂರ್ವಕ್ಕೆ ಹೋಗಿ ಅಲ್ಲಿ ಅತೃಪ್ತ ಭಾರತೀಯ ಸೈನಿಕರನ್ನು ಸಂಘಟಿಸಲು ಆರಂಭಿಸಿದ್ದರು. ಆ ಬಂಡಾಯ ಪ್ರಜ್ಞಾಪೂರ್ವಕವಾಗಿ ಸಂಘಟಿಸಿದ್ದಾಗಿರಲಿಲ್ಲ. ನಾಯಕತ್ವದಲ್ಲಿದ್ದ ಕೆಲವು ಅತ್ಯುತ್ಸಾಹಿ ಜನರು ಮುಷ್ಕರವೊಂದಕ್ಕೆ ಕರೆ ನೀಡಿದ್ದರು. ಅದು ಶೀಘ್ರವೇ ಬಂಡಾಯವಾಗಿ ಪರಿವರ್ತಿತವಾಯಿತು. ಕ್ರಾಂತಿಕಾರಿ ಕಾರ್ಯಾಚರಣೆಯ ದೃಷ್ಟಿಕೋನದಿಂದ ವಿಶ್ಲೇಷಿಸಿದರೆ ಇದೊಂದು ಬೇಜವಾಬ್ದಾರಿ ಕೃತ್ಯವಾಗಿತ್ತು. ಆರಂಭದಿಂದಲೇ ಅದು ವಿಫಲವಾಗುವುದು ಖಚಿತವಾಗಿತ್ತು. ಅದಕ್ಕೆ ಕಾರಣಗಳೇನೆಂಬುದನ್ನು ಇಲ್ಲಿ ವಿವರಿಸಿದ್ದೇನೆ (ಏನಿದ್ದರೂ ಇದೊಂದು ಐತಿಹಾಸಿಕ ಪ್ರಕರಣ).

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜನವರಿ 10, 2003

- ವಿನಾಶಕಾರಿ ರೇಷ್ಮೆ ಆಮದು ನೀತಿಯನ್ನು ವಿರೋಧಿಸಿ ರೇಷ್ಮೆ ಕೃಷಿಕರ ಅಖಿಲ ಭಾರತ ಪ್ರತಿಭಟನಾ ಪ್ರದರ್ಶನ.
  ಕೇಂದ್ರ ರೇಷ್ಮೆ ಮಂಡಳಿ ಎದುರು, ಮಡಿವಾಳ, ಬೆಂಗಳೂರು
  ಮೆರವಣಿಗೆ
  ಎಸ್.ರಾಮಚಂದ್ರನ್ ಪಿಳ್ಳೆ ಎಂ.ಪಿ. ಅಧ್ಯಕ್ಷರು, ಅಖಿಲ ಭಾರತ ಕಿಸಾನ್ ಸಭಾ ಮತ್ತಿತರ ಮುಖಂಡರ ನೇತೃತ್ವ.

ಜನವರಿ 20 ರಿಂದ 25, 2003

- ಕೃಷ್ಣ ಸರ್ಕಾರದ ನೀತಿಗಳ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ.

ಜನವರಿ 23, 2003

- ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶ
  ಟೌನ್‌ಹಾಲ್, ಬೆಂಗಳೂರು
  ಬೆಳಿಗ್ಗೆ 10 ಗಂಟೆಗೆ

ಜನವರಿ 30 ರಿಂದ ಫೆಬ್ರವರಿ 02, 2003

- ಕಟ್ಟಡ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ, ನಾಗರಕೋಯಿಲ್ ತಮಿಳುನಾಡು

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಕೃಷ್ಣ ಸರ್ಕಾರದ ವೈಫಲ್ಯಗಳ ವಿರುದ್ಧ ಸಮರ ಸಾರಿದೆ ಸಿಪಿಐ(ಎಂ). ಜನವರಿ 20-26 ರವರೆಗೆ ಪ್ರಚಾರಾಂದೋಲನ ನಡೆಸಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯವನ್ನು ತಲ್ಲಣಗೊಳಿಸುವ ಕೃಷ್ಣ ಸರ್ಕಾರದ ಸಾಲಗಳ ಬಗ್ಗೆ ವಿವರಿಸಿದ್ದಾರೆ

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಕೃಷ್ಣಾ ಸರ್ಕಾರದ ಮೂರು ವರ್ಷಗಳು

ಕರ್ನಾಟಕದ ಜನತೆಗೆ ಕೊಟ್ಟದ್ದೇನು?

ದೇಶದ ನಂಬರ್ 1 ಮುಖ್ಯಮಂತ್ರಿ ಎಂದು ಕೆಲವು ಆಂಗ್ಲ ಪತ್ರಿಕೆಗಳು ಹಾಡಿ ಹೊಗಳಿವೆ. 1999ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ಕೂಡಲೇ ಕಾಂಗ್ರೆಸ್ಸಿನ ಮುಖ್ಯಮಂತ್ರಿಯಾದ ಎಸ್.ಎಂ.ಕೃಷ್ಣ ಪತ್ರಿಕೆಗಳ ಮುಂದೆ ಕೊಟ್ಟ ಪೋಜುಗಳು ಮುಖ್ಯವಾಗಿ ಈ ಬಿರುದನ್ನು ಪತ್ರಿಕೆಗಳು ಕೊಟ್ಟಿರುವುದಕ್ಕೇ ಕಾರಣವಾಗಿದೆ. ಅಧಿಕಾರಕ್ಕೆ ಬಂದ ಕ್ಷಣವೇ ಅವರು ಬೆಂಗಳೂರಿಗೆ ಬಂಡವಾಳವನ್ನು ಆಹ್ವಾನಿಸುವುದೇ ತಮ್ಮ ಮುಖ್ಯ ಗುರಿಯೆಂದು, ಅದಕ್ಕಾಗಿ ಬೆಂಗಳೂರಿನ ಬಂಡವಾಳಿಗರ ಮನೆ ಬಾಗಿಲಿಗೆ ತಾನೇ ಹೋಗುತ್ತೇವೆಂದು ಮತ್ತು ಬೆಂಗಳೂರನ್ನು ಜಗತ್ತಿನ ಮಾಹಿತಿ ತಂತ್ರಜ್ಞಾನದ ಪ್ರಮುಖ ಕೇಂದ್ರ ಮಾಡುತ್ತೇನೆಂದು ಅವರು ನೀಡಿದ ಹೇಳಿಕೆಗಳು ಒಂದೆಡೆಯಾದರೆ, ಇನ್‌ಫೋಸಿಸ್ ಮಾಹಿತಿ ತಂತ್ರಜ್ಞಾನದ ನಾರಾಯಣ ಮೂರ್ತಿ, ನಂದನ್ ನಿಲೇಕಣಿ, ವಿಪ್ರೋ ಸಂಸ್ಥೆಯ ಅಜೀಜ್ ಪ್ರೇಮ್‌ಜಿ, ಜೈವಿಕ ತಂತ್ರಜ್ಞಾನದ ಕಿರಣ್ ಮಜೂಂದಾರ್ ಇವರುಗಳ ಜೊತೆ ಸಚಿವ ಸಂಪುಟದ ಮಂತ್ರಿಗಳ ಜೊತೆ ಸಮಾಲೋಚನೆ ಮಾಡುವುದಕ್ಕಿಂತ ಹೆಚ್ಚು ಸಮಾಲೋಚನೆ ಮಾಡಿದ್ದು. ಪತ್ರಿಕೆಗಳಲ್ಲಿ ಅದ್ದೂರಿ ಪ್ರಚಾರ ಪಡೆದ ಟಾಸ್ಕ್‌ಫೋರ್ಸ್‌ಗಳಿಗೆ ಈ ಮೇಲೆ ಹೆಸರಿಸಿದ ಕೈಗಾರಿಕೋದ್ಯಮಿಗಳನ್ನು ಅಧ್ಯಕ್ಷರು ಗಳನ್ನಾಗಿ ನೇಮಿಸಿಕೊಂಡಿದ್ದು. ಈ ಕ್ರಮಗಳು ಜನರಲ್ಲಿ ಎಸ್.ಎಂ.ಕೃಷ್ಣ ಏನೋ ಮಾಡ ಹೊರಟಿದ್ದಾರೆ ಎಂಬ ಭಾವನೆ ಮೂಡಿಸಿದವು.



ಪೈಪೋಟಿಗಿಳಿದ ಮುಖ್ಯಮಂತ್ರಿ

ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಜೊತೆ ಸ್ಪರ್ಧೆಗೆ ಇಳಿಯುವಂತೆ ವಿಶ್ವಬ್ಯಾಂಕನ್ನು ಒಲೈಸಿ ಹಲವು ಸಾಲಗಳನ್ನು ಪಡೆಯಲೆತ್ನಿಸಿದ್ದು, ಬಿಲ್‌ಕ್ಲಿಂಟನ್ ಆಹ್ವಾನಿಸಲು, ಮೈಕ್ರೋಸಾಫ್ಟ್ ಕಂಪನಿ ಬೆಂಗಳೂರಿನಲ್ಲಿ ತಳವೂರುವಂತೆ ಮಾಡುವುದು, ನಾಯ್ಡುರವರೊಡನೆ ಸ್ಪರ್ಧೆಗಿಳಿದ್ದದ್ದು. ರಾಷ್ಟ್ರಮಟ್ಟದ ಜಾಗತೀಕರಣ ಪ್ರಿಯ ಆಂಗ್ಲ ಪತ್ರಿಕೆಗಳಿಗೆ ವರ್ಷಗಟ್ಟಲೇ ರೋಚಕವಾದ ಸುದ್ದಿಗಳನ್ನು ಒದಗಿಸಿದವು. ಹೀಗಾಗಿ ಈ ಪತ್ರಿಕೆಗಳು ಮುಖ್ಯಮಂತ್ರಿ ಕೃಷ್ಣರ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದವು.

ಎಸ್.ಎಂ.ಕೃಷ್ಣ ಇಷ್ಟೆಲ್ಲಾ ಪೋಜು ಕೊಡುವುದಕ್ಕೆ ಮುಖ್ಯ ಆಧಾರ ಬೆಂಗಳೂರಿನಲ್ಲಿ ನೆಲೆಗೊಂಡಿರುವ ಸಾಫ್ಟ್‌ವೇರ್ ರಫ್ತು ಉದ್ಯಮ 2001ನೇ ಇಸ್ವಿಯಲ್ಲಿ ಹತ್ತು ಸಾವಿರ ಕೋಟಿಗಿಂತಲೂ ಹೆಚ್ಚು ರಫ್ತು ಆದಾಯ ನೀಡುತ್ತಿರುವ ಬೆಂಗಳೂರು, 2ನೇ ಸ್ಥಾನದಲ್ಲಿರುವ ಚನ್ನೈಗಿಂತಲೂ ಎರಡರಷ್ಟು, ದೂರದಲ್ಲೆಲ್ಲೋ ಇರುವ ಹೈದ್ರಾಬಾದಿಗಿಂತ 5ರಷ್ಟು ಹೆಚ್ಚು ರಫ್ತನ್ನು ನೀಡುತ್ತಿದೆ. ಆದರೆ ಈ ಸಾಫ್ಟ್‌ವೇರ್ ಉದ್ಯಮದ ಬೆಳವಣಿಗೆಗೆ ಎಸ್.ಎಂ.ಕೃಷ್ಣರವರ ಕೊಡುಗೆ ಏನಾದರೂ ಉಂಟೆ? ಎಂದು ಅನ್ವೇಷಣೆ ಮಾಡಿದರೆ ಆಗ ಅವರ ಈ ಮಹತ್ ಸಾಧನೆಯ ಹೂರಣ ಬಯಲಾಗುತ್ತದೆ?

ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ಸ್ ಉದ್ಯಮ ಆರಂಭವಾದದ್ದು 60 ರ ದಶಕದಲ್ಲಿ. ಬೆಂಗಳೂರಿನಲ್ಲಿ ಅನೇಕ ಕೇಂದ್ರ ಸಾರ್ವಜನಿಕ ಉದ್ದಿಮೆಗಳು ನೆಲೆಗೊಂಡಾಗ ವಿಶ್ವಪ್ರಸಿದ್ಧವಾದ ಭಾರತ್ ಎಲೆಕ್ಟ್ರಾನಿಕ್ಸ್ ಲಿ. (ಬಿ.ಇ.ಎಲ್), ಐಟಿಐ, ರಕ್ಷಣಾ ಇಲಾಖೆಯ ಹಲವು ಎಲೆಕ್ಟ್ರಾನಿಕ್ಸ್ ಸಂಶೋಧನಾ ಸಂಸ್ಥೆಗಳು ನೇರವಾಗಿ ಹೆಚ್.ಎ.ಎಲ್, ಹೆಚ್.ಎಂ.ಟಿ, ಬಿ.ಹೆಚ್.ಇ.ಎಲ್ ಮೊದಲಾದ ಹಲವು ಕೇಂದ್ರ ಸರ್ಕಾರಿ ಉದ್ದಿಮೆಗಳಲ್ಲಿ ಅವುಗಳ ಉತ್ಪಾದನೆಯ ಒಂದು ಪ್ರಮುಖ ಭಾಗವಾಗಿ ಬೆಂಗಳೂರಿನಲ್ಲಿ ಒಂದು ಎಲೆಕ್ಟ್ರಾನಿಕ್ಸ್ ಉದ್ಯಮ ವ್ಯಾಪಕವಾಗಿ ಬೆಳೆಯಿತು. ಈ ಕೈಗಾರಿಕೆಗಳಲ್ಲಿ ಹಾಗೂ ಈ ಕೈಗಾರಿಕೆಗಳಿಗೆ ಉಪಕರಣಗಳನ್ನು ತಯಾರಿಸಿ ಒದಗಿಸಿಕೊಡುವ ಸಹಾಯಕ ಖಾಸಗೀ ಘಟಕಗಳಲ್ಲಿ ಸಾವಿರಾರು ಇಂಜಿನಿಯರ್‌ಗಳು ಉತ್ತಮ ತರಬೇತಿ ಹಾಗೂ ಅನುಭವ ಪಡೆದರು. ಈ ಮೂಲ ಸಂಪತ್ತಿನ ಮೇಲೆ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯಮ 80 ರ ದಶಕದಲ್ಲಿಯೇ ಬೇರೂರಿ ದೃಢವಾಗಿ ತಲೆಯೆತ್ತಿ ಬೆಳೆಯಲಾರಂಭಿಸಿತು. ಹೀಗಾಗಿ ಭಾರತದ ಯಾವುದೇ ನಗರಗಳಿಗಿಂತ ಮುಂಗಾಲೋಟದಲ್ಲಿ ಬೆಳವಣಿಗೆ ಸಾಧಿಸಿತು. ಇದರಲ್ಲಿ ಎಸ್.ಎಂ.ಕೃಷ್ಣ ಮಾಡಿದ ಕೆಲಸವೆಂದರೆ ಹೀಗೆ ಬೆಳವಣಿಗೆ ಹೊಂದಿದ ಉದ್ಯಮದ ಮೇಲೆ ಸೂಕ್ತ ಪ್ರಮಾಣದಲ್ಲಿ ತೆರಿಗೆ ವಿಧಿಸಿ ಪಡೆದ ಆದಾಯವನ್ನು ರಾಜ್ಯದ ಹಿಂದುಳಿದ ಪ್ರದೇಶಗಳ ಹಿಂದುಳಿದ ಜನವಿಭಾಗಗಳಿಗೆ ಹಂಚಿಕೆಯಾಗುವಂತೆ ಮಾಡುವುದಕ್ಕೆ ಬದಲಾಗಿ, ಜನಸಾಮಾನ್ಯರಿಂದ ಸಂಗ್ರಹಿಸಿದ ತೆರಿಗೆಯನ್ನು ಈ ಶ್ರೀಮಂತರಿಗೆ ಕೊಡುಗೆಯಾಗಿ ನೀಡುವಂತೆ ಅನೇಕ ತೆರಿಗೆ ವಿನಾಯ್ತಿ ಹಾಗೂ ಸಹಾಯ ಧನಗಳನ್ನು ನೀಡಿದ್ದು. ಅದೇ ರೀತಿ ಜೈವಿಕ ತಂತ್ರಜ್ಞಾನದ ಬಗೆಗಿನ ಅಬ್ಬರಕ್ಕೂ ಬೆಂಗಳೂರಿನಲ್ಲಿ ನೆಲೆ ಗೊಂಡಿರುವ ಅಪಾರ ಸಂಖ್ಯೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಂಶೋಧನ ಸಂಸ್ಥೆಗಳೇ ಕಾರಣ.

ಐಟಿ-ಬಿಟಿಗಳ ಆರ್ಭಟ

ಈ ಐಟಿ-ಬಿಟಿಗಳ ಆರ್ಭಟ ಹಾಗೂ ಪ್ರಚಾರಗಳ ಗುಳ್ಳೆಯ ಹಿಂದೆ ಜನ ಸಾಮಾನ್ಯರನ್ನು ಮುಂದಿನ ಅನೇಕ ದಶಕಗಳ ಕಾಲ ಅಪಾರ ಸಂಕಷ್ಟಕ್ಕೆ ಸಿಲುಕಿಸುವ ದುರ್ನೀತಿಗಳನ್ನು ಮುಚ್ಚಿ ಹಾಕುವ ಕುತಂತ್ರವಿದೆ. ಬೆಂಗಳೂರನ್ನು ಹಾಗೂ ಕರ್ನಾಟಕದ ಇತರ ನಗರಗಳನ್ನು ದೇಶಿ-ವಿದೇಶಿ ಬಂಡವಾಳಿಗರ ಅಭಿರುಚಿ ಅಗತ್ಯಗಳಿಗೆ ತಕ್ಕಂತೆ ಅಣಿ ಮಾಡಲು ಮೇಲ್ಸೇತುವೆ(ಫ್ಲೈ ಓವರ್), ಸುರಂಗಮಾರ್ಗ (ಸಬ್‌ವೇ), ಆರು ದಾರಿಗಳ ಮಹಾ ಹೆದ್ದಾರಿಗಳು ಮುಂತಾದುವುಗಳನ್ನು ನಿರ್ಮಾಣ ಮಾಡಲು ಸಿಕ್ಕಿದೆಡೆಯಿಂದ ಅವರು ಹಾಕಿದ ಷರತ್ತುಗಳನ್ನೆಲ್ಲ ಒಪ್ಪಿ ಸಾಲ ಪಡೆಯಲು ಎಸ್.ಎಂ.ಕೃಷ್ಣ ಮುಂದಾಗಿದ್ದಾರೆ. ಎಸ್.ಎಂ.ಕೃಷ್ಣ ಸರ್ಕಾರದ ಮೊದಲ ಎರಡು ವರ್ಷ ಎಲ್ಲಾ ಮಂತ್ರಿಗಳು ನಿರಂತರವಾಗಿ ಸಾಲದ ಜಪ ಮಾಡಿದ್ದೆ ಮಾಡಿದ್ದು. ವಿಶ್ವ ಬ್ಯಾಂಕಿನಿಂದ ಸಾಲ, ಏಷ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ಸಾಲ, ಜಪಾನ್‌ನಿಂದ ಸಾಲ, ಯುರೋಪಿನಿಂದ ಸಾಲ, ಕೇಂದ್ರ ಸರ್ಕಾರದ ಸಂಸ್ಥೆಗಳಾದ ಹುಡ್ಕೊ, ವಿದ್ಯುತ್, ಹಣಕಾಸು ನಿಗಮದಿಂದ, ನಬಾರ್ಡ್‌ನಿಂದ, ಬಾಂಡ್‌ಗಳ ಮೂಲಕ ಮಾರುಕಟ್ಟೆಯಿಂದ ಹೀಗೆ ಎಲ್ಲೆಡೆಯಿಂದ ಸಾಲಗಳಿಗೆ ಕೈಚಾಚಿದ್ದಾರೆ.


ಎಲ್ಲಾ ಷರತ್ತಿಗೂ ಸೈ!

ಇವುಗಳಲ್ಲಿ ವಿದ್ಯುತ್‌ಗಾಗಿ, ಆರೋಗ್ಯಕ್ಕಾಗಿ, ಕುಡಿಯುವ ನೀರಿಗಾಗಿ ಸಾಲಗಳನ್ನು ನೀಡಲು ವಿಶ್ವ ಬ್ಯಾಂಕ್ ಮೊದಲಾದ ಸಂಸ್ಥೆಗಳು ದೇವೇಗೌಡ ಹಾಗೂ ಜೆ.ಹೆಚ್.ಪಟೇಲ್ ಸರ್ಕಾರದ ಬೆನ್ನು ಬಿದ್ದಿದ್ದವು. ಆದರೆ ಈ ಸಾಲದ ಆಶೆಗೆ ಈ ಸರ್ಕಾರಗಳು ಮನಸೋತು ಈ ಸರ್ಕಾರಗಳ ಮಂತ್ರಿಗಳ ಮನಸ್ಸು ತೂಗುಯ್ಯಾಲೆಯಂತೆ ಆಡಿದರು ಕೂಡ ಈ ಸಾಲಗಳ ಜೊತೆ ಅಂಟಿಕೊಂಡಿರುವ ಷರತ್ತುಗಳ ಭಯದಿಂದಾಗಿ ಕೊನೆಗೆ ಆ ಸಾಲಗಳನ್ನು ಪಡೆಯುವ ಧೈರ್ಯ ಮಾಡಲಿಲ್ಲ. ಆದರೆ ಎಸ್.ಎಂ.ಕೃಷ್ಣ ಸರ್ಕಾರ ಆರಂಭದ ದಿನಗಳಿಂದಲೇ ಯಾವುದೇ ಷರತ್ತಿದ್ದರೂ ಸರಿ ನಮಗೆ ಸಾಲ ಬೇಕೆಂಬಂತೆ ವರ್ತಿಸಿತು. ಕರ್ನಾಟಕ ಏಕೀಕರಣವಾದ 1956ರಿಂದ ಈಚೆಗೆ 99ರ ವರೆವಿಗೂ 43 ವರ್ಷಗಳ ಕಾಲ ಆಳಿದ ಎಲ್ಲಾ ಸರ್ಕಾರಗಳು ತೆಗೆದುಕೊಂಡ ಸಾಲದ ಮೊತ್ತಕ್ಕಿಂತ ಹಲವು ಪಟ್ಟು ಸಾಲವನ್ನು ಎಸ್.ಎಂ.ಕೃಷ್ಣ ಸರ್ಕಾರ ಕೇವಲ ಮೂರು ವರ್ಷಗಳಲ್ಲಿ ತೆಗೆದುಕೊಂಡಿದೆ. ರಸ್ತೆಗಳ ಅಭಿವೃದ್ಧಿಗಾಗಿ 2030 ಕೋಟಿ ರೂ., ಕೆರೆಗಳ ಹೂಳೆತ್ತುವುದಕ್ಕಾಗಿ 980 ಕೋಟಿ ರೂ.ಗಳು, ಗ್ರಾಮೀಣ ನೀರು ಸರಬರಾಜಿಗೆಂದು 4472 ಕೋಟಿ ರೂ, ಜಲಾನಯನಭಿವೃದ್ಧಿಗೆ 500 ಕೋಟಿ ರೂ, ಪುರಸಭೆಗಳನ್ನು ಬಲಗೊಳಿಸಲು 968 ಕೋಟಿ ರೂ., ಬೆಂಗಳೂರಿನ ನೀರುಸರಬರಾಜಿಗೆ 1300 ಕೋಟಿ ರೂ., ವಿದ್ಯುತ್ ಸಾಗಾಣಿಕೆ ಅಭಿವೃದ್ಧಿಗೆ 6000 ಕೋಟಿ ರೂ. ಹೀಗೆ 25 ಸಾವಿರ ಕೋಟಿಗಿಂತಲೂ ಹೆಚ್ಚು ಸಾಲವನ್ನು ರಾಜ್ಯಸರ್ಕಾರ ಪಡೆದಿದೆ. ಮುಂದಿನ ವರ್ಷಗಳಲ್ಲಿ ರಾಜ್ಯ ಸರ್ಕಾರದ ಆದಾಯದ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಕೇವಲ ಬಡ್ಡಿ ಹಾಗೂ ಸಾಲದ ಕಂತಿನ ವೆಚ್ಚವಾಗಿಯೇ ಖರ್ಚಾಗುತ್ತದೆ. ಹೀಗೆ ರಾಜ್ಯದ ವಿವಿಧ ಅಭಿವೃದ್ಧಿ ಯೋಜನೆ ಇರಲಿ ರಾಜ್ಯದ ಜನತೆಗೆ ಶಿಕ್ಷಣ, ಆರೋಗ್ಯ ಹಾಗೂ ವಿವಿಧ ಆಡಳಿತ ಸೇವೆ ಒದಗಿಸಲು ನೇಮಕವಾಗಿರುವ ಸಿಬ್ಬಂದಿಯ ವೇತನಕ್ಕೆ ಕೂಡ ಹಣ ಸಿಗದಂತಹ ಪರಿಸ್ಥಿತಿ ಉಂಟಾಗಲಿದೆ. ಈಗಾಗಲೇ ಸರ್ಕಾರದ ಅಭಿವೃದ್ಧಿಯ ವಿವಿಧ ಯೋಜನೆಗಳಿಗೆ ಗುತ್ತಿಗೆದಾರರು ವೆಚ್ಚ ಮಾಡಿದ ಹಣದ ಬಾಕಿ 1500 ಕೋಟಿ ರೂ ಮಿಕ್ಕಿ ಇದೆ. ಇದರಿಂದಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ.

ಖಜಾನೆ ಖಾಲಿ!

ಈ ಸಾಲಗಳ ಕಂತು ಹಾಗೂ ಬಡ್ಡಿಗಳನ್ನು ಮುಂದಿನ ವರ್ಷಗಳಲ್ಲಿ ತೀರಿಸುವ ಹೊರೆ ಇರುವುದರಿಂದಲೇ ಸರ್ಕಾರಿ ನೌಕರರ ಮೇಲಿನ ವೆಚ್ಚವನ್ನು ತೀವ್ರವಾಗಿ ಕಡಿತಗೊಳಿಸಬೇಕೆಂಬ ವಿಶ್ವಬ್ಯಾಂಕಿನ ಒತ್ತಡದಿಂದಾಗಿ ಹಾರ್ನಳ್ಳಿ ರಾಮಸ್ವಾಮಿ ಸಮಿತಿ ನೇಮಕ ಮಾಡಲಾಯಿತು. ವಿಶ್ವಬ್ಯಾಂಕಿನ ಷರತ್ತುಗಳ ವಿಸ್ತೃತ ಅನುವಾದವನ್ನು 'ಹಾರ್ನಳ್ಳಿ ರಾಮಸ್ವಾಮಿ ವರದಿ' ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಸರ್ಕಾರಿ ನೌಕರರ ಕಡಿತ, ಇಲಾಖೆಗಳ ಕಡಿತ ರಾಜ್ಯಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ತುರ್ತು ಖಾಸಗೀಕರಣ ಇಂತಹ ಎಲ್ಲಾ ನೀತಿಗಳ ಮೂಲವು ಸಾಲ ತೀರಿಸುವ ಒತ್ತಡವೇ ಆಗಿದೆ.

ಪ್ರತಿಯೊಂದು ಕ್ಷೇತ್ರದಲ್ಲಿಯೂ ತೆಗೆದುಕೊಂಡ ಸಾಲಗಳ ಷರತ್ತುಗಳು ಆಯಾ ಕ್ಷೇತ್ರಗಳಲ್ಲಿ ಸರ್ಕಾರ ಒದಗಿಸುವ ಸೇವೆಗಳು ಎಂದರೆ, ಸೇವೆಗಳ ಶುಲ್ಕ ಅಧಿಕ ದರಗಳ ಏರಿಕೆಗೆ ಕಾರಣವಾಗಿದೆ. ಅಂದರೆ ವಿದ್ಯುತ್ ದರ, ಶಿಕ್ಷಣಶುಲ್ಕ, ಆಸ್ಪತ್ರೆಗಳ ಶುಲ್ಕ, ಕುಡಿಯುವ ನೀರಿನ ದರ, ನೀರಾವರಿ ದರ ಈ ರೀತಿ ಬೆಲೆ ಏರಿಕೆಗಳ ಕಾರಣವಾಗಿದೆ. ಆಯಾ ರಂಗಗಳಲ್ಲಿ ಶೀಘ್ರ ಖಾಸಗೀಕರಣಕ್ಕೆ ಒತ್ತಡ ಹೇರಲಾಗುತ್ತಿದೆ. ಇದು ಕರ್ನಾಟಕದ ರೈತರ ಮೇಲೆ ಕೃಷಿಯ ಮೇಲೆ ಕೈಗಾರಿಕೆಗಳ ಮೇಲೆ ಮತ್ತು ಜನಸಾಮಾನ್ಯರ ಮೇಲೆ ಅಪಾರ ಸಂಕಷ್ಟಗಳನ್ನು ಹೇರುತ್ತಿದೆ. ಈಗಾಗಲೇ ಜನಸಾಮಾನ್ಯರಲ್ಲಿ ಅತೃಪ್ತಿಯ ಹೊಗೆಯಾಡುತ್ತಿದೆ. ಹೀಗೆ ದೇಶದ ಕೆಲ ಪತ್ರಿಕೆಗಳಲ್ಲಿ ನಂಬರ್ 1 ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಜನರ ಮನಸ್ಸಿನಲ್ಲಿ ವೇಗವಾಗಿ ಕೆಳಗಿಳಿಯುತ್ತಿದ್ದಾರೆ.



ತೋಟ ಕಾರ್ಮಿಕರ ಯಶಸ್ವಿ ಸಮ್ಮೇಳನ

ಪ್ಲಾಂಟೇಶನ್ ಹಾಗೂ ಕಾರ್ಮಿಕರನ್ನು ಉಳಿಸಲು ಹೋರಾಟಕ್ಕೆ ಪಣ

ಚಿಕ್ಕಮಗಳೂರಿನಲ್ಲಿ ಕಳೆದ ಡಿಸೆಂಬರ್ 26ರಿಂದ 28ರವರೆಗೆ ನಡೆದ ಆಲ್ ಇಂಡಿಯಾ ಪ್ಲಾಂಟೇಷನ್ ವರ್ಕರ್ಸ್ ಫೆಡರೇಷನ್‌ದ 8ನೇ ರಾಷ್ಟ್ರೀಯ ಸಮ್ಮೇಳನ ನಿರೀಕ್ಷೆಗೂ ಮೀರಿ ಅತ್ಯಂತ ಯಶಸ್ವಿಯಾಗಿದೆ.


ಚಿಕ್ಕಮಗಳೂರು ಕಾಫಿ ನಗರಕ್ಕೆ ರಾಷ್ಟ್ರದ ವಿವಿಧ ತೋಟಗಳಿರುವ ರಾಜ್ಯಗಳಾದ ಪಶ್ಚಿಮ ಬಂಗಾಳ, ತ್ರಿಪುರ, ಅಸ್ಸಾಂ, ಕೇರಳ, ತಮಿಳುನಾಡು, ಆಂಧ್ರಪ್ರದೇಶದಿಂದ ಸುಮಾರು 250 ಪ್ರತಿನಿಧಿಗಳು ಭಾಗವಹಿಸಿದ್ದು, ಕಾರಣಾಂತರದಿಂದ ಅಂಡಮಾನ್ ಮತ್ತು ರಾಜಸ್ಥಾನದಿಂದ ಬರಬೇಕಾದ ಪ್ರತಿನಿಧಿಗಳು ಬರಲಿಲ್ಲ.

ಸಮ್ಮೇಳನ ಪ್ರಾರಂಭಕ್ಕೆ ಮೊದಲು ಡಿಸೆಂಬರ್ 26 ರಂದು ಬೆಳಿಗ್ಗೆ 11 ಗಂಟೆಗೆ ಎ.ಐ.ಪಿ.ಡಬ್ಲ್ಯು.ಎಫ್‌ನ ಕಾರ್ಯಾಧ್ಯಕ್ಷರಾದ ಆನಂದ ಪಾಠಕ್ (ಮಾಜಿ ಸಂಸತ್ ಸದಸ್ಯರು) ಧ್ವಜಾರೋಹಣ ಮಾಡಿದ ನಂತರ ಹುತಾತ್ಮರ ಸ್ಮಾರಕಕ್ಕೆ ಪುಷ್ಪಾಂಜಲಿ ಅರ್ಪಿಸಿ ಸಮ್ಮೇಳನದ ಉದ್ಘಾಟಿಸಿದರು. ಅಗಲಿದ ಸಂಗಾತಿಗಳ ನಿಧನಕ್ಕೆ ಸಮ್ಮೇಳನ ಶ್ರದ್ಧಾಂಜಲಿ ಅರ್ಪಿಸಿತು. ಆನಂದ ಪಾಠಕ್ ಅಧ್ಯಕ್ಷತೆ ವಹಿಸಿದ್ದು, ಸ್ವಾಗತ ಸಮಿತಿಯ ಪರವಾಗಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಎಚ್.ಎಂ.ಕಾಳಯ್ಯನವರು ಸ್ವಾಗತಿಸಿದರು. ಸಿ.ಐ.ಟಿ.ಯು ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಪ್ರೊ. ಎಂ.ಕೆ.ಪಂಧೆ ಉದ್ಘಾಟನಾ ಭಾಷಣ ಮಾಡಿದರು.

ಪ್ರತಿನಿಧಿ ಸಮ್ಮೇಳನದ ಮುಂದೆ ಎಐಪಿಡಬ್ಲ್ಯುಎಫ್‌ನ ಪ್ರಧಾನ ಕಾರ್ಯದರ್ಶಿ ಮಂಡಿಸಿದ ಕಾರ್ಯಚಟುವಟಿಕೆಗಳ ವರದಿಯ ಮೇಲೆ ಪ್ರಾರಂಭವಾದ ಚರ್ಚೆ 27ರ ಸಂಜೆಯವರೆಗೆ ಹಾಜರಿದ್ದ ಪ್ರತಿನಿಧಿಗಳ ಪರವಾಗಿ ಆಯಾ ರಾಜ್ಯಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ದಿನಾಂಕ 27-12-2002 ರಂದು ಚರ್ಚಿಸಿ ಎಐಪಿಡಬ್ಲ್ಯುಎಫ್



ಪ್ರಧಾನ ಕಾಯದರ್ಶಿ ಲಾಲಾಜಿ ಬಾಬು ಉತ್ತರ ನೀಡಿದ ನಂತರ ಎಂ.ಕೆ.ಫಂದೆ ಸಮಾರೋಪ ಭಾಷಣ ಮಾಡಿದರು. ಸಮ್ಮೇಳನ ನಲವತ್ತೆರಡು ಸದಸ್ಯರ ಕೇಂದ್ರ ಸಮಿತಿಯನ್ನು ಚುನಾಯಿಸಿದ್ದು, ಅದರಲ್ಲಿ 16 ಪದಾಧಿಕಾರಿಗಳನ್ನು ಚುನಾಯಿಸಲಾಯ್ತು.



ನೂತನವಾಗಿ ಚುನಾಯಿತರಾದ ನಾಲ್ವರು ಉಪಾಧ್ಯಕ್ಷರಲ್ಲಿ ಕರ್ನಾಟಕದಿಂದ ವಿ. ಸುಕುಮಾರ್‌ರವರು ಒಬ್ಬರಾಗಿದ್ದಾರೆ. ಅದಲ್ಲದೆ ಎಚ್.ಎಂ.ಕಾಳಯ್ಯ ಹಾಗೂ ಅಂತೋನಿಯಮ್ಮ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆ ಆಗಿದ್ದಾರೆ.

ಸಮ್ಮೇಳನ ಅನೇಕ ನಿರ್ಣಯಗಳನ್ನು ಅಂಗೀಕರಿಸಿದೆ.

ಕೆಲವೇ ದಿನಗಳ ಹಿಂದೆ ಚಿಕ್ಕಮಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶ ಸಂಘಪರಿವಾರದ ದತ್ತಜಯಂತಿಯ ಹಿನ್ನೆಲೆಯಲ್ಲಿ ಕೇಸರಿಮಯವಾಗಿಸಿದ್ದರು. ನಮ್ಮ ಸಂಗಾತಿಗಳನೇಕರು ಹಗಲಿರುಳು ನಿದ್ದೆ, ಊಟ ಬಿಟ್ಟು ದುಡಿಯುವ ಮೂಲಕ ಇಡೀ ನಗರವನ್ನು ಕೆಂಪನ್ನಾಗಿ ಮಾಡಲು ಸಾಧ್ಯವಾಯ್ತು. ನೂರಾರು ಕೆಂಪು ಬ್ಯಾನರ್‌ಗಳು ವಿಶಾಲವಾದ ಗೋಡೆಬರಹ, ಹತ್ತಾರು ಸಾವಿರ ಬಂಟಿಂಗ್ಸ್, ಸಹಸ್ರಾರು ಪೋಸ್ಟರುಗಳು ಚಿಕ್ಕಮಗಳೂರು ನಗರಕ್ಕೆ ಹೊಸ ಶೋಭೆಯನ್ನು ತಂದುಕೊಟ್ಟವು.

ಬೃಹತ್ ಬಹಿರಂಗ ಸಭೆ

28 ರ ಬಹಿರಂಗ ಸಭೆಗೆ ಹಾಸನ ಜಿಲ್ಲೆಯ ಅನೇಕ ತೋಟಗಳಿಂದ ಕಾಫಿ ಕ್ಯೂರಿಂಗ್‌ಗಳಿಂದ, ಪೈಪ್ ಫ್ಯಾಕ್ಟರಿಯಿಂದ, ಚಿಕ್ಕಮಗಳೂರಿನ ಕಾಫಿ ಕ್ಯೂರಿಂಗ್ ತೋಟಗಳು, ಹಂಚಿನ ಕಾರ್ಖಾನೆಯಿಂದ ಹೀಗೆ ಮೂಲೆ ಮೂಲೆಗಳಿಂದ ನಮ್ಮ ನಿರೀಕ್ಷೆಗಳಿಗೂ ಮೀರಿ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಲಾರಿಗಳಲ್ಲಿ, ಬಸ್ಸುಗಳಲ್ಲಿ, ಟೆಂಪೋ, ಜೀಪ್ ಮೊದಲಾದವುಗಳಲ್ಲಿ ಬಂದು ಸೇರಿದರು. ಹಾಸನದಿಂದ ಬಂದ ಮಹಿಳೆಯರು ಕೆಂಪು ಸಮವಸ್ತ್ರ ತೊಡುವ ಮೂಲಕ ಮೆರವಣಿಗೆಗೆ ಕಳೆ ತಂದುಕೊಟ್ಟರು.

ಚಿಕ್ಕಮಗಳೂರಿನ ತಾಲೂಕು ಕಛೇರಿಯಿಂದ ಹೊರಟ ಮೆರವಣಿಗೆ ಹೊರಟಿದ್ದು ಹಿಂದೆ ಕಾರ್ಮಿಕರ ಬೃಹತ್ ರ್‍ಯಾಲಿ ನಡೆಯಿತು. ಕೇಸರಿಮಯವನ್ನೇ ಕಂಡ ಚಿಕ್ಕಮಗಳೂರು ನಗರದ ಜನತೆ ಕೆಂಪು ಬಾವುಟ ಹಿಡಿದ ದುಡಿಯುವ ವರ್ಗದ ಶಿಸ್ತುಬದ್ಧ ಮೆರವಣಿಗೆಯನ್ನು ಕಣ್ಣು ಕಣ್ಣು ಬಿಟ್ಟು ವೀಕ್ಷಿಸಿದರು. ಆಜಾದ್ ಪಾರ್ಕ್‌ನಲ್ಲಿ ನಡೆದ ಬಹಿರಂಗ ಸಭೆ ಅಭೂತಪೂರ್ವವಾಗಿತ್ತು. ಬಹಿರಂಗ ಸಭೆಯಲ್ಲಿ ಲಾಲಾಜಿ ಬಾಬು, ಎಂ.ಕೆ.ಪಂದೆ, ಹೆಚ್.ಹೇಮಲತಾ, ಜೆ.ಹೆಚ್.ಚಂದ್ರನ್, ಕೆ.ಆರ್.ಶ್ರಿಯಾನ್ ಮೊದಲಾದ ಮುಖಂಡರು ಭಾಷಣ ಮಾಡಿದರು. ವಿ.ಸುಕುಮಾರ್ ಅಧ್ಯಕ್ಷತೆ ವಹಿಸಿದ್ದರು

ಅಖಿಲಭಾರತ ಸಮ್ಮೇಳನವನ್ನು ಇಲ್ಲಿ ಮಾಡಲು ಹೇಗೆ ಸಾಧ್ಯ, ವಿಫಲವಾಗುತ್ತದೆಯೆಂದು ನಿರೀಕ್ಷಿಸಿದವರ ನಿರೀಕ್ಷೆ ಹುಸಿಯಾಗುವಂತಾಯ್ತು. ಈ ಸಮ್ಮೇಳನ ಆದದ್ದಕ್ಕೆ ಅನೇಕರು ನಮ್ಮನ್ನು ಪ್ರಶಂಸೆ ಮಾಡಿದರು. ಸಮ್ಮೇಳನದ ತೀರ್ಮಾನಗಳನ್ನು ಜ್ಯಾರಿಗೊಳಿಸುವ ಮತ್ತು ಸಂಘಟನೆಯನ್ನು ಬಲಿಷ್ಠಗೊಳಿಸುವ ಮಹತ್ತರ ಜವಾಬ್ದಾರಿ ನಮ್ಮ ಮುಂದೆ ಇದೆ. ಸದಾ ನಮ್ಮ ಸಿಐಟಿಯು ಕೆಂಪು ಬಾವುಟ ತೋಟ ಪ್ರದೇಶಗಳಲ್ಲಿ ಹಾರುವಂತಾಗಲು ನಾವು ಶ್ರಮ ವಹಿಸಿ ದುಡಿಯೋಣ

- ವಿ.ಸುಕುಮಾರ್

ಜನಮನ ಹೊಕ್ಕ - ಸಾಂಸ್ಕೃತಿಕ ಜಾಥಾ

ಭಾರತದಲ್ಲೆ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕದಲ್ಲೀಗ ಪ್ಲಾಂಟೇಶನ್ ಕಾರ್ಮಿಕರ ಅಖಿಲಭಾರತ ಸಮ್ಮೇಳನ ನಡೆಯುತ್ತಿದೆ. ಅದೂ ಕಾಫಿಯ ತೊಟ್ಟಿಲು ಎಂದು ಸುಪ್ರಸಿದ್ಧವಾಗಿರುವ ಚಿಕ್ಕಮಗಳೂರಿನಲ್ಲೇ. 1956ರಿಂದಲೂ ಪ್ಲಾಂಟೇಶನ್ ಕಾರ್ಮಿಕರ ಸಂಘಟಿತ ಚಳುವಳಿ ಆರಂಭಗೊಂಡು ರಕ್ತ ಬೆವರು ಬಸಿದು, ಬಂಗಾರದ ಬೆಳೆ ತೆಗೆದರೂ ಗುಲಾಮರಾಗಿಯೇ ಬಾಳುತ್ತಿದ್ದವರ ಬದುಕಿನಲ್ಲಿ ಭರವಸೆ, ಸ್ವಾಭಿಮಾನದ ಛಲದ ಬಲ ತುಂಬಿದ ಇತಿಹಾಸವೂ ಇಲ್ಲಿನ ಸಿ.ಐ.ಟಿ.ಯು ಕಾರ್ಮಿಕರ ಸಂಘಕ್ಕಿದೆ. ಹಾಗೆಯೇ ದೇಶದಲ್ಲಿ ಅಖಿಲಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಷನ್ (ಸಿ.ಐ.ಟಿ.ಯು)ಗೆ ತ್ಯಾಗ, ಬಲಿದಾನಗಳ ಉಜ್ವಲ ಪರಂಪರೆಯೇ ಇದೆ. ಇಂತಹ ಚಳುವಳಿಯ ಸಮ್ಮೇಳನವನ್ನು ಸಂಘಟಿಸಬಹುದೇ ಎಂಬ ಆಹ್ವಾನವನ್ನು ಕೇಂದ್ರದ ನಾಯಕತ್ವ ನೀಡಿದಾಗ ಅತ್ಯಂತ ಸಂತಸದಿಂದ ಒಪ್ಪಿಕೊಂಡಿತು ಇಲ್ಲಿಯ ಘಟಕ. ನಿಮ್ಮ ಜೊತೆಗೆ ಇದ್ದೇವೆ ಎಂದರು ಸಿ.ಐ.ಟಿ.ಯು ರಾಜ್ಯ ನಾಯಕತ್ವ. 'ದೇಶದ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಅದೂ ಸಾಮರಸ್ಯದ ಕೇಂದ್ರವಾಗಿದ್ದು ಬಾಬಾಬುಡನ್ ದತ್ತಸ್ವಾಮಿ'ಯ ಗುಹೆಯನ್ನು ವಿವಾದದ ಕಣವಾಗಿಸಿ, ಮತ್ತೊಂದು ಅಯೋಧ್ಯೆ ಸೃಷ್ಟಿಸಲು, ತನ್ಮೂಲಕ ಕರ್ನಾಟಕವನ್ನು ಒಳಗೊಂಡು ಇಡೀ ದಕ್ಷಿಣ ಭಾರತವನ್ನೇ ಇನ್ನೊಂದು ಕುಂಡವನ್ನಾಗಿಸುವ ಕೋಮುವಾದಿಗಳ ಬರ್ಬರ ಪಿತೂರಿಗಳು ನಡೆದಿರುವಾಗ, ದೇಶದ ಐಕ್ಯತೆ ರಕ್ಷಿಸುವ ಅಗ್ರಗಣ್ಯ ದುಡಿವವರ್ಗದ ಮುಂದೆ ಇಂತಹ ಸವಾಲಿರುವಾಗ ಈ ಕಾರ್ಮಿಕರ ಸಮ್ಮೇಳನ ಸಂಘಟಿಸುವ ಆಹ್ವಾನ ನಮಗೆ ತಾನಾಗಿ ಒದಗಿಬಂದ ಸುವರ್ಣ ಅವಕಾಶ' ಎನ್ನುತ್ತಾರೆ ಪ್ಲಾಂಟೇಶನ್ ಕಾರ್ಮಿಕರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ, ಸಿ.ಐ.ಟಿ.ಯು ನಾಯಕ ವಿ.ಸುಕುಮಾರ್. ಅದಕ್ಕೆಂದೇ ಸ್ವಾಗತ ಸಮಿತಿಯನ್ನು ರಚಿಸಿ ಯಶಸ್ಸಿಗೆ ಹಗಲಿರುಳು ದುಡಿದ ನೂರಾರು ಒಡನಾಡಿ, ಹಿತೈಷಿಗಳನ್ನು ಮನತುಂಬಿ ನೆನಪಿಸಿಕೊಳ್ಳುತ್ತಾರೆ ಅವರು. ಕೊಡಗು, ಚಿಕ್ಕಮಗಳೂರು- ಹಾಸನದ ಈ ಮಲೆನಾಡಿನ ಪ್ರತಿಯೊಬ್ಬ ಕಾರ್ಮಿಕನನ್ನೂ, ಪ್ಲಾಂಟರ್‌ಗಳತ್ತ ಸಮ್ಮೇಳನದ ಸಂದೇಶವಾದ 'ತೋಟ ಕೈಗಾರಿಕೆ ಉಳಿಸಿ - ಕಾರ್ಮಿಕರನ್ನು ರಕ್ಷಿಸಿ' ಸಂದೇಶ ಒಯ್ಯಲು ವಿಶಿಷ್ಟವಾಗಿ ಪ್ರಚಾರ ಕೈಗೊಳ್ಳಲಾಗಿದೆ. ಇಲ್ಲಿನ ಜನ ತನು-ಮನ-ಧನಗಳಿಂದ ಶ್ರಮಿಸಿ, ಪ್ರೋತ್ಸಾಹಿಸಿದ್ದಾರೆ. ದತ್ತ ಜಯಂತಿ ಮೂಲಕ ಎಲ್ಲೆಲ್ಲಾ ಕೋಮು ದ್ವೇಷದ ಉನ್ಮಾದ ಹುಟ್ಟು ಹಾಕಲು ಯತ್ನಿಸಿದ ಸಂದರ್ಭದಲ್ಲಿಯೂ ಜನತೆ ತೋರಿದ ಸಹಾಯ-ಸಹಕಾರ ಕರಾಳಶಕ್ತಿಗಳು ಎದುರಿನಲ್ಲಿ ಬೆಳಗುತ್ತಿರುವ ಬೆಳಕಾಗಿದೆ.

ಜನಮನ ಹೊಕ್ಕ ಸಾಂಸ್ಕೃತಿಕ ಜಾಥಾ

ಈ ಸಂದೇಶ ಹೊತ್ತ ಮೂರು ಜಿಲ್ಲೆಗಳಲ್ಲಿಯೂ ವ್ಯಾಪಕ ಗೋಡೆಬರಹ, ಭಿತ್ತಿಪತ್ರ, ಮಾಧ್ಯಮಗೋಷ್ಠಿ, ಸಾಂಸ್ಕೃತಿಕ ಜಾಥಾಗಳು, ಬಹಿರಂಗಸಭೆಗಳು ನಡೆಸಲಾಗಿದೆ. ಇದಕ್ಕೆಂದೇ ಮೂರು ದಿನಗಳ ಕಲಾವಿದರ ತರಬೇತಿ ಶಿಬಿರ ಚಿಕ್ಕಮಗಳೂರಿನಲ್ಲಿ ನಡೆಯಿತು. ನಿರ್ದೇಶಕ ಭಾಸ್ಕರ ನೆಲ್ಲಿತೀರ್ಥ ನಿರ್ದೇಶಿಸಿದರೆ, ನಾಟಕಗಳ ರಚನೆಗೆ ಅವರೊಂದಿಗೆ, ಕೆಜಿಎಫ್‌ನ ಸಮುದಾಯದ ಅಚ್ಯುತ ಹಾಸನದ ಧರ್ಮೇಶ್, ರವಿಶಂಕರ್ ಪೂರ್ಣ ತೊಡಗಿ ಶ್ರಮಿಸಿದ್ದಾರೆ.

(ನಾಟಕ: ಬೆಟ್ಟದಿಂದ ಬಟ್ಟ ಬಯಲಿಗೆ, ಮತ್ತು ಹೋರಾಟದ ಹಾದಿಯಲ್ಲಿ)

ಎಸ್.ಎಫ್.ಐ, ಡಿ.ವೈ.ಎಫ್.ಐ ಹತ್ತು ಉತ್ಸಾಹಿ ಕಲಾವಿದರ ಜಾಥಾ ತಂಡ ಡಿಸೆಂಬರ್ 16 ರಿಂದ 22ರವರೆಗೆ ಚಿಕ್ಕಮಗಳೂರು, ಹಾಸನ ಜಿಲ್ಲೆಯಾದ್ಯಂತ ಪ್ಲಾಂಟೇಶನ್ ಪ್ರದೇಶದಲ್ಲಿ ಸಂಚರಿಸಿದೆ. ನಾಟಕ ಹಾಗೂ ಭಾಷಣಗಳ ಮೂಲಕ ಜನರನ್ನು ತಲುಪಲಾಗಿದೆ. ಕೇವಲ ಸಂಘ ಇರುವಲ್ಲಿ ಮಾತ್ರವಲ್ಲ, ಹೊಸ

ಸಮ್ಮೇಳನದ ಯಶಸ್ಸಿಗೆ ಸಂಭ್ರಮದ ಸಿದ್ಧತೆ

ಪ್ರದೇಶಗಳಲ್ಲೂ ಜನ ನೂರಾರು ಸಂಖ್ಯೆಯಲ್ಲಿ ಸೇರಿ, ಹಣ, ಊಟ-ಟೀ ಕೊಟ್ಟಿದ್ದಾರೆ. ಬದುಕಿನ ಸಂಕಷ್ಟಗಳನ್ನು ತೆರೆದಿಡುವಾಗ ಕಾರ್ಮಿಕರು ದುಃಖ ಉಮ್ಮಳಿಸಿ ಕಣ್ಣೀರಿಟ್ಟಿದ್ದಾರೆ. ಜಾಥಾ ಮುಂದೆ ನಡೆವಾಗ ಶುಭ ಹಾರೈಸಿದ್ದಾರೆ, ಆದರೆ ಜಾಥಾದ ಹಾದಿಯುದ್ದಕ್ಕೂ ಬಜರಂಗದಳದ 'ಖಾವೀ ಪಡೆ'ಗಳ ಬೆದರಿಕೆ ಛಾಯೆ ಕಾಡಿದೆ. ಪೋಲೀಸರೇ 'ಬೇಡ ಸ್ವಾಮಿ ಇಲ್ಲಿ ನಾಟಕ ಆಡಬೇಡಿ ಶಾಂತಿ ಕದಡೀತು, ಇದು ನಿಮ್ಮ ಹಿತಕ್ಕೆ' ಎಂದು ಸಾಗಹಾಕಲು ನೋಡಿದ್ದಾರೆ. ಆದರೆ ಜನ ಅಪೂರ್ವವಾಗಿ ಸ್ಪಂದಿಸಿ ಬಲ ನೀಡಿದ್ದಾರೆ. ಕಮ್ಯುನಿಸ್ಟ್, ಕಾಂಗ್ರೆಸ್, ಬಿಎಸ್‌ಪಿ, ಜನತಾದಳದಂತಹ ಪಕ್ಷಗಳು ಮುಖಂಡರು ಊಟವನ್ನೇ, ಆಗಿದೆಯೆಂದಾಗ ಕಡೆಗೆ ಕಾಫಿ-ಟಿ-ಕುಡಿಸಿ ಕಳಿಸಿದ್ದಾರೆ.

ಕೊಡಗು ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿಯೂ ಒಂದು ದಿನದ ಜಾಥಾ ನಡೆದಿದೆ. ಹತ್ತಾರು ದಿನಗಳು ಪ್ರತಿ ಪ್ಲಾಂಟೇಶನ್‌ಗಳಿಗೂ ಮುಖಂಡರು ಭೇಟಿ ನೀಡಿ ಕಾರ್ಮಿಕರ ನಡುವೆ ಪ್ರಚಾರಿಸಿದ್ದಾರೆ. ಸಂಘದ ಮುಖಂಡ ಕಾಳಯ್ಯ, ವಸಂತಕುಮಾರ್, ವೀರಸ್ವಾಮಿ, ಸುನೀಲ್, ಕುಟ್ಟಪ್ಪ ಮುಂತಾದವರು ಮಾತನಾಡಿದ್ದಾರೆ.

"ಏಳುದಿನಗಳ ಅವಿರತ ಕಾರ್ಯಕ್ರಮ ಗಳ ಬಳಿಕ ಬಳಲಿಕೆ ಎಂಬುದು ಕಾಣಲಿಲ್ಲ ಬದಲಾಗಿ, ಕಾರ್ಮಿಕರ ಜನಜೀವನದ ನಡುವೆ ಓಡಾಡಿ, ಅವರೊಟ್ಟಿಗೆ ಉಳಿದು, ಸ್ಥಿತಿ-ಗತಿ ಅರಿತು ಹೊಸ ಅನುಭವ- ಎಚ್ಚರ ಪಡೆದಿದ್ದೇವೆ. ಇದು ಯಾವ ಗ್ರಂಥಗಳೂ- ವಿಶ್ವವಿದ್ಯಾಲಯ ಗಳೂ ನೀಡದ ಅರಿವು' ಎಂದು ಹೆಮ್ಮೆಯಿಂದ ಹೇಳುತ್ತಾರೆ- ಜಾಥಾ ತಂಡದ ನಾಯಕರಾದ ಧರ್ಮೇಶ್, ನವೀನ್‌ಕುಮಾರ್.

ಗೋಡೆಗಳೇ ಮಾತನಾಡಿದವು

ಇತ್ತ ಜನರೊಂದಿಗೆ ಗೋಡೆಗಳು ಮಾತನಾಡುವಂತೆ, ವರ್ಣ ರಂಜಿತ ಬರಹ, ಆಕರ್ಷಿತ ಬ್ಯಾನರ್ ರಚಿಸುವಲ್ಲಿ ಬೆಂಗಳೂರು ಡಿ.ವೈ.ಎಫ್.ಐ.ನ ಯುವ ಚಿಂತನಾ ಕಲಾವಿದ ಶ್ರೀರಾಂಪುರದ ರವಿ ಕೈಚಳಕ ಗುರುತಿಸದೇ ಯಾರೂ ಹೋಗಲು ಸಾಧ್ಯವಿಲ್ಲ. ಹೀಗೆ ಇಡೀ ಮಲೆನಾಡು ಜನರ ಗಮನ ಸೆಳೆದಿದೆ ಈ ಸಮ್ಮೇಳನ. ಹಾಗೆಯೇ ಕೇರಳ, ತಮಿಳುನಾಡು, ಆಂಧ್ರ, ತ್ರಿಪುರ, ಪಶ್ಚಿಮ ಬಂಗಾಳ, ಅಸ್ಸಾಂ, ಕಾಶ್ಮೀರ, ಕರ್ನಾಟಕದ ಪ್ರತಿನಿಧಿಗಳನ್ನು, ಧೀರ ನಾಯಕರನ್ನು ಆದರದಿಂದ ಸ್ವಾಗತಿಸಿ ಎಲ್ಲಾ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಿತು ಸ್ವಾಗತ ಸಮಿತಿ.

- ಎಸ್‌ವೈಜಿ

ಕಳೆದ ಒಂದು ವರುಷದಲ್ಲಿನ ಮಹತ್ತರ ರಾಷ್ಟ್ರೀಯ ವಿದ್ಯಮಾನಗಳನ್ನು ಹಿರಿಯ ನಾಯಕ ಕಾಂ.ಸುರ್ಜಿತ್ ಅವಲೋಕಿಸಿದ್ದಾರೆ. ಅದರ ಸಾರಾಂಶ ಇಲ್ಲಿದೆ

ದ್ವೇಷ, ತಲ್ಲಣಗಳ ವರುಷ

ಪ್ರಧಾನಿ ಅಟಲಬಿಹಾರಿ ವಾಜಪೇಯಿ ರಜಾ ದಿನಗಳನ್ನು ಗೋವಾದಲ್ಲಿ ಕಳೆಯುತ್ತಾ ಜನತೆಗೆ ಹೊಸವರ್ಷದ ಸಂದೇಶವನ್ನು ನೀಡುತ್ತಾ, ಹಿಂದುತ್ವ ಮತ್ತು ಜಾತ್ಯಾತೀತತೆ, ನಡುವೆ ಯಾವುದೇ ವಿರೋಧಾಭಾಸ ಇಲ್ಲ ಎಂದು ನುಡಿದರು. ಬಹುಶಃ ಎರಡು ನಾಲಗೆ ಉಳ್ಳ ಈ ಪ್ರಧಾನಿ, ಸಂಘ ಪರಿವಾರದ ನಡುವೆ 'ಸ್ವಯಂ ಸೇವಕ' ಎಂದು ಎದೆ ತಟ್ಟಿಕೊಳ್ಳುತ್ತಾ ಜಾತ್ಯಾತೀತತೆ ಮತ್ತು ಹಿಂದುತ್ವ ಒಂದೇ ಎಂದು ಹೇಳುವ ಮೂಲಕ ಮುಗ್ಧ ಜನತೆಯನ್ನು ವಂಚಿಸುತ್ತಿದ್ದಾರೆ. ಅದಕ್ಕಾಗಿಯೇ ಇವರನ್ನು ಆರ್.ಎಸ್.ಎಸ್‌ನ 'ಮುಖವಾಡ' ಎಂದು ಅವರ ಪಕ್ಷದವರೇ ಬಣ್ಣಿಸಿದ್ದು.

ಹಿಂದುತ್ವ ಮತ್ತು ಭಾರತೀಯತೆ ಒಂದೇ ಎಂದು ಸಾಧಿಸಲು ಆರಂಭಿಸಿರುವ ವಿ.ಹೆಚ್.ಪಿ.ಯವರ ರೀತಿ ಮಾತನಾಡುತ್ತಿರುವ ಪ್ರಹಸನದ ಪಾತ್ರಧಾರಿ ಅಟಲ್ ಬಿಹಾರಿ ವಾಜಪೇಯಿಯವರು, ಎಲ್ಲಿಂದ ಬಂದರು ಎಂದು ಒಂದೊಮ್ಮೆ ಕೆದಕಿದರೆ, ಅವರ ಮೂಲ ಅರ್ಥವಾಗುತ್ತದೆ. ಮಹಾತ್ಮಾಗಾಂಧಿಯವರ ಹತ್ಯೆಯ ನಂತರ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್) 'ಬ್ಯಾನ್' ಆದ ನಂತರ, ರಾಜಕೀಯ ವೇದಿಕೆಯನ್ನು ಸ್ಥಾಪಿಸಲು, ಅಂದಿನ ಸರ ಸಂಚಾಲಕರಾದ ಎಂ.ಎಸ್.ಗೋಲ್ವಾಲ್ಕರ್, ಡಿ.ದೀನದಯಾಳ ಉಪಾಧ್ಯಾಯ, ಎಲ್.ಕೆ.ಅಡ್ವಾನಿ, ವಾಜಪೇಯಿ ಮತ್ತು ಸುಂದರ ಸಿಂಗಭಂಡಾರಿ (ಗುಜರಾತಿನ ಈಗಿನ ರಾಜ್ಯಪಾಲ) ಅವರನ್ನು ನೇಮಿಸಿದ್ದರು. 'ಸ್ವಯಂ ಸೇವಕ'ನಾಗಿ ವಾಜಪೇಯಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಅಷ್ಟೆ.


ಹೊಸ ವರ್ಷದ ಶುಭಾಶಯಗಳು

2002 ರ ದುಗುಡಗಳನ್ನೆಲ್ಲ ಒಂದೆಡೆತಳ್ಳಿ, ಭಾರತದ ಜನರು ಹೊಸ ವರ್ಷವನ್ನು ಸ್ವಾಗತಿಸಿದರು. 2003 ಜನರಿಗೆ ಸಂತೋಷ, ಸೌಹಾರ್ದತೆ, ಅಭಿವೃದ್ಧಿಗಳನ್ನು ನೀಡುತ್ತದೆ ಎಂಬ ಆಶಯದಿಂದ.... ಆಶಯ ಒಳ್ಳೆಯದೇ, ಆದರೆ 2002 ರ ಘಟನೆಗಳನ್ನು ಗಮನಿಸಿದಾಗ ಈ ಆಶಯಗಳು ಈಡೇರುವುದೇ ಎಂಬ ಸಂಶಯ ಮೂಡುವುದು ಸಹಜ. 2002 ರ ಆರಂಭದಿಂದಲೇ ಗೋಧ್ರಾ ಘಟನೆ ನಡೆದು ಅದರ ಬೆನ್ನಲ್ಲೇ ಗುಜರಾತ್ ಹತ್ಯಾಕಾಂಡ ಆರಂಭಗೊಂಡಿತು. ಇದು ಎರಡು ಕೋಮುಗಳ ನಡುವೆ ನಡೆದ ಘರ್ಷಣೆ ಅಲ್ಲ. ಬದಲಾಗಿ, ಆಡಳಿತ ನಡೆಸುತ್ತಿರುವ ಸರಕಾರವೇ ಯೋಜನಾಬದ್ಧವಾಗಿ ರೂಪಿಸಿದ ಕಾರ್ಯತಂತ್ರ.

ಫ್ಯಾಸಿಸ್ಟ್ ಮನೋಧರ್ಮವನ್ನು ಅರಿತಿದ್ದ ಎಡಪಕ್ಷಗಳು, ಬುದ್ಧಿಜೀವಿಗಳು, ಪ್ರಗತಿಪರರು, ಗುಜರಾತ್ ಪ್ರಯೋಗವನ್ನು ಇತರೆಡೆ ಹಬ್ಬಿಸುವ ಸಂಭವ ಇದೆಯೆಂದು ಎಚ್ಚರಿಸಿದರು. ಗುಜರಾತ್ ಪ್ರಯೋಗದ ಸೂತ್ರದಾರಿ ಮುಖ್ಯಮಂತ್ರಿ ನರೇಂದ್ರ ಮೋದಿ, ಅವಧಿಗೆ ಮೊದಲೇ ಅಸೆಂಬ್ಲಿಯನ್ನು ವಿಸರ್ಜಿಸಿ, ಚುನಾವಣೆಯನ್ನು ನಡೆಸಬೇಕೆಂದು ಚುನಾವಣಾ ಆಯೋಗವನ್ನು ಕೋರಿದರು. ಆದರೆ ಗುಜರಾತಿನಲ್ಲಿ ಸಂಚರಿಸಿದ ಚುನಾವಣಾ ಆಯೋಗದ ಪೂರ್ಣತಂಡ, ಚುನಾವಣೆ ನಡೆಸಲು ಇದು ಸಕಾಲವಲ್ಲ ಎಂದು ತೀರ್ಪು ನೀಡಿತು. ಏಕೆಂದರೆ, ಗುಜರಾತ್, ಹತ್ಯಾಕಾಂಡದ ಪೂರ್ವ ಸ್ಥಿತಿಗೆ ಮರಳಿರಲಿಲ್ಲ.

ಅಸೆಂಬ್ಲಿಯನ್ನು ವಿಸರ್ಜಿಸಿ, ಚುನಾವಣೆ ನಡೆಸಬೇಕೆಂದು ಬಯಸಿದ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರಕಾರಕ್ಕೆ, ನಿರಾಶ್ರಿತರಿಗೆ ಸೂಕ್ತ ಪುನರ್ವಸತಿ ನೀಡಬೇಕು ಎಂಬ ಆಲೋಚನೆ ಬರಲಿಲ್ಲ. ನಿರಾಶ್ರಿತ ಶಿಬಿರಗಳಲ್ಲಿ ಸರಿಯಾದ ಸೌಲಭ್ಯಗಳನ್ನು ನೀಡಿರಲಿಲ್ಲ. ಏಕೆಂದರೆ, ಅವರ ದೃಷ್ಟಿಯಲ್ಲಿ ನಿರಾಶ್ರಿತ ಶಿಬಿರಗಳಲ್ಲಿರುವವರು ಭಾರತದ ಪ್ರಜೆಗಳಲ್ಲ.

ಹತ್ಯಾಕಾಂಡ ಯಾಕೆ?



ಕಳೆದ ಒಂಭತ್ತು ವರ್ಷಗಳಲ್ಲಿ ಗುಜರಾತಿಗಳಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ಸರಕಾರಕ್ಕೆ ಜನತೆಯ ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗಿರಲಿಲ್ಲ. ಜನರ ಹಾಹಾಕಾರ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಗುಜರಾತಿನಲ್ಲಿ ಭೂಕಂಪ ಸಂಭವಿಸಿದಾಗಲಂತೂ ಅದನ್ನು ಸರಕಾರ ನಿರ್ವಹಿಸಿದ ರೀತಿ ಜನರನ್ನು ರೊಚ್ಚಿಗೆಬ್ಬಿಸಿತು. ದೇಶ, ವಿದೇಶಗಳಿಂದ ಹೇರಳವಾಗಿ ಸಹಾಯ ಬಂದರೂ, ಅದು ಜನರಿಗೆ ತಲುಪಲಿಲ್ಲ. ಬದಲಾಗಿ ಮಧ್ಯವರ್ತಿಗಳಿಗೆ, ಸಂಘ ಪರಿವಾರದ ಶಾಖೆಗಳಿಗೆ ಹಣದ ಹೊಳೆ ಹರಿಯಿತು. 'ಜೈ ಶ್ರಿರಾಮ್' ಎಂದು ಹೇಳಿದವರಿಗೆ ಮಾತ್ರ ಅಲ್ಪಸ್ವಲ್ಪ ಸಹಾಯ ದೊರಕಿತು. ಕೈಗಾರಿಕೆಯಲ್ಲಿ ಅಭಿವೃದ್ಧಿ ಸಾಧಿಸಿದ ರಾಜ್ಯ ಎಂದು ಹೆಗ್ಗಳಿಕೆ ಹೊತ್ತಿರುವಾಗಲೇ ನಿರುದ್ಯೋಗಿಗಳ ದಂಡು ಬೆಟ್ಟದಷ್ಟು ಬೆಳೆದಿತ್ತು. ಈ ಅತೃಪ್ತಿಯಿಂದಾಗಿ ನಿರುದ್ಯೋಗಿಗಳ ಯೋಚನೆ ಪ್ರಜಾಸತ್ತಾತ್ಮಕ ಚಳುವಳಿಯ ದಿಕ್ಕಿನಲ್ಲಿ ಹರಿಯುವ ಮೊದಲೇ ದಿಕ್ಕು ತಪ್ಪಿಸಬೇಕಾಗಿತ್ತು. ಬೆಲೆ ಏರಿಕೆಯಿಂದ, ಕಾರ್ಖಾನೆಗಳ ಮುಚ್ಚುವಿಕೆಯಿಂದ ಬರಗಾಲದ ಬವಣೆಯಿಂದ ಬಳಲುತ್ತಿರುವ ಜನ ತನ್ನ ಸರಕಾರದ ವಿರುದ್ಧ ಚಳುವಳಿ ನಡೆಸುವುದು ನರೇಂದ್ರ ಮೋದಿ ಸರಕಾರಕ್ಕೆ ಬೇಕಾಗಿರಲಿಲ್ಲ.

ಆದ್ದರಿಂದಲೇ ಪೂರ್ವಯೋಜಿತ ಹತ್ಯಾಕಾಂಡದ ಮೂಲಕ ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸುವುದು ಹಾಗೂ ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸಿ ಹಿಂದುತ್ವದ ಘೋಷಣೆಯ ಮೂಲಕ ಮತ್ತೆ ಅಧಿಕಾರ ಹಿಡಿಯುವುದು - ಇದು ನರೇಂದ್ರ ಮೋದಿ ಸರಕಾರದ ಉದ್ದೇಶವಾಗಿತ್ತು. ಒಂದೇ ಬಾಣದಿಂದ ಎರಡು ಹಕ್ಕಿಗಳನ್ನು ಉರುಳಿಸುವುದು!

ಈ ಪ್ರಯೋಗವನ್ನು ದೇಶದೆಲ್ಲೆಡೆ ಹಬ್ಬಿಸುವ ಲಕ್ಷಣಗಳು ಕಾಣುತ್ತವೆ. ಗುಜರಾತಿನ ಫಲಿತಾಂಶ ಬರುತ್ತಿದ್ದಂತೆಯೇ, ಇನ್ನೆರಡು ವರ್ಷಗಳಲ್ಲಿ ಹಿಂದುರಾಷ್ಟ್ರ ಸ್ಥಾಪನೆಗೊಳ್ಳಲಿದೆ ಎಂದು ವಿಶ್ವ ಹಿಂದೂ ಪರಿಷತ್ತಿನ ಅಂತರರಾಷ್ಟ್ರೀಯ ಕಾರ್ಯದರ್ಶಿ ಪ್ರವೀಣ್ ತೊಗಾಡಿಯಾ ಘೋಷಿಸಿದ್ದರು. ಚುನಾವಣೆಯ ವಿಜಯದ ಅಮಲು ಅವರ ತಲೆಗೇರಿತ್ತು. ಆ ಅಮಲಿನಲ್ಲಿಯೇ ಕರ್ನಾಟಕದ ಚಿಕ್ಕಮಗಳೂರಿಗೆ ಬಂದ ತೂಗಡಿಯಾ, ದತ್ತಪೀಠ (ಬಾಬಾಬುಡನ್‌ಗಿರಿ) ಇನ್ನೊಂದು ಅಯೋಧ್ಯೆಯಾಗಲಿದೆ ಎಂದು ಭವಿಷ್ಯ ನುಡಿದರು.

ಜನತೆಯನ್ನು ವಂಚಿಸಿದ ಸರ್ಕಾರ

ಜಾಗತೀಕರಣ ನೀತಿಯನ್ನು ತಾನೇ ವಿರೋಧಿಸಿ ಅಧಿಕಾರಕ್ಕೆ ಬರುತ್ತಲೇ ವೇಗವಾಗಿ ಜಾರಿ ಮಾಡುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ಸಾಕಷ್ಟು ಲಾಭದಾಯಕ ಉದ್ದಿಮೆಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡಿದೆ. ಕಾಮಧೇನು ಎಂದೇ ಕರೆಯಲ್ಪಡುವ ಸಾರ್ವಜನಿಕ ಉದ್ದಿಮೆಗಳನ್ನು ಒಂದೊಂದಾಗಿ ಖಾಸಗಿಯವರಿಗೆ ಹಸ್ತಾಂತರ ಗೊಳಿಸಲಾಗುತ್ತಿದೆ. ಹೊಸ ಕೈಗಾರಿಕೆಗಳ ಸ್ಥಾಪನೆ ಇಲ್ಲ. ಒಂದು ವೇಳೆ ಸ್ಥಾಪನೆ ಆದರೂ ಉದ್ಯೋಗಕ್ಕೆ ಅವಕಾಶ ಇಲ್ಲ. ರೈತರಿಗೆ ಒದಗಿಸಿದ್ದ ಸಬ್ಸಿಡಿಯನ್ನು ಹಿಂತೆಗೆದುಕೊಂಡ ಸರ್ಕಾರ, ರೇಶನ್ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳುವ ಮೂಲಕ ದಲ್ಲಾಳಿಗಳ ಮಾರುಕಟ್ಟೆಗೂ ರೇಶನ್ ಅಂಗಡಿಗೂ ಯಾವುದೇ ವ್ಯತ್ಯಾಸ ಇಲ್ಲದಂತೆ ಮಾಡಿತು. ಹೇರಳವಾಗಿ ಕೃಷಿ - ಉತ್ಪಾದನೆಗಳನ್ನು ಆಮದು ಮಾಡಿಕೊಳ್ಳುವ ಮೂಲಕ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿತು. ಕಾರ್ಖಾನೆಗಳ ಮುಚ್ಚುವಿಕೆಯಿಂದ ಕಾರ್ಮಿಕರೂ ಬೀದಿಪಾಲಾಗಿದ್ದಾರೆ, ಆತ್ಮಹತ್ಯೆಗೆ ಮುಂದಾಗಿದ್ದಾರೆ. ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯ ಕಾರ್ಮಿಕನ ಆತ್ಮಹತ್ಯೆ ಇತ್ತೀಚಿನ ಉದಾಹರಣೆ. ಕಾರ್ಮಿಕರು ಹೋರಾಟ ಮಾಡದಂತೆ ತಡೆಯಲು ಕಾರ್ಮಿಕ ಕಾನೂನುಗಳಿಗೆ ಆಮೂಲಾಗ್ರ ಬದಲಾವಣೆ ತರಲು ಹೊರಟಿದೆ.

ಕೈಗಾರಿಕಾ ಉದ್ದಿಮೆದಾರರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವುದಕ್ಕಾಗಿ ಉಳಿತಾಯದ ಮೇಲೆ ಬಡ್ಡಿ ಕಡಿಮೆ ಮಾಡಿದ ಸರ್ಕಾರ, ನಿವೃತ್ತಿದಾರ, ವೃದ್ಧರ ಉಳಿತಾಯಕ್ಕೆ ಕನ್ನ ಹಾಕಿತು.

ಭಾರತದ ಶ್ರೇಷ್ಠ ಪರಂಪರೆಯಾಗಿ ಬಂದಿದ್ದ ವಿದೇಶಾಂಗ ನೀತಿ ಹೇಳಹೆಸರಿಲ್ಲದಂತೆ ನಾಶವಾಗುತ್ತಿದೆ. ಮೂರನೇ ಜಗತ್ತಿನ ರಾಷ್ಟ್ರಗಳನ್ನು ಒಂದೇ ವೇದಿಕೆಯಲ್ಲಿ ತರಲು ಶ್ರಮಿಸಿದ ಪರಂಪರೆ ಹೊಂದಿದ ಭಾರತ ಇಂದು ಸಾಮ್ರಾಜ್ಯಶಾಹಿ ಅಮೇರಿಕಾಕ್ಕೆ ಗೊಡ್ಡು ಸಲಾಮು ಹಾಕುತ್ತಿದೆ. 90ರ ದಶಕದ ಕೊಲ್ಲಿ ಯುದ್ಧದಿಂದ ನಮ್ಮ ದೇಶದ ಮೇಲೆ ಆದ ಪರಿಣಾಮಗಳನ್ನು ಮರೆತಿರುವ ಈ ಸರಕಾರ ಅಮೇರಿಕಾದ ವಿರುದ್ಧ ಸೊಲ್ಲು ಎತ್ತಲೂ ನಡುಗುತ್ತಿದೆ. ಪಾಲೆಸ್ಟೀನ್ ಜನತೆ ಅಸಹಾಯಕರಾಗಿರುವಾಗಲೂ ಇಸ್ರೇಲ್ ವಿರುದ್ಧ ಮಾತನಾಡಲು ಧೈರ್ಯ ಬಂದಿಲ್ಲ.

ಜರ್ಮನಿಯ ಹಿಟ್ಲರ್, ಇಟಲಿಯ ಮುಸ್ಸೊಲಿನಿ ಮೊದಲಾದ ಸರ್ವಾಧಿಕಾರಿಗಳನ್ನು ಆರಾಧಿಸುವ ಸಂಘ ಪರಿವಾರದ ಸಂಸ್ಕೃತಿಗೆ ಸೇರಿದ ಇವರಿಗೆ ಬಡರಾಷ್ಟ್ರಗಳ ಬಗ್ಗೆ, ಬಡಜನತೆಯ ಬಗ್ಗೆ ಕರುಣೆ ಎಲ್ಲಿಂದ ಬರಬೇಕು?

ಹಗರಣಗಳ ಸರದಾರ:

ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ನಡೆದಷ್ಟು ಹಗರಣಗಳು ಹಿಂದೆಂದೂ ನಡೆದಿಲ್ಲ. ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷ 40 ವರ್ಷಗಳಲ್ಲಿ ಸಾಧಿಸಿರುವುದಕ್ಕಿಂತ ಹೆಚ್ಚು ಬಿಜೆಪಿ ನಾಲ್ಕೇ ವರುಷಗಳಲ್ಲಿ ಸಾಧಿಸಿದೆ. ಅದಕ್ಕಾಗಿಯೇ ಬಿಜೆಪಿ, ತಾನು ಇತರೆ ಪಕ್ಷಗಳಿಗಿಂತ ಭಿನ್ನ' ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದೆ.

ಬಿಜೆಪಿಯ ಹಿಂದಿನ ಅಧ್ಯಕ್ಷ ಬಂಗಾರು ಲಕ್ಷ್ಮಣ್ ನೋಟಿನ ಕಂತೆಗಳನ್ನು ಸ್ವೀಕರಿಸುತ್ತಿದ್ದಾಗ, ತೆಹಲ್ಕಾ ತಂಡದವರಿಗೆ ಸಿಕ್ಕಿಬಿದ್ದು ಅಧಿಕಾರ ಕಳೆದುಕೊಳ್ಳಬೇಕಾಯ್ತು. ಈಗಿನ ಅಧ್ಯಕ್ಷ ವೆಂಕಯ್ಯನಾಯ್ಡು ಬೆಂಗಳೂರಿನ ಸುಳ್ಳು ವಿಳಾಸ ಕೊಟ್ಟು, ಕರ್ನಾಟಕದಿಂದ ರಾಜ್ಯ ಸಭಾ ಸದಸ್ಯರಾಗಿದ್ದಾರೆ. ಮಾತ್ರವಲ್ಲ, ಆಂಧ್ರದಲ್ಲಿ ಶಾಸಕನಾಗಿದ್ದಾಗ, ದಲಿತರಿಗೆ ಮೀಸಲಿಟ್ಟ 40 ಎಕರೆ ಭೂಮಿಯನ್ನು ತನಗೆ ಮತ್ತು ತನ್ನ ಕುಟುಂಬದವರಿಗೆ ಮಾಡಿಸಿಕೊಂಡಿದ್ದಾರೆ.

3857 ಪೆಟ್ರೋಲ್ ಬಂಕ್ ಮತ್ತು ಗ್ಯಾಸ್ ಏಜೆನ್ಸಿಗಳನ್ನು ತಮಗೆ ಬೇಕಾದವರಿಗೆ ನೀಡಿದ ಬಿಜೆಪಿ ಸಚಿವರು, ದೆಹಲಿಯಲ್ಲಿ ಪ್ರಮುಖ ಬೀದಿಗಳಲ್ಲಿರುವ ಸೈಟುಗಳನ್ನು ಕೇಂದ್ರ ಸಚಿವ ಅನಂತಕುಮಾರ್ ಮೂಲಕ ತಮ್ಮವರಿಗೆ ಮಾಡಿಸಿಕೊಂಡಿದ್ದಾರೆ.

ಕರ್ನಾಟಕದ ವಿರೋಧ ಪಕ್ಷದ ನಾಯಕ, ಬಿಜೆಪಿ ಮುಖಂಡ ಜಗದೀಶ್ ಶೆಟ್ಟರ್ ಹುಬ್ಬಳ್ಳಿ, ಧಾರವಾಡದಲ್ಲಿ ತನ್ನ ಸಹೋದರನ ಹೆಸರಿನಲ್ಲಿ ಪೆಟ್ರೋಲ್ ಪಂಪ್ ಪಡೆದಿದ್ದಾರೆ. ಇನ್ನೋರ್ವ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರ ಅಳಿಯ ಆರ್.ಎನ್.ಮೋಹನ್ ಕುಮಾರ್ ಬೆಂಗಳೂರಿನ ತಾವರೆಕೆರೆ ಕ್ರಾಸ್‌ನಲ್ಲಿ ಪೆಟ್ರೋಲ್ ಪಂಪ್ ಪಡೆದಿದ್ದರೆ, ಪ್ರಧಾನ ಕಾರ್ಯದರ್ಶಿ ಅರವಿಂದ ನಿಂಬಾವಳಿಯವರ ಪತ್ನಿ ಮಂಜುಳಾರವರ ಹೆಸರಿನಲ್ಲಿ ಬೆಂಗಳೂರಿನ ಸಮೀಪ ಪೆಟ್ರೋಲ್ ಪಂಪ್ ಹೊಂದಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ವರದಿಯಾದ ಆಳುವ ವರ್ಗದ ರಾಜಕಾರಣಿಗಳು ಯುನಿಟ್ ಟ್ರಸ್ಟಿನ ಹಣವನ್ನು ದುರ್ಬಲ ಕಂಪನಿಗಳಲ್ಲಿ ತೊಡಗಿಸುವಂತೆ ಮಾಡಿದುದರಿಂದ ಯು.ಎಸ್-64 ಯೋಜನೆಯನ್ನೇ

ಪುಟ 8 ಕ್ಕೆ



ಅಪ್ಪಟ ಚಿನ್ನ, ಅಪ್ಪಟ ರೇಷ್ಮೆ' ಎಂದು ವಿಶ್ವದಾದ್ಯಂತ ಖ್ಯಾತಿ ಪಡೆದ ಕರ್ನಾಟಿಕ ಹಾಗೆಯೇ ದೇಶದ ರೇಷ್ಮೆ ಉದ್ದಿಮೆ ಇಂದು ತೀವ್ರ ಬಿಕ್ಕಟ್ಟನ್ನೆದುರಿಸುತ್ತಿದೆ. ಅತ್ಯುತ್ತಮ ರೇಷ್ಮೆ ಉತ್ಪಾದಿ ಲಕ್ಷಾಂತರ ರೈತ ಕುಟುಂಬಗಳು ಅವಿರತ ಶ್ರಮವಿದೆ. ಆದರೀಗ ಈ ಸಮುದಾಯ ಕಂಗಾಲಾ ಸ್ಥಿತಿಯಲ್ಲಿದೆ. ಮುಖ್ಯವಾಗಿ ವಿಶ್ವ ವಾಣಿಜ್ಯ ಸಂಘಟನೆ ಹಾಗೂ ಕೇಂದ್ರ-ರಾಜ್ಯ ಸರ್ಕಾರಗಳ ಹೆಣೆದಿರುವ ಜಾಗತೀಕರಣದ ಜಾಲದಲ್ಲಿ ಸಿಕ್ಕಿ ಎದುಸಿರು ಬಿಡುವ ಸ್ಥಿತಿ ನಿರ್ಮಾಣವಾಗಿ ಕುಣಿಕೆಯಲ್ಲಿ ರೈತಾಪಿಗಳ ಕೊರಳು ಸಿಕ್ಕಿದೆ. ಇಂತಹ ವಿನಾಶಕಾರಿ ನೀತಿಗಳ ವಿರುದ್ಧ ಪ್ರತಿರೋಧವು ಬೆಳೆಯುತ್ತಿದೆ. ಇದೇ ಜನವರಿ 10 ರಂದು ಬೆಂಗಳೂರಿನ ಕೇಂದ್ರ ರೇಷ್ಮೆ ಮ ಎದುರು ಅಖಿಲ ಭಾರತ ಮತಪ್ರದರ್ಶನ ನಡೆಯುತ್ತಿದೆ. ಈ ಸಂದರ್ಭಕ್ಕೆ 'ರೇಷ್ಮೆ ಕೃಷಿ ಉದ್ದಿಮೆ'ಗಳು ಎದುರಿಸುತ್ತಿರುವ ಸಮಸ್ಯೆಗಳು ಹೋರಾಟದ ಹಾದಿ ಕುರಿತ ಲೇಖನಗಳು

ರೇಷ್ಮೆಗೂಡಿನಲ್ಲೇ ರೈತರೂ ಸ

ಕೃಷ್ಣೇಗೌಡ ಟಿ.ಎಲ್.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರ ರೇಷ್ಮೆ ಕೃಷಿಕನ ಬದುಕನ್ನು ಸಂಪೂರ್ಣ ನಾಶ ಮಾಡುವ ಹಂತಕ್ಕೆ ಹೋಗಿವೆ. ಕೇವಲ 2 ವರ್ಷಗಳ ಹಿಂದೆ ಕೆ.ಜಿ.ಗೆ 160-170 ರೂ.ಗಳಾಗಿದ್ದ ರೇಷ್ಮೆ ಗೂಡಿನ ಬೆಲೆ ಈಗ 60-70 ರೂ.ಗಳಿಗೆ ಇಳಿದಿದೆ. ತಿಂಗಳು ಪೂರ್ತಿ ಇಡೀ ತನ್ನ ಕುಟುಂಬವನ್ನು ತೊಡಗಿಸಿ ಬೆಳೆದ ರೇಷ್ಮೆ ಗೂಡನ್ನು ಮಾರುಕಟ್ಟೆಯಲ್ಲಿ ಮೂರು ಕಾಸಿಗೆ ಮಾರಿ ಬರುವ ಪರಿಸ್ಥಿತಿ ನಮ್ಮ ನಾಡಿನ ರೈತರಿಗೆ ಬಂದಿದೆ. ಐಎಂಎಫ್, ವಿಶ್ವಬ್ಯಾಂಕ್, ವಿಶ್ವಹಣಕಾಸು ಸಂಸ್ಥೆಯ ಗುಲಾಮ ಚಾಕರಿ ಮಾಡುತ್ತಾ, ಅವರ ಸಂಜ್ಞೆಗಳನ್ನು ಚಾಚೂ ತಪ್ಪದೆ ಈ ಎರಡೂ ಸರ್ಕಾರಗಳು ಪಾಲಿಸುತ್ತಿವೆ, ಇದರ ಪರಿಣಾಮ ನಮ್ಮ ಕೃಷಿಕನ ಬದುಕು ವಿನಾಶದ ಅಂಚಿಗೆ ಬಂದಿದೆ.

ರೇಷ್ಮೆ ಉತ್ಪಾದನಾ ಕ್ಷೇತ್ರದಲ್ಲಿ ಜಗತ್ತಿನಲ್ಲಿ ಭಾರತಕ್ಕೆ ಎರಡನೇ ಸ್ಥಾನ. ನಮ್ಮ ಉತ್ಪಾದನೆ ಸುಮಾರು 15 ಸಾವಿರ ಟನ್‌ಗಳಷ್ಟು. ಈ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 65 ರಷ್ಟು. ಈ ಉತ್ಪಾದನೆಯ ಹಿಂದೆ ಲಕ್ಷಾಂತರ ರೈತರ ಕಣ್ಣೀರಿನ ಕತೆಯಿದೆ, ಸಾವಿರಾರು ಕುಟುಂಬಗಳ ಇಡೀ ಶ್ರಮವಿದೆ. ಲಕ್ಷಾಂತರ ರೈತ-ಕೂಲಿಕಾರ ಕುಟುಂಬಗಳಿಗೆ ರೇಷ್ಮೆ ಕೃಷಿ ಜೀವನಾಧಾರವಾಗಿದೆ. ಇವರೊಟ್ಟಿಗೆ ಅಸಂಖ್ಯಾತ ಕಾರ್ಮಿಕರು, ರೇಷ್ಮೆ ಮೊಟ್ಟೆ ಉತ್ಪಾದನಾ ಕೇಂದ್ರಗಳು, ರೀಲರ್ಸ್‌ಗಳು, ನೇಕಾರರು ರೇಷ್ಮೆ ಕೃಷಿಯನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ರೇಷ್ಮೆ ಕೃಷಿ ಮತ್ತು ಉದ್ದಿಮೆ ಹೆಚ್ಚು, ಹೆಚ್ಚು ಉದ್ಯೋಗ ಸೃಷ್ಟಿಸುವ ಕ್ಷೇತ್ರವಾಗಿದೆ.

ಕೇಂದ್ರ ಸರ್ಕಾರಗಳ ವಿನಾಶಕಾರಿ ಕೃಷಿ ನೀತಿ, ಉದಾರೀಕರಣ ನೀತಿಗಳ ಫಲವಾಗಿ ಇಡೀ ಕೃಷಿ ವಲಯ ತತ್ತರಿಸಿ, ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾಗ್ಯೂ ರೇಷ್ಮೆ ಕೃಷಿಕ ನೆಮ್ಮದಿಯಾಗಿ ಬದುಕುವ ಸನ್ನಿವೇಶವಿತ್ತು. ಈಗ ರೇಷ್ಮೆ ಉದ್ಯಮದ ಮೇಲೂ ಉದಾರೀಕರಣ ಕರಾಳ ಛಾಯೆ ಆವರಿಸಿದೆ.

90 ರ ದಶಕದಿಂದ ಆರಂಭವಾದ ಉದಾರೀಕರಣ ನೀತಿಗಳು ಕೃಷಿ ಕ್ಷೇತ್ರವನ್ನು ನುಂಗಿ ಹಾಕುತ್ತಿದ್ದಾಗ, ತಾನು ಅಧಿಕಾರಕ್ಕೆ ಬಂದರೆ ಎಲ್ಲವನ್ನು ತಡೆಗಟ್ಟಿ ರೈತರ ಉದ್ಧಾರ ಮಾಡುತ್ತೇವೆಂದು ಹೇಳಿದ್ದ ಬಿಜೆಪಿ ಅಧಿಕಾರಕ್ಕೆ ಬಂದೊಡನೆ, ತನ್ನ ಗುರುಗಳಾದ ವಿಶ್ವ ವ್ಯಾಪಾರ ಸಂಘಟನೆ ಮತ್ತು ಬಂಡವಾಳಗಾರರನ್ನು ತೃಪ್ತಿಪಡಿಸಲು ರೇಷ್ಮೆ ಆಮದಿನ ಮೇಲಿದ್ದ ಎಲ್ಲಾ ನಿಯಂತ್ರಣಗಳನ್ನು ತೆಗೆದು ರೇಷ್ಮೆ ಕೃಷಿಗೆ ಸಾವಿನ ಕರೆಗಂಟೆ ಬಾರಿಸಿದೆ.


ಕೇಂದ್ರ ಬಿಜೆಪಿ ಸರ್ಕಾರ ಕಳೆದ 2002 ರ ಬಜೆಟ್ಟಿನಲ್ಲಿ ಶೇ 40.04 ರಷ್ಟಿದ್ದ ಆಮದು ಸುಂಕವನ್ನು ಶೇ 35 ಕ್ಕ ಇಳಿಸಿ ಈಗ ಮತ್ತೆ ಸುಂಕವನ್ನು ಏರಿಸಲಾಗುವುದು ಎಂಬ ನಾಟಕವಾಡುತ್ತಿದೆ. ರೇಷ್ಮೆ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡುವವರು ಮಾತ್ರ ರೇಷ್ಮೆ ಆಮದು ಮಾಡಿಕೊಳ್ಳಬಹುದು ಎಂದು ಇದ್ದ ನಿಲುವನ್ನು ಬದಲಿಸಿ, ವಿದೇಶಿ ವಿನಿಮಯ ಇರುವ ಯಾರೂ ಬೇಕಾದರೂ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳಬಹುದೆಂಬ ಧೋರಣೆಗೆ ಅವಕಾಶ ಮಾಡಿಕೊಟ್ಟ ಫಲವಾಗಿ 5 ವರ್ಷಗಳ ಹಿಂದೆ 2300 ಟನ್‌ಗಳಷ್ಟಿದ್ದ ಕಚ್ಚಾ ರೇಷ್ಮೆ ಆಮದು ಇಂದು 6899 ಟನ್‌ಗಳಿಗೇರಿದೆ. ಇದರ ಜೊತೆಗೆ ಸೂರತ್, ಅಹಮದಾಬಾದ್‌ಗಳ ರೇಷ್ಮೆ ಉದ್ಯಮಪತಿಗಳ ಎಂಜಲು ಕಾಸಿಗೆ ಕಳ್ಳ ಸಾಗಾಣಿಕೆಗೆ ಮುಕ್ತ ಅವಕಾಶ ಕೊಟ್ಟು, ಅಧಿಕೃತವಾಗಿ ಆಮದು ಮಾಡಿಕೊಳ್ಳುವಷ್ಟೇ ಪ್ರಮಾಣದ ರೇಷ್ಮೆ ಕಳ್ಳ ಮಾರ್ಗದಿಂದ ಬರುತ್ತಿದೆ. ಬಾಂಗ್ಲಾದೇಶದ ಆಂತರಿಕ ಅಗತ್ಯ ಕೇವಲ 200 ಟನ್ ಇದ್ದರೆ, ಸುಮಾರು1200 ಟನ್‌ಗಳಷ್ಟು, ನೇಪಾಳದ ಅಗತ್ಯ80 ಟನ್ ಇದ್ದರೆ, ಸುಮಾರು 400 ಟನ್‌ಗಳಷ್ಟು ಚೀನಾದಿಂದ ಆಮದು ಮಾಡಿ, ಅಗತ್ಯಕ್ಕಿಂತ ಹೆಚ್ಚಿರುವ ರೇಷ್ಮೆಯನ್ನು ಭಾರತದೊಳಕ್ಕೆ ತರಲಾಗುತ್ತಿದೆ ಎಂಬ

ಅವೆನ್ಯೂ ರಸ್ತೆಯ ಕೆಲವು ವ್ಯಾಪಾರಸ್ಥರ ಕಣ್ಣೀರು ಒರೆಸಲು, ನಾಡಿನ ಲಕ್ಷಾಂತರ ರೇಷ್ಮೆ ಕೃಷಿಕರ ಕಣ್ಣೀರಿಗೆ ಕಾರಣವಾಗಿರುವ ಮುಖ್ಯಮಂತ್ರಿ ಕೃಷ್ಣ

ಆಗಸ್ಟ್ 17, 2001 ರಂದು ಬೆಂಗಳೂರು ನಗರದ ಪ್ರಮುಖ ರೇಷ್ಮೆ ವ್ಯಾಪಾರಸ್ಥರ ನಿಯೋಗ ಮುಖ್ಯಮಂತ್ರಿಗಳ ನಿವಾಸಕ್ಕೆ ಧಾವಿಸಿ, ರೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ವಿಭಾಗದ ಅಧಿಕಾರಿಗಳ ಕಿರುಕುಳದಿಂದ ತಾವುಗಳು ವ್ಯಾಪಾರವನ್ನು ನಡೆಸಲು ಸಾಧ್ಯವಿಲ್ಲವೆಂದು ತಾವುಗಳು ತಮ್ಮ 'ನ್ಯಾಯಯುತ ವ್ಯಾಪಾರವನ್ನು' ಮುಂದುವರಿಸಬೇಕೆಂದಿದ್ದರೆ ತಕ್ಷಣ ಕಾಯಿದೆ ಜಾರಿ ವಿಭಾಗವನ್ನು ರದ್ದು ಮಾಡಬೇಕೆಂದು ಕಣ್ಣೀರಿಟ್ಟರು. ಪಾಪ, ವ್ಯಾಪಾರಸ್ಥರು ಕಣ್ಣೀರಿಡುವುದನ್ನು ಕಂಡು ಮನಕರಗಿದ ಕರುಣಾಮಯಿ ಸೋಮನಹಳ್ಳಿಯ ರೈತ ಮಗ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಹಿಂದೆ ಮುಂದೆ ನೋಡದೆ 'ವ್ಯಾಪಾರಸ್ಥರಿಗೆ ಸಂಕಟಪ್ರಾಯವಾಗಿರುವ ರೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ವಿಭಾಗವನ್ನು ಕೂಡಲೇ ಸ್ಥಗಿತಗೊಳಿಸಿ' ಎಂದು ಹಸ್ತಾಕ್ಷರಗಳಲ್ಲಿ ಆದೇಶ ನೀಡಿಯೇಬಿಟ್ಟರು.

ಮುಖ್ಯಮಂತ್ರಿಗಳ ಈ ಆಜ್ಞೆಯಿಂದ ಅವೆನ್ಯೂ ರಸ್ತೆ ಇತ್ಯಾದಿ ಕಡೆಗಳಲ್ಲಿ ಬೆಲೆಯಿಲ್ಲದ ಅನಧಿಕೃತ, ಕಳ್ಳಸಾಗಾಣಿಕೆಯ ರೇಷ್ಮೆಯನ್ನು ಹುಡುಕಿ, ಅಂತಹ ವ್ಯಾಪಾರ ಮಾಡುತ್ತಿದ್ದವರ ಮೇಲೆ ಕೇಸು ಹಾಕುವ, ದಂಡವಸೂಲಿ ಮಾಡುತ್ತಿದ್ದ ರೇಷ್ಮೆ ಕಾನೂನು ಮತ್ತು ಕಾಯಿದೆ ವಿಭಾಗದ ಅಧಿಕಾರಿಗಳು ಸಂಪೂರ್ಣ ನಿಷ್ಕ್ರಿಯಗೊಂಡು ಕಛೇರಿಯಲ್ಲಿ ಕಾಲಹರಣ ಮಾಡುವಂತ ಸ್ಥಿತಿ ಉದ್ಭವವಾಯಿತು.

ಇದರಿಂದ ಸಂತಸಗೊಂಡ ವ್ಯಾಪಾರಸ್ಥರು ಕಳ್ಳ ಸಾಗಾಣಿಕೆಯ ರೇಷ್ಮೆಯ 'ನ್ಯಾಯಯುತ' ವ್ಯಾಪಾರವನ್ನು ಮುಕ್ತವಾಗಿ ಮುಂದುವರಿಸಿದರು. ಇದರ ಪರಿಣಾಮ ಚೀನಾದಿಂದ ಅಕ್ರಮವಾಗಿ ಬೆಂಗಳೂರಿಗೆ ಬರುತ್ತಿದ್ದ ರೇಷ್ಮೆ, ಮಾರುಕಟ್ಟೆಯಲ್ಲಿ ತುಂಬಿಹೋಗಿ, ರಾಜ್ಯದ ರೈತರು ಉತ್ಪಾದನೆ ಮಾಡಿದ ರೇಷ್ಮೆ ದರ ಪಾತಾಳಕ್ಕೆ ಕುಸಿಯಿತು, ಈ ಕಾರಣದಿಂದ ರೇಷ್ಮೆ ಗೂಡಿನ ದರ ರೂ. 150-00, 160-00 ರಿಂದ ರೂ. 50-00, 60-00 ರೂಗೆ ಇಳಿದು ನಾಡಿನ ಲಕ್ಷಾಂತರ ರೇಷ್ಮೆ ಕೃಷಿಕರ ಹೊಟ್ಟೆಗೆ ಬೆಂಕಿ ಬಿದ್ದು, ಕಣ್ಣೀರಿಡುವಂತ ಸ್ಥಿತಿ ಉಂಟಾಯಿತು.



ಕಾನೂನು ಜಾರಿ ದಳವನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿಗಳು ತಮ್ಮ ಹಸ್ತಾಕ್ಷರದಲ್ಲಿ ಸ್ಥಳದಲ್ಲೇ ಆಜ್ಞೆ ಹೊರಡಿಸಿದ್ದು

ನಗರದ ಹತ್ತಾರು ವ್ಯಾಪಾರಸ್ಥರು ಕಳ್ಳ ವ್ಯಾಪಾರವನ್ನು ಮುಂದುವರಿಸಲು ರೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ವಿಭಾಗವನ್ನು ಸ್ಥಗಿತಗೊಳಿಸಿದ ಸತ್ಯವನ್ನು ತಿಳಿದ ಲಕ್ಷಾಂತರ ರೈತರು, ರೈತ ಸಂಘಟನೆಗಳು, ಮಾಧ್ಯಮಗಳು, ಕಣ್ಣೀರನ್ನು ನೋಡಿಯೇ ಮನಕರುಗುವ ಸ್ವಭಾವದ ಮುಖ್ಯ ಮಂತ್ರಿಗಳು ಲಕ್ಷಾಂತರ ರೈತರ ಕಣ್ಣೀರನ್ನು ನೋಡಿ, ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿದರು. ಪ್ರತಿಭಟನೆಗಳು ನಡೆಸಿದರು. ಆದರೂ ಜಾರಿ ವಿಭಾಗವನ್ನು ಸಕ್ರಿಯಗೊಳಿಸಲಿಲ್ಲ. ಆಗ ರೈತರಿಗೆ ಗೊತ್ತಾಯಿತು. ಬರೀ ಕಣ್ಣೀರಿಟ್ಟರೆ, ಮುಖ್ಯಮಂತ್ರಿಗಳ ಕಾನೂನು ಮನ ಕರುಗುವುದಿಲ್ಲವೆಂದು ಹಾಗಾಗಿ ಅಂದು ಜಾರಿ ವಿಭಾಗವನ್ನು ಸ್ಥಗಿತಗೊಳಿಸುವ ಸಂದರ್ಭದಲ್ಲಿಯೂ ಸಹ ವ್ಯಾಪಾರಸ್ಥರ ಕಣ್ಣೀರಿಗಿಂತ ಅವರು ನೀಡಿರುವ 'ಭಾರ' ಕಾರಣವೆಂದು. ಇದರಿಂದ ಕುಪಿತಗೊಂಡ ರೈತರು ಪ್ರತಿಭಟನೆಗಳ ಮೂಲಕ 'ಭಾರ' ಅಥವಾ ಒತ್ತಡವನ್ನು ಹಾಕಲು ಶುರುಮಾಡಲಾರಂಭಿಸಿದರು. ಹೀಗೆ ನಡೆದ ಹಲವು ಹೋರಾಟಗಳ ನಂತರ 'ಜಾರಿ ವಿಭಾಗ'ವನ್ನು ಸರ್ಕಾರ ಕಾರ್ಯರೂಪಕ್ಕೆ ತಂದಿದ್ದರೂ ಸಹ ಪರಿಣಾಮಕಾರಿಯಾಗಿ ಕೆಲಸ ನಡೆಸಲು ಬಿಡುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಜನವರಿ-10 ರಂದು ನಡೆಯಲಿರುವ ರೇಷ್ಮೆ ಕೃಷಿಕರ ಅಖಿಲಭಾರತ ಪ್ರತಿಭಟನೆ ರೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ವಿಭಾಗವನ್ನು ಸಕ್ರಿಯಗೊಳಿಸುವುದೇ ಮಾತ್ರವಲ್ಲ ಅದಕ್ಕೆ ಮತ್ತಷ್ಟು ಶಕ್ತಿಯನ್ನು ತುಂಬಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ರಾಜ್ಯ ಸರ್ಕಾರ ಕ್ರಮವಹಿಸಬೇಕೆಂದು ಆಗ್ರಹಿಸುತ್ತಿದೆ.

ಜುಲೈ 26.2002 ರಂದು ರಾಜ್ಯದ ಸರ್ವ ಪಕ್ಷಗಳ ನಿಯೋಗದ ಮುಖಂಡತ್ವವನ್ನು ವಹಿಸಿದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ನೀಡಿದ ಮನವಿಯಲ್ಲಿ ದೇಶದ ಗಡಿಗಳಲ್ಲಿ ರೇಷ್ಮೆ ಕಳ್ಳಸಾಗಾಣಿಕೆಯನ್ನು ತಡೆಯಲು ಜಾಗೃತ ದಳವನ್ನು ಬಲಿಷ್ಠಪಡಿಸಬೇಕೆಂಬ ಅಮೂಲ್ಯ ಸಲಹೆಯನ್ನು ನೀಡಿದ್ದಾರೆ.

ಕಳ್ಳಸಾಗಾಣಿಕೆಯನ್ನು ತಡೆಯಲು ಜಾಗೃತ

ರದಿಗಳೂ ಕೂಡ ಇವೆ. ನಮಗೆ ಈ ಎರಡು ೇಶಗಳ ನಡುವೆ ಇರುವ ಒಪ್ಪಂದಗಳನ್ವಯ ಈ ೇಶಗಳಿಂದ ಆಮದಾಗುವ ವಸ್ತುಗಳಿಗೆ ಆಮದು ುಂಕವಿಲ್ಲ. ಹೀಗಾಗಿ ಅಧಿಕೃತ ಆಮದು ಮತ್ತು ಳ್ಳ ಸಾಗಾಣಿಕೆಯ ಮೂಲಕ ಬರುತ್ತಿರುವ ಕಚ್ಚಾ ೇಷ್ಮೆ ಪ್ರಮಾಣ ಸರಿ ಸುಮಾರು ದೇಶದ ಒಟ್ಟು ುತ್ಪಾದನೆಯ ಶೇ 75 ಕ್ಕಿಂತ ಹೆಚ್ಚು. ರೇಷ್ಮೆ ಕೃಷಿಯ ಿಕ್ಕಟ್ಟಿಗೆ ಇದೂ ಪ್ರಮುಖ ಕಾರಣವಾಗಿದೆ.

ಇದರ ಜೊತೆಗೆ ರಾಜ್ಯದಲ್ಲಿ ಅಧಿಕಾರ ಡೆಸುತ್ತಿರುವ ಕಾಂಗ್ರೆಸ್ ಸರ್ಕಾರವೂ ಸಹ ೇಂದ್ರದ ಆಮದು ನೀತಿಗಳನ್ನೇ ಅನುಸರಿಸುತ್ತಿದೆ. ರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ


ುಬೇಕೆ?

ೇಷ್ಮೆ ಕಾನೂನು ಮತ್ತು ಕಾಯಿದೆ ಜಾರಿ ಿಭಾಗವನ್ನು ಸಂಪೂರ್ಣ ನಿಷ್ಕ್ರಿಯ ಮಾಡಿದೆ. ರೇಷ್ಮೆ ಬೆಳೆಗಾರರು ಮತ್ತು ಉದ್ದಿಮೆದಾರರು ಸಂಕಷ್ಟಕ್ಕೆ ಸಿಲುಕಿರುವಾಗ ಅವರ ನೆರವಿಗೆ ಬರಬೇಕಾದ ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ (KSMB) ಮತ್ತು ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ (KSIC) ಗಳನ್ನು ನಿರ್ಜೀವಗೊಳಿಸಿ ಖಾಸಗೀಕರಣ ಮಾಡಲು ಹೊರಟಿದೆ. ರೇಷ್ಮೆ ಕೃಷಿಕರೇ ನೀಡಿರುವ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ (PSFA) ದ ಖಾತೆಯಲ್ಲಿ ಇರುವ ಕೋಟ್ಯಾಂತರ ರೂ. ಹಣವನ್ನು ಬೆಲೆ ಕುಸಿತದಿಂದ ನರಳುತ್ತಿರುವ ರೇಷ್ಮೆ ಕೃಷಿಕರಿಗೆ ನೀಡುತ್ತಿಲ್ಲ. ಬದಲಿಗೆ ಇತರೆ ವೆಚ್ಚಗಳಿಗೆ ಬಳಸುತ್ತಿದೆ.

ಈ ಎಲ್ಲದರ ಪರಿಣಾಮ ರೇಷ್ಮೆ ಕೃಷಿಕರು ಅಸಂಖ್ಯಾತ ಕಷ್ಟಗಳಿಗೆ ತುತ್ತಾಗುತ್ತಿದ್ದಾರೆ. ಹಲವಾರು ಪ್ರದೇಶಗಳಲ್ಲಿ ರೇಷ್ಮೆ ಕೃಷಿಗೆ ವಿದಾಯ ಹೇಳುತ್ತಿದ್ದಾರೆ. ರೇಷ್ಮೆಯನ್ನೇ ನಂಬಿದ್ದ ಹಲವಾರು ಕುಟುಂಬಗಳು ಬೀದಿಪಾಲಾಗುವ ಹಂತಕ್ಕೆ ತಲುಪಿವೆ.

ಈ ದೇಶದ್ರೋಹಿ, ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು, ಆ ಮೂಲಕ ರೇಷ್ಮೆ ಕೃಷಿಯನ್ನು, ರೈತರನ್ನು ಉಳಿಸಲು ಅಖಿಲ ಭಾರತ ಕಿಸಾನ್ ಸಭಾ(AIKS) ಕೇಂದ್ರ ರೇಷ್ಮೆ ಮಂಡಳಿಯ ಎದುರು ಪ್ರತಿಭಟನೆ ಆಯೋಜಿಸಿದೆ. ಇತರ ಸಂಘಟನೆಗಳು ಇದರಲ್ಲಿ ಕೈಜೋಡಿಸಿವೆ.

ವಾಜಪೇಯಿ ಸರ್ಕಾರ ಆಮದು ಸುಂಕವನ್ನು ಶೇ 44 ರಿಂದ ಶೇ 35 ಕ್ಕೆ ಇಳಿಸಿದೆ. ಇದಕ್ಕೆ ಅವರು ಕೊಡುವ ಕಾರಣ ಸುಂಕ ಹೆಚ್ಚಿಸಿದರೆ ಕಳ್ಳ ಸಾಗಾಣೆ ಹೆಚ್ಚಾಗುತ್ತದೆ ಎಂಬುದು. ನಮ್ಮ ಸೈನಿಕರು, ಸೇನೆಯಿರುವುದು ಕಳ್ಳಸಾಗಾಣೆ ತಡೆಯಲು. ವೊನ್ನೆ ಪಾರ್ಲಿಮೆಂಟ್‌ಗೆ ಉಗ್ರಗಾಮಿಗಳ ದಾಳಿಯಾದಾಗ ಗಡಿಯಲ್ಲಿ ಸೇನೆ ಜಮಾವಣೆ, ವಾಪಸ್ಸು ಕರೆಸಿಕೊಳ್ಳುವ ವೆಚ್ಚ 7000 ಕೋಟಿ ರೂ.ಗಳು. ಆದರೆ ರೇಷ್ಮೆ ಕಳ್ಳಸಾಗಾಣೆ ತಡೆಯಲು ಹಣ ವಿನಿಯೋಗಿಸಿ, ಕೋಟ್ಯಾಂತರ ರೈತರ ಹಿತ ಕಾಯಲು ಇವರ ಬಳಿ ಹಣವಿಲ್ಲ.



ಕೇಂದ್ರ ಜವಳಿ ಸಚಿವ ಕಾಶಿರಾಮ್ ರಾಣ

ಹ ' ಣ ವಿ ಲ್ಲ ಎಂಬುದು ವಾಜಪೇಯಿ ಸರ್ಕಾರದ ಸುಳ್ಳು ನೆಪ. ಅವರು ಆಮದನ್ನು ಕಳ್ಳ ಸಾಗಾಣೆಯನ್ನು ತಡೆಯಲು ತಯಾರಿಲ್ಲ. ಏಕೆಂದರೆ ವಾಜಪೇಯಿ ಸರ್ಕಾರದ ರಕ್ಷಕರೆ ಈ ರೇಷ್ಮೆ ವ್ಯಾಪಾರಿಗಳು. ಸ್ವತಃ ಕೇಂದ್ರ ರೇಷ್ಮೆ ಸಚಿವ ಕಾಶಿರಾಮ್ ರಾಣಾರವರೆ ಅಹಮದಾಬಾದಿನ ಒಬ್ಬ ರೇಷ್ಮೆ ವ್ಯಾಪಾರಿ. ವ್ಯಾಪಾರಿಗಳಿಗೆ ಕಳ್ಳತನದಿಂದತಾನೆ ಹೆಚ್ಚು ಲಾಭ!

ದಳವನ್ನು ಬಲಪಡಿಸಬೇಕೆಂದು ಸಲಹೆಯನ್ನು ನೀಡುವ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಇದೇ ಕೆಲಸವನ್ನು ಮಾಡುತ್ತಿದ್ದ ಕಾಯಿದೆ ಜಾರಿ ವಿಭಾಗ ವನ್ನು ಸ್ಥಗಿತಗೊಳಿಸಲು ಇರುವ ತರ್ಕವೇನು? ಸಿಕ್ಕದ ಸ್ಫೂರ್ತಿಯೇನು?

ಬಹುಶಃ ಎಲ್ಲವನ್ನು ನೋಟಿನ ಕಂತೆಗಳ ಮೂಲಕವೇ ನೋಡುವ ಈ ಮುಖ್ಯಮಂತ್ರಿಗಳಿಗೆ, ತನ್ನಂತೆ ಎಲ್ಲೂ ಕೇಂದ್ರ ಸರ್ಕಾರವು ಸಹ ವ್ಯಾಪಾರಸ್ಥರು ನೀಡುವ 'ಭಾರ'ಗಳಿಗೆ ಮಣಿದು, ರೇಷ್ಮೆ ಕಳ್ಳಸಾಗಾಣಿಕೆಗೆ ಅವಕಾಶ ನೀಡಿದೆಯೇನೊ ಎಂಬ ಗುಮಾನಿ ಬಂದಿರುವುದು ಸಹಜ. ಇದು ಸತ್ಯವು ಹೌದು. ಲಕ್ಷಾಂತರ ರೇಷ್ಮೆ ಕೃಷಿಕರ ಜೀವನವನ್ನು ಹಸನುಗೊಳಿಸಬೇಕಾದ ಕೇಂದ್ರದ ರೇಷ್ಮೆ ಜವಳಿ ಮಂತ್ರಿ ಸ್ವತಃ ಒಬ್ಬ ದೊಡ್ಡ ಕಳ್ಳ ರೇಷ್ಮೆ ವ್ಯಾಪಾರಸ್ಥ. ಅಷ್ಟು ಮಾತ್ರವಲ್ಲ ದೇಶದ ಕಳ್ಳ ವ್ಯಾಪಾರಸ್ಥರ ಮಹಾನಾಯಕರು. ಹೌದು ರೇಷ್ಮೆ ಗೂಡಿನ ಬೆಲೆಗಳು ವಿಪರೀತವಾಗಿ ಕುಸಿದು, ರೈತರು ಸಂಕಷ್ಟ ನಿಲುಕಿರುವಾಗ, ರೇಷ್ಮೆ ಆಮದನ್ನು ನಿಯಂತ್ರಿಸಬೇಕು ಹಾಗೂ ಕಳ್ಳ ಸಾಗಾಣಿಕೆಯನ್ನು ತಡೆಯಲು ಕ್ರಮವಹಿಸಬೇಕೆಂದು ಅಖಿಲಭಾರತ ಕಿಸಾನ್ ಸಭಾ (AIKS)ದ ಅಖಿಲಭಾರತ ಅಧ್ಯಕ್ಷರಾದ ಎಸ್.ರಾಮಚಂದ್ರನ್ ಪಿಳ್ಳೆ ಜುಲೈ 2002ರಲ್ಲಿ ಈ ಮಂತ್ರಿಗೆ ಪತ್ರವನ್ನು ಬರೆದರೆ, ಇದಕ್ಕೆ ಎರಡು ತಿಂಗಳ ನಂತರ. ಉತ್ತರ ಬರೆಯುತ್ತಾ, ರೇಷ್ಮೆ ಆಮದಿನ ಮೇಲೆ ಸುಂಕ 2 ವರ್ಷದಲ್ಲಿ ಇಳಿಸಿರುವುದು ನಿಜ, ಶೇ44.04 ರಿಂದ ಶೇ.35.02ಕ್ಕೆ ಇಳಿಸಲಾಗಿದೆ ಮತ್ತು ಇದನ್ನು ಶೇ40ಕ್ಕೆ ಏರಿಸಬೇಕೆಂದು ಪ್ರಯತ್ನಿಸಲಾಗುತ್ತಿದೆ ಎಂದು ಹೇಳುತ್ತಾ, ಸುಂಕ ಇಳಿಕೆ ಇತ್ಯಾದಿ ಕ್ರಮಗಳಿಂದ ತೀರ ದೊಡ್ಡ ಪ್ರಮಾಣದಲ್ಲಿ ರೇಷ್ಮೆ ಆಮದು ಆಗಿಲ್ಲವೆಂದು, ದೇಶದಲ್ಲಿ ಆಂತರಿಕ ಉತ್ಪಾದನೆ ಹೆಚ್ಚಾಗಿರುವುದರಿಂದ ಬೆಲೆಗಳಲ್ಲಿ ಸ್ವಲ್ಪ ಏರುಪೇರಾಗಿದೆಯೆಂಬ ಹುಸಿ ಸುಳ್ಳುಗಳನ್ನು ಹೇಳಿದ್ದಾರೆ.

ಇವರ ವಾದಕ್ಕೆ ಕಾರಣವೇನು ಎಂಬುದು ಮತ್ತೆ ಎಲ್ಲರಿಗೂ ಗೊತ್ತಿರುವ ವಿಷಯವೇ?

ಹೀಗಾಗಿ ಕೆಲವೇ ಕೆಲವು ವ್ಯಾಪಾರಸ್ಥರಿಗೆ ನೂರಾರು ಕೋಟಿ ಅಕ್ರಮ ಲಾಭ ಮಾಡಿ ಕೊಡಲು ಕಾನೂನುಗಳನ್ನು ರೂಪಿಸುತ್ತಿರುವ ಈ ಬಂಡವಾಳಗಾರ ಪರವಾದ ಸರ್ಕಾರಗಳ ನೀತಿಗಳ, ಬದಲಾವಣೆಗಾಗಿ ಹೋರಾಟ ಮಾಡುವುದೇ ಇವತ್ತಿನ ತುರ್ತು ಅಗತ್ಯವಾಗಿದೆ. ರೈತ ವಿರೋಧಿ ನೀತಿಗಳನ್ನು ರೂಪಿಸುವುದರಲ್ಲಿ ಆಳುವ ಪಕ್ಷಗಳು ಒಂದಾಗುತ್ತಿರುವ ಹಿನ್ನೆಲೆಯಲ್ಲಿ ಈ ನೀತಿಗಳಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರು ಒಂದಾಗಿ, ಪಕ್ಷಾತೀತವಾಗಿ ಹೋರಾಟಗಳನ್ನು ನಡೆಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರೇಷ್ಮೆ ಕೃಷಿಕರ ವಿಶಾಲವಾದ ಚಳುವಳಿ ಒಂದು ಪ್ರಮುಖ ಹಂತವಾಗಿದ್ದು, ಇದನ್ನು ಮುಂದುವರಿಸಬೇಕು ಮತ್ತು ಬಲಪಡಿಸಬೇಕಿದೆ.

- ಜಿ.ಸಿ.ಬಯ್ಯಾರೆಡ್ಡಿ

ರೇಷ್ಮೆ ಕೃಷಿ ಕುರಿತು ಐಕ್ಯರಂಗ ಸಂದರ್ಶನ ನಂಜಪ್ಪರೆಡ್ಡಿ ಮುತ್ತಾನಲ್ಲೂರು ರವರೊಡನೆ

ಸಂದರ್ಶನ - ಕೃಷ್ಣೇಗೌಡ ಟಿ.ಎಲ್

ಐಕ್ಯರಂಗ: ಈಗಿನ ಸನ್ನಿವೇಶದಲ್ಲಿ ಒಟ್ಟಾರೆ ರೇಷ್ಮೆ ಕೃಷಿ, ಉದ್ದಿಮೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಂಜಪ್ಪರೆಡ್ಡಿ: ಈವತ್ತು ರೈತರಿಗೆ ಏನೂ ಸಿಗುತ್ತಿಲ್ಲ. 10-12 ವರ್ಷಗಳ ಹಿಂದೆ ರೇಷ್ಮೆಗೆ ಸಿಗುತ್ತಿದ್ದ ಬೆಲೆಯೇ ಈಗಲೂ ಸಿಗುತ್ತಿದೆ. ಆದರೆ ಉತ್ಪಾದನಾ ವೆಚ್ಚ 2-3 ಪಟ್ಟು ಹೆಚ್ಚಾಗಿದೆ. ರಸಗೊಬ್ಬರ 100-125 ರೂಗಳಿಂದ 350-400 ರೂಗಳಿಗೆ ಏರಿದೆ, ಕೊಟ್ಟಿಗೆ ಗೊಬ್ಬರ 150 ರೂ.ನಿಂದ 1000 ರೂ ಆಗಿದೆ. ಇದು ಹೀಗೆ ಮುಂದುವರೆದರೆ ರೇಷ್ಮೆ ಉದ್ಯಮ ಯಾವ ಕಾರಣದಿಂದಲೂ ಉಳಿಯಲು ಸಾಧ್ಯವಿಲ್ಲ.

● ಒಟ್ಟಾರೆಯಾಗಿ ರೈತ ಎದುರಿಸುವ ಕಷ್ಟಗಳಾವುವು?

ನೋಡಿ, ಮೊಟ್ಟೆ ತರುವುದರಿಂದ ಆರಂಭಿಸಿ, ಮಾರುಕಟ್ಟೆಯಿಂದ ಹಣ ತರುವವರೆಗೆ ರೈತರಿಗೆ ಅನೇಕ ಕಷ್ಟಗಳಿವೆ. ಅದರಲ್ಲಿ ಸರಿಯಾದ ಮೊಟ್ಟೆ ತರಬೇಕು, ಸಾಕಾಣಿಕೆಯಲ್ಲಿ ವಿಶೇಷ ಕಾಳಜಿ ವಹಿಸಬೇಕು, ಹುಳುಗಳನ್ನು ಬೆಳೆಸಲು ಎಲ್ಲಾ ವಾತಾವರಣಕ್ಕೂ ಅನುಕೂಲವಾಗಲು ಮನೆ ಬೇಕು, ಇಷ್ಟೆಲ್ಲಾ ಆಗಿ ಗೂಡನ್ನು ಮಾರುಕಟ್ಟೆಗೆ ಕೊಂಡೊಯ್ದರೆ ಅಲ್ಲಿನ ವ್ಯವಸ್ಥೆಗಳು ರೈತರಿಗೆ ತುಂಬಾ ಅನಾನುಕೂಲಕಾರಿ, ದಲ್ಲಾಳಿಗಳ ಮೋಸ, ತೀವ್ರವಾಗಿ ಕುಸಿತಗೊಂಡಿರುವ ಬೆಲೆ ಹೀಗೆ ಹತ್ತಾರು ಸಮಸ್ಯೆಗಳು.

● ಹಾಗಾದರೆ ಮನೆ ಹೇಗಿರಬೇಕು? ಈ ರೀತಿಯ ಮನೆ ಕಟ್ಟಿಕೊಳ್ಳಲು ರೈತರಿಗೆ ಸಾಧ್ಯವೇ, ಸರ್ಕಾರದಿಂದ ಏನಾದರೂ ಸಹಾಯ ಸಿಗುತ್ತಿದೆಯೆ?

ಮನೆ ಎಲ್ಲಾ ವಾತಾವರಣವನ್ನು ತಡೆಯುವಂತಿರಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಚಳಿ-ಬಿಸಿಲು ಎರಡನ್ನು ಬ್ಯಾಲೆನ್ಸ್ ಮಾಡುವಂತಿರಬೇಕು. ಪ್ರತ್ಯೇಕವಾದ ಮನೆಯಿರಬೇಕು, ವಾಸದ ಮನೆಯಲ್ಲೇ ರೇಷ್ಮೆ ಬೆಳೆಯಲು ಸಾಧ್ಯವಿಲ್ಲ. ಸುಮಾರು 100 ಮೊಟ್ಟೆಯ ರೇಷ್ಮೆ ಹುಳು ಬೆಳೆಯಲು 300 ಚದರ ಅಡಿಗಳ ಮನೆ ಬೇಕು. ಈ ಮನೆ ಕಟ್ಟಲು ಒಂದೂವರೆ ಲಕ್ಷ ರೂ.ಗಳು ಬೇಕು. ಸಾಮಾನ್ಯ ರೈತರಿಗೆ ಇಷ್ಟು ಹಣ ತೊಡಗಿಸುವುದು ಸಾಧ್ಯವಿಲ್ಲ, ಸರ್ಕಾರ ಕೇವಲ 25,000 ರೂ. ಸಹಾಯಧನವನ್ನು ಕೊಡ್ತಾ ಇದೆ. ಇದರಿಂದ ಏನೂ ಪ್ರಯೋಜನವಿಲ್ಲ. ಸರ್ಕಾರ ನಿರ್ದಿಷ್ಟವಾಗಿ ಯೋಜನೆಗಳನ್ನೇನೂ ಕೊಡ್ತಿಲ್ಲ. ರೈತರೇ ತಮ್ಮ ಸ್ವಂತ ಅನುಭವದಿಂದ ಇದನ್ನು ಕಂಡುಕೊಂಡಿದ್ದಾರೆ.

● ಅನುಕೂಲಕರ ವಾತಾವರಣವನ್ನು ಕಾಪಾಡಿಕೊಳ್ಳುವುದು ಹೇಗೆ?

ಮನೆ ಸುತ್ತ ಮರ ಬೆಳೆಸಬೇಕು, ಬೇಸಿಗೆಯಲ್ಲಿ ಬಿಸಿಲಿನ ತಾಪ ತಡೆಯಲು thermocoal ನಿಂದ ರಕ್ಷಣೆ ನೀಡಬೇಕು, ಅನಾವಶ್ಯಕವಾಗಿ ರಾಸಾಯನಿಕಗಳನ್ನು ಬಳಸಬಾರದು. ಕೆಲವು ಕಾಲಗಳಲ್ಲಿ ಕೆಲವು ರಾಸಾಯನಿಕಗಳನ್ನು ಮಾತ್ರ ಬಳಸಬೇಕು.

● ಮನೆಯಷ್ಟೇ ರೇಷ್ಮೆ ಸೊಪ್ಪು ಬೆಳೆಸುವ ತೋಟವೂ ಮುಖ್ಯ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ತೋಟ ಬಹಳ ಮುಖ್ಯವಾದ ಅಂಗ. ನಮ್ಮಲ್ಲಿ ಏಕರೂಪತೆ ಇಲ್ಲ, ವಿಪರೀತ ಭಿನ್ನತೆಗಳಿವೆ. ಕೋಲಾರದಲ್ಲಿ ಒಂದು ರೀತಿಯಾದರೆ ಮಂಡ್ಯದಲ್ಲಿ ಮತ್ತೊಂದು ರೀತಿ ತೋಟ ಬೆಳೆಸುತ್ತಾರೆ. ರೈತರಿಗೆ ನಿರ್ದಿಷ್ಟವಾದ ಮಾಹಿತಿ, ಸಲಹೆಗಳಿಲ್ಲ. ನಮ್ಮಲ್ಲಿ ಎಲ್ಲಾ ಋತುಗಳಲ್ಲಿ ರೇಷ್ಮೆ ಬೆಳೆಯಲು ಅವಕಾಶವಿದೆ. ಇದಕ್ಕೆ ಸಾವಯುವ ಗೊಬ್ಬರ ಬೇಕು, ನಿರಂತರವಾಗಿ ನೀರು ಬೇಕು, ಹೀಗಾದಾಗ ಗುಣಮಟ್ಟ, ಇಳುವರಿ ಎರಡನ್ನು ಹೆಚ್ಚಿಸಬಹುದು.

ಈಗ ನೀರಿನದು ದೊಡ್ಡ ಸಮಸ್ಯೆಯಾಗಿದೆ, ಸರಿಯಾಗಿ ವಿದ್ಯುತ್ ಇಲ್ಲ. ಆದ್ದರಿಂದ ಸರಿಯಾದ ಸಮಯಕ್ಕೆ ನೀರುಣಿಸಲು ಕಷ್ಟ. ಕೋಲಾರದಂತಹ ಕಡೆ ಅಂತರ್ಜಲ ಕುಸಿದಿರುವುದು ಆತಂಕವನ್ನು ಹೆಚ್ಚಿಸಿದೆ. ಸರ್ಕಾರ ಇದರ ಬಗ್ಗೆ ಗಂಭೀರ ಗಮನ ಹರಿಸಬೇಕು.

● ಮಾರುಕಟ್ಟೆಯಲ್ಲಿ ಪರಿಸ್ಥಿತಿ ಹೇಗಿದೆ?

ಬೇರೆ ಮಾರುಕಟ್ಟೆಗಳಿಗೆ ಹೋಲಿಸಿದರೆ ರೇಷ್ಮೆ ಗೂಡಿನ ಮಾರುಕಟ್ಟೆಗಳು ಪರವಾಗಿಲ್ಲ. ಆದರೂ ಇಲ್ಲಿ ಸ್ಥಳಾಭಾವವಿದೆ, ಹೆಚ್ಚಿನ ಗೂಡು ಬಂದಾಗ ನೆಲದಲ್ಲೇ ಹಾಕಿಕೊಳ್ಳಬೇಕಾಗುತ್ತೆ, ಹೊಸ ರೈತರು ಬಂದರೆ ದಲ್ಲಾಳಿಗಳು ತುಂಬಾ ವಂಚನೆ ಮಾಡುತ್ತಾರೆ. ತೂಕದಲ್ಲಿಯೂ ಸ್ವಲ್ಪ ಪ್ರಮಾಣದ ಮೋಸಗಳಿವೆ. ಮಾರುಕಟ್ಟೆಗಳಲ್ಲಿ ರೈತರಿಗೆ ಶೌಚಾಲಯಗಳಿಲ್ಲ, ನೀರಿನ ವ್ಯವಸ್ಥೆಯಿಲ್ಲ, ವಿಶ್ರಾಂತಿಗೆ ಅವಕಾಶವಿಲ್ಲ, ರಾತ್ರಿ ಉಳಿಯಲು



ಅವಕಾಶವಿಲ್ಲ, ಒಮ್ಮೊಮ್ಮೆ ಹಣ ಪಾವತಿಯಾಗುವುದು ತಡವಾಗುತ್ತದೆ, ಆಗ ರೈತರಿಗೆ ಉಳಿಯಲು ಮಾರುಕಟ್ಟೆಯಲ್ಲಿ ಅವಕಾಶವಿಲ್ಲದಿರುವುದರಿಂದ ಅವರು ರಾತ್ರಿಯೇ ಪ್ರಯಾಣ ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಹಣ ಕಳೆದುಕೊಂಡ ರೈತರು ಅನೇಕ. ಹಣವನ್ನು ಕಳೆದಕೊಂಡ ಕೆಲವರು ಆತ್ಮಹತ್ಯೆಯನ್ನು ಕೂಡ ಮಾಡಿಕೊಂಡಿದ್ದಾರೆ

● ಉತ್ಪಾದನೆಯನ್ನು ಹೆಚ್ಚಿಸಲು ನಿಮ್ಮ ಸಲಹೆ ಏನು?

ನಿರಂತರವಾಗಿ ಸಂಶೋದನೆ ನಡೆಸಬೇಕು, ನಮ್ಮ ವಾತಾವರಣಕ್ಕೆ, ಋತುಮಾನಕ್ಕೆ ಅನುಗುಣವಾಗಿ ಹೈಬ್ರಿಡ್ ತಳಿಗಳನ್ನು ಕಂಡುಹಿಡಿಯಬೇಕು. ಈಗ ಆಂಧ್ರಪ್ರದೇಶದಲ್ಲಿ ಸ್ವರ್ಣಾಂಧ್ರ ಎಂಬ ಒಂದು ತಳಿ ಕಂಡುಹಿಡಿಯು

ಪುಟ 8 ಕ್ಕೆ


ನಂಜಪ್ಪರೆಡ್ಡಿ ಮುತ್ತಾನಲ್ಲೂರು ಇವರೊಡನೆ ಸಂದರ್ಶನ

ಪುಟ 7 ರಿಂದ

ಲಾಗಿದೆ. ಇಳುವರಿ 1.5 ಪಟ್ಟು ಹೆಚ್ಚು ಬರುತ್ತದೆ. ಮುಖ್ಯ ರೋಗವಾದ ಸಪ್ಪೆ ರೋಗ ಇದಕ್ಕೆ ಬರಲ್ಲ, 22 ದಿನಗಳಲ್ಲೆ ಬೆಳೆ ಬರುತ್ತದೆ. ನಮ್ಮಲ್ಲಿರುವ ಸಿ.ಎಸ್.ಆರ್ ತಳಿಯಿಂದ ಸಾಮಾನ್ಯ ರೈತರಿಗೇನೂ ಪ್ರಯೋಜನವಿಲ್ಲ. ಹೈಟೆಕ್ ರೈತರು ಮಾತ್ರವೇ ಈ ತಳಿಯನ್ನು ಬೆಳೆಯಲು ಸಾಧ್ಯ.

● ಗುಣಮಟ್ಟ ಹೆಚ್ಚಿಸುವುದು ಹೇಗೆ?

ಗುಣಮಟ್ಟ ಹೆಚ್ಚಿಸಲು ಮುಖ್ಯವಾಗಿ ದೊಡ್ಡ ರೀಲರುಗಳು ಬೇಕು. ಸಣ್ಣ ರೀಲರುಗಳಿಂದ ನೂಲಿನ ಗುಣಮಟ್ಟ ಕಾಪಾಡಲು ಸಾಧ್ಯವಿಲ್ಲ. ಆದ್ದರಿಂದ ಉತ್ತಮ ಗುಣಮಟ್ಟದ ಗೂಡನ್ನು ಬೆಳೆದರೂ ದಾರದ ಗುಣಮಟ್ಟವನ್ನು ಕಾಪಾಡಲು ಸಾಧ್ಯವಿಲ್ಲ. ಉತ್ತಮ ಗುಣಮಟ್ಟದ ದಾರವಿಲ್ಲದೆ



ರೈತರಿಗೆ ಉತ್ತಮ ಬೆಲೆ ಕೂಡ ನೀಡಲು ಸಾಧ್ಯವಿಲ್ಲ. ಆದ್ದರಿಂದ ಸರಕಾರ ಇದರಲ್ಲಿ ಮುಖ್ಯಪಾತ್ರ ವಹಿಸಬೇಕು.

● ವಿದೇಶಗಳಿಗೆ ನೀವು ಬೇಟಿ ನೀಡಿದ್ದೀರಿ. ನಿಮ್ಮ ಅನುಭವಗಳೇನು?

ಅವರಿಗೆ ಅವರದೇ ಆದ ತಳಿಗಳಿವೆ. ವಿಶೇಷವಾಗಿ ಜಪಾನ್ ಮತ್ತು ಕೋರಿಯಾಗಳಲ್ಲಿ ಪ್ರತಿಯೊಂದನ್ನು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ಮಾಡುತ್ತಾರೆ. ಅಲ್ಲಿ ಸರಾಸರಿ ಉತ್ಪಾದನೆ 60 ಕೆ.ಜಿ. ಇದೆ. 125 ಕೆ.ಜಿಯವರೆಗೂ ರೇಷ್ಮೆ ಬೆಳೆಯುವ ರೈತರಿದ್ದಾರೆ. ಅಲ್ಲಿ ಯಾವ ರೋಗದ ಸುಳಿವೂ ಇಲ್ಲ. ಅಲ್ಲಿ ತೋಟ ಬೆಳೆಸುವ ವಿಧಾನವು ತುಂಬಾ ವೈಜ್ಞಾನಿಕ.

● ಈ ದಿನ ರೇಷ್ಮೆ ರಂಗದಲ್ಲಿ ಜಪಾನ್ ಮತ್ತು ಕೋರಿಯಾಗಳನ್ನು ಮೀರಿ ಚೀನಾ ಮುಂದೆ ಹೋಗಲು ಕಾರಣವೇನು?

ನೋಡಿ, ಚೀನಾದ ಯಶಸ್ಸಿಗೆ ಕಾರಣ ಅದೊಂದು ಕಮ್ಯುನಿಸ್ಟ್ ರಾಷ್ಟ್ರ. ಅಲ್ಲಿ ನನ್ನದು ಎನ್ನುವುದು ಏನೂ ಇಲ್ಲ. ಎಲ್ಲರೂ ದುಡಿಯಬೇಕು. ಅಲ್ಲಿ ಪ್ರತಿಯೊಂದೂ ಸರಕಾರದ್ದೇ ಜವಾಬ್ದಾರಿ. ಆದ್ದರಿಂದ ಹೆಚ್ಚಿನ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಾರೆ. ಮೊಟ್ಟೆ, ರೋಗನಿಯಂತ್ರಣ, ಮಾರುಕಟ್ಟೆ ಎಲ್ಲವನ್ನು ಸರಕಾರವೇ ನಿಭಾಯಿಸುವುದರಿಂದ ರೈತ ನಿರಾಳವಾಗಿರುತ್ತಾನೆ. ಸರಕಾರವೇ ರೀಲರ್‌ಗಳನ್ನು ನಿರ್ವಹಿಸುವುದರಿಂದ ದೊಡ್ಡ ರೀಲರ್‌ಗಳನ್ನು ಬಳಸಲು ಸಾಧ್ಯವಾಗಿದೆ. ಹಾಗಾಗಿ ಗುಣಮಟ್ಟದ ದಾರ ತೆಗೆದು ಕಡಿಮೆ ಬೆಲೆಗೆ ಮಾರಲು ಸಾಧ್ಯವಾಗುತ್ತದೆ. ಆದ್ದರಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚೀನಾದ ರೇಷ್ಮೆಗೆ ಭಾರೀ ಬೇಡಿಕೆ. ಚೀನಾದ ಸರಕಾರ ಮತ್ತು ರೈತರ ಶ್ರಮದ ಫಲವಾಗಿ ಆಧುನಿಕ ಉಪಕರಣಗಳಿಂದ ಭಾರೀ ಗುಣಾತ್ಮಕ ರೇಷ್ಮೆ ಬೆಳೆಯಲು ಸಾಧ್ಯವಾಗಿದೆ. ಮಾರುಕಟ್ಟೆ ಬೆಲೆ, ಬಗ್ಗೆ ಕೂಡಾ ರೈತರು ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಚೀನಾದಲ್ಲಿ ರೈತರ ಶ್ರಮ ವ್ಯರ್ಥವಾಗಿಲ್ಲ. ಜಪಾನ್ ಕೋರಿಯಾದಿಂದ ಕೂಡಾ ಈ ರೀತಿ ಮಾಡಲು ಸಾಧ್ಯವಾಗಿಲ್ಲ. ಚೀನಾ ಹೇಗೆ ಮುಂದುವರಿದು ನಾವು ಈಗಿರುವಂತೆಯೇ ಇದ್ದರೆ ನಮ್ಮ ಉದ್ಯಮ ಉಳಿಯಲು ಸಾಧ್ಯವೇ ಇಲ್ಲ.

● ಈಗಿನ ಆಮದು ನೀತಿಯಿಂದ ಯಾವ ರೀತಿಯ ತೊಂದರೆಯಾಗಿದೆ?

ಖಂಡಿತಾ ತೊಂದರೆಯಾಗಿದೆ. ಆಮದು ನೀತಿಯಿಂದ ವಿದೇಶಿ ರೇಷ್ಮೆ ಮುಕ್ತವಾಗಿ ನಮ್ಮ ದೇಶಕ್ಕೆ ಬರುತ್ತಿದೆ. ನಮ್ಮ ರೇಷ್ಮೆಯ ಗುಣಮಟ್ಟ ಕಡಿಮೆ. ಹಾಗಾಗಿ ವ್ಯಾಪಾರಿಗಳು ವಿದೇಶೀ ರೇಷ್ಮೆಯನ್ನೇ ಬಯಸುತ್ತಾರೆ. ಆದ್ದರಿಂದ ತಕ್ಷಣ ಆಮದು ನೀತಿಯನ್ನು ತಡೆಗಟ್ಟಬೇಕು. ಇಲ್ಲದಿದ್ದರೆ ನಮ್ಮ ಉದ್ಯಮಕ್ಕೆ ಉಳಿಗಾಲವಿಲ್ಲ.

● ರೈತರಿಗೆ ಇಷ್ಟೆಲ್ಲಾ ತೊಂದರೆಯಾದರೂ ಸರಕಾರವೇಕೆ ಈ ನೀತಿಯನ್ನು ಮುಂದುವರಿಸುತ್ತಿದೆ?

ಈ ಸರಕಾರವನ್ನು ಬಾಂಬೆ, ಸೂರತ್ ಅಹಮ್ಮದಾಬಾದ್‌ಗಳಲ್ಲಿರುವ ರೇಷ್ಮೆ ವ್ಯಾಪಾರಿಗಳು ನಿಯಂತ್ರಿಸುತ್ತಿದ್ದಾರೆ. ಸರಕಾರಕ್ಕೆ ಅಪಾರ ಲಂಚ ನೀಡಿ ತಮಗೆ ಲಾಭ ತರುವ ವಿದೇಶಿ ರೇಷ್ಮೆಯೇ ಭಾರತದೊಳಗೆ ಬರುವಂತೆ ನೋಡಿಕೊಳ್ಳುತ್ತಾರೆ. ಆದ್ದರಿಂದ ನಮ್ಮ ರೈತರು ರೇಷ್ಮೆ ಉದ್ಯಮಕ್ಕೆ ಭಾರೀ ಗಂಡಾಂತರ ಕಾದಿದೆ.

● ರೈತರಿಗೆ ನಿಮ್ಮ ಸಲಹೆ ಏನು?

ಹೊಸದಾಗಿ ಈ ಕ್ಷೇತ್ರಕ್ಕೆ ಬರುತ್ತಿರುವ ರೈತರಿಗೆ, ಭಾರೀ ನಿರಾಶೆಯಾಗುತ್ತಿದೆ. ಆದರೆ ರೈತರು ನಿರಾಶರಾಗಬೇಕಾದ ಅಗತ್ಯವಿಲ್ಲ. ಎಲ್ಲರೂ ಒಟ್ಟಾಗಿ ಈ ಆಮದು ನೀತಿಯನ್ನು ಪ್ರತಿಭಟಿಸಬೇಕು. ಎಲ್ಲರೂ ಒಂದಾಗಿ ಹೋರಾಡಿದಾಗ ಮಾತ್ರವೇ ನಾವು ಉಳಿಯಲು ಸಾಧ್ಯ ನಮ್ಮ ಉದ್ದಿಮೆ, ನಮ್ಮ ರೈತರು ಉಳಿಯಲು, ಬೆಳೆಯಲು ಸಾಧ್ಯ.

○

ರೇಷ್ಮೆ ಕೃಷಿ ಉದ್ಧಾರ ಮಾಡುವ ಕೇಂದ್ರ-ರಾಜ್ಯ ಸರ್ಕಾರಗಳ ಕೆಲವು ಸ್ಯಾಂಪಲ್ಲುಗಳು

ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ(KSMB) ರೇಷ್ಮೆ ಖರೀದಿಸುವ, ಬೆಲೆಗಳಲ್ಲಿ ಕುಸಿತವಾಗದಂತೆ ಸ್ಥಿರತೆಯನ್ನು ಕಾಯುವ ಒಂದು ಮಂಡಳಿ. ಇದರಿಂದ ರೈತರಿಗೂ, ರೇಷ್ಮೆ ಕೃಷಿಗೂ ಸಾಕಷ್ಟು ರಕ್ಷಣೆ ಸಿಕ್ಕಿತ್ತು. ಈ ಮಂಡಳಿಯಲ್ಲಿದ್ದ ಒಟ್ಟು ಬಂಡವಾಳ 30 ಕೋಟಿ ರೂ.ಗಳು. ರೇಷ್ಮೆ ಬೆಲೆಯಲ್ಲಿ ಹೆಚ್ಚಳವಾಗಿದ್ದಾಗ 28 ಕೋಟಿ ರೂ.ಗಳ ರೇಷ್ಮೆದಾರ ಖರೀದಿಸಿ ಮಂಡಳಿ ಕೊಡಿಟ್ಟಿದೆ. ಈಗ ಬೆಲೆ ಕುಸಿದಿರುವುದರಿಂದ ಮಾರಾಟ ಮಾಡಿದರೆ ಮಂಡಳಿಗೆ ನಷ್ಟ. ತನ್ನ 30 ಕೋಟಿ ಬಂಡವಾಳದಲ್ಲಿ 28ಕೋಟಿ ಹೀಗೆ ಬಿದ್ದಿದೆ. ಅಂದರೆ ಮಂಡಳಿಯಲ್ಲಿ ಈಗ ಕೇವಲ 2 ಕೋಟಿ ರೂ ಮಾತ್ರ ಬಂಡವಾಳ ಇದೆ. ಇಂತಹ ಸನ್ನಿವೇಶದಲ್ಲಿ ರಾಜ್ಯ ಸರ್ಕಾರ ಮಾಡಬೇಕಾದ ಕೆಲಸವೆಂದರೆ ಈ ಮಂಡಳಿಗೆ ಒಂದಷ್ಟು ಹಣ ಸಹಾಯ ಮಾಡಿ ರೈತರ ನೆರವಿಗೆ ಬರುವಂತೆ ಮಂಡಳಿಯನ್ನು ಕ್ರಿಯಾಶೀಲ ಗೊಳಿಸಬೇಕಾದ್ದು, ಆದರೆ ಕೃಷ್ಣ ಸರ್ಕಾರ ಮಾಡಿರುವುದು ಆ 2 ಕೋಟಿ ರೂ.ಗಳನ್ನು ಖರ್ಚು ಮಾಡಿ, ಮಂಡಳಿಯನ್ನು ದಿವಾಳಿ ಎಬ್ಬಿಸಲು ರಾಜಕೀಯ ವ್ಯಕ್ತಿಯೊಬ್ಬರನ್ನು ಆ ಮಂಡಳಿಗೆ ಅಧ್ಯಕ್ಷರಾಗಿ ನೇಮಿಸಿ, ಅವರಿಗೆ ಕಾರು, ತಿಂಗಳಿಗೆ 25 ಸಾವಿರ ಸಂಬಳ, ಒಬ್ಬ ರಾಜ್ಯ ದರ್ಜೆ ಸಚಿವರಿಗೆ ಕೊಡುವ ಸಕಲ ಸೌಕರ್ಯಗಳು!

ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ (KSIC)ದಲ್ಲಿ 5000-6000 ನೌಕರರಿದ್ದಾರೆ. ಅವರಿಗೆ ಈಗ ಕೆಲಸವಿಲ್ಲ. ಅವರಿಗೆ ಕೆಲಸ ನೀಡಲು ಕೆಎಸ್‌ಐಸಿ ಬಳಿ ಹಣವಿಲ್ಲ. ಕೃಷ್ಣ ಸರ್ಕಾರ ಕೆಎಸ್‌ಐಸಿಗೆ ಹಣ ಸಹಾಯಮಾಡುವ ಬದಲು ಖಾಸಗೀಕರಣಗೊಳಿಸಿ ಕೆಎಸ್‌ಐಸಿಯನ್ನು ದಿವಾಳಿ ಮಾಡಲು ರಹದಾರಿ ನೀಡಿರುವುದು.


........ತಲ್ಲಣಗಳ ವರುಷ

ಪುಟ 5 ರಿಂದ

ಕೈಬಿಡಬೇಕಾಯ್ತು. ಹರ್ಷದ್ ಮೆಹ್ತಾ ಹಗರಣದಲ್ಲಿ ಸಾವಿರಾರು ಕೋಟಿ ರೂ. ನಷ್ಟವಾಗಿದ್ದು, ಸ್ಟೇಟ್ ಬ್ಯಾಂಕ್ 800 ಕೋಟಿ ರೂ. ಹಣವನ್ನು 'ಕೆಟ್ಟ ಸಾಲ' ಎಂದೇ ತೋರಿಸುತ್ತದೆ. ಅಷ್ಟರಲ್ಲಿ ಬಿಜೆಪಿಯ ಪ್ರಮುಖರಿಗೆ ಆಪ್ತರಾದ ಖೇತನ್ ಪರೇಖ್ ಮತ್ತು ಭನ್ಸಾಲಿ ಎಂಬ ದಲ್ಲಾಳಿಗಳು ಇನ್ನೊಂದು ಹಗರಣವನ್ನೇ ಸೃಷ್ಟಿಸಿದರು.

ಶಿಕ್ಷಣದಲ್ಲಿ ಕೇಸರೀಕರಣ

ಮುಗ್ಧ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸುವುದಕ್ಕಾಗಿ ವಿವಿಧ ತರಗತಿಗಳ



ಇತಿಹಾಸದ ಪುಸ್ತಕಗಳಲ್ಲಿ ಧರ್ಮಾಂಧತೆಯನ್ನು ತುರುಕಲಾಗುತ್ತಿದೆ. ಉನ್ನತ ಶೈಕ್ಷಣಿಕ ಹುದ್ದೆಗಳಲ್ಲಿ ಸಂಘಪರಿವಾರದ ಹಿತೈಷಿಗಳು ನೇಮಕಗೊಳ್ಳುತ್ತಿದ್ದಾರೆ. ಇದನ್ನು ವಿರೋಧಿಸಿದ ಚರಿತ್ರಕಾರರನ್ನು 'ಮಾರ್ಕ್ಸ್‌ವಾದಿಗಳು' ಎಂದು ಬ್ರಾಂಡ್ ಮಾಡಲಾಗುತ್ತಿದೆ'.

ಶ್ರೀಮಂತರಿಗೆ ರಿಯಾಯಿತಿ ಬಡವರ ಮೇಲೆ ತೆರಿಗೆ

ಶ್ರೀಮಂತರಿಗೆ, ಕೈಗಾರಿಕಾ ಉದ್ದಿಮೆದಾರರಿಗೆ ಹೇರಳ ರಿಯಾಯಿತಿ ನೀಡಿದ ಬಿಜೆಪಿ ಸರಕಾರ, ಬಡ ಮಧ್ಯಮ ವರ್ಗದ ಮೇಲೆ ತೆರಿಗೆಗಳ ಹೊರೆಯನ್ನು ಹೇರಿದೆ. ಸುಧಾರಣೆಯ ಹೆಸರಿನಲ್ಲಿ ಇತ್ತೀಚೆಗೆ ವರದಿ ನೀಡಿದ ಸಮಿತಿ ಹೆಚ್ಚು ಆದಾಯ ಉಳ್ಳವರಿಗೆ ಆದಾಯ ತೆರಿಗೆಯನ್ನು ಕಡಿಮೆ ಮಾಡಿದೆ. ಕಡಿಮೆ ಆದಾಯ ಹೊಂದಿದ ಮಧ್ಯಮ ವರ್ಗದವರಿಗೆ ತೀರಾ ನಷ್ಟವುಂಟಾಗಿದೆ. ಆದಾಯದ ಮಿತಿ ಹೆಚ್ಚಿಸಿದರೂ. ಉಳಿತಾಯದ ಮೂಲಕ ತೆರಿಗೆ ಕಡಿಮೆ ಮಾಡಿಕೊಳ್ಳಬಹುದಾದ ಅಂಶಗಳನ್ನು ಕೈಬಿಟ್ಟಿದೆ. ಇದರಿಂದ ಒಟ್ಟು ತೆರಿಗೆಯನ್ನು ಜಾಸ್ತಿ ತೆರಬೇಕಾಗುತ್ತದೆ.

ಗುಜರಾತ್ ಚುನಾವಣೆಯವರೆಗೂ ಇಂತಹ ಸರಕಾರವನ್ನು ಜನತೆ ತಿರಸ್ಕರಿಸಿದ್ದರು. ಅಂತೆಯೇ ಉತ್ತರ ಪ್ರದೇಶದಲ್ಲಿ ಬಿಜೆಪಿ 1996ರಲ್ಲಿ ಗಳಿಸಿದ್ದ 177 ಸ್ಥಾನಗಳಿಂದ 2001ರಲ್ಲಿ 88 ಸ್ಥಾನಕ್ಕೆ ಇಳಿಯಿತು. ಆದರೆ ಬಿಜೆಪಿಯವರೇ ಆದ ರಾಜ್ಯಪಾಲರು ಹಾಗೂ ಸ್ಪೀಕರುಗಳ ಮೂಲಕ, ಬಿ.ಎಸ್.ಪಿ ಸಹಾಯದಿಂದ ಅಧಿಕಾರ ನಡೆಸುತ್ತಿದೆ. ಬಿಜೆಪಿಗೆ ಮಾತ್ರ ಈಗಲೇ ಬಂದಿರುವುದಲ್ಲ. ಅದರೊಂದಿಗೆ ಮೈತ್ರಿ ಮಾಡಿಕೊಂಡ, ಡಿ.ಎಂ.ಕೆ ಪಾಂಡಿಚೇರಿಯಲ್ಲಿ ಸೋತಿತು. ಅಸ್ಸಾಂನಲ್ಲಿ ಎ.ಜಿ.ಪಿ, ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಶನಲ್ ಕಾನ್‌ಫರೆನ್ಸ್ ಕೂಡಾ ಸೋತಿದೆ. ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಅಪರಾಧಕ್ಕಾಗಿ ಅಬ್ದುಲ್ಲಾ ಕುಟುಂಬದ ಒಬ್ಬ ಸದಸ್ಯನೂ ಗೆಲ್ಲಲಿಲ್ಲ.

ಈ ಹಿನ್ನೆಲೆಯಲ್ಲಿ ಗುಜರಾತ್ ಚುನಾವಣೆಯ ಪೂರ್ವದಲ್ಲಿ ಹೊಸ ಪ್ರಯೋಗವೊಂದನ್ನು ಸೃಷ್ಟಿಸಿದ ಸಂಘಪರಿವಾರದ ಅಂಗ ಬಿಜೆಪಿ ಚುನಾವಣೆಯಲ್ಲಿ ಜಯಗಳಿಸಿದೆ. ಖಂಡಿತಾ ಈ ಪ್ರಯೋಗವನ್ನು ದೇಶದೆಲ್ಲೆಡೆ ಜಾರಿಮಾಡಲು ಪ್ರಯತ್ನ ಮಾಡುತ್ತದೆ. ಮಾರ್ಚ್ ತಿಂಗಳಲ್ಲಿ 4 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಇನ್ನು 7 ರಾಜ್ಯಗಳಲ್ಲಿ ಈ ವರ್ಷದ ಕೊನೆಯೊಳಗೆ ಚುನಾವಣೆ ನಡೆಯಲಿದ್ದು 2004 ರಲ್ಲಿ ಲೋಕಸಭಾ ಚುನಾವಣೆಯೂ ನಡೆಯಲಿದೆ.

ಹೊಸ ವರ್ಷದಲ್ಲಿ ಹೊಸ ಆಶಯಗಳೊಂದಿಗೆ ಸಾಗುತ್ತಿರುವಾಗಲೇ, 2002 ರಲ್ಲಿ ಸಂಭವಿಸಿದ ಅಮಾನವೀಯ, ಜನವಿರೋಧಿ ಕೃತ್ಯಗಳಿಗೆ ತಡೆಯೊಡ್ಡಲು ಶಕ್ತಿಶಾಲಿಯಾದ, ಜನಪರ ಚಳುವಳಿಯ ಅಗತ್ಯ. ಆ ನಿಟ್ಟಿನಲ್ಲಿ ಜನತೆ ಮುನ್ನಡೆಯಬೇಕಾಗಿದೆ.

39ನೇ ಕೋಟೇಶ್ವರ ಪಂಚಾಯತ್ ಅಧ್ಯಕ್ಷರಾಗಿ ಸಿಪಿಐ(ಎಂ)ನ ಕರಿಯ ದೇವಾಡಿಗ ಆಯ್ಕೆ




ಡಿಸೆಂಬರ್ 13 ರಂದು ಕೋಟೇಶ್ವರ ಗ್ರಾಮ ಪಂಚಾಯತ್‌ಗೆ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಕರಿಯ ದೇವಾಡಿಗ ಚುನಾಯಿತರಾಗಿದ್ದಾರೆ. ಪ್ರತಿಷ್ಟಿತ ಚುನಾವಣಾ ಕಣವಾದ ಕೋಟೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷರ ಚುನಾವಣೆಗೆ ಸಿಪಿಐ(ಎಂ) ಅಭ್ಯರ್ಥಿಯಾದ ಕರಿಯ ದೇವಾಡಿಗನವರು ಸ್ಪರ್ಧಿಸಿ ಚುನಾಯಿತರಾಗಿದ್ದಾರೆ.

ಕಳೆದ 20 ವರ್ಷಗಳಿಂದ ಸತತ ಕೋಟೇಶ್ವರ ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ.

ಸಿಪಿಐ(ಎಂ)ನ ಕುಂದಾಪುರ ತಾಲೂಕು ಸಮಿತಿ ಕಾರ್ಯದರ್ಶಿ ಮಹಾಬಲ ಒಡೇರಹೋಬಳಿ ಮತ್ತು ಅಧ್ಯಕ್ಷ ಕರಿಯ ದೇವಾಡಿಗನವರು ಪಂಚಾಯತ್ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ತೀರಾ ಕ್ಷುಲ್ಲಕ ಕಾರಣಕ್ಕಾಗಿ ಹೊತ್ತಿಕೊಂಡ ಜಗಳ ಶೋಷಿತ ಸಮುದಾಯಗಳೆರಡೂ ಮುಖಾಮುಖಿಯಾಗಿ ಧಾಳಿ ಪ್ರತಿಧಾಳಿ ನಡೆಸಿವೆ. ಇದರಲ್ಲಿ ಒಬ್ಬ ಯುವಕನ ಮೇಲೆ ಮರಣಾಂತಿಕ ಹಲ್ಲೆಯಾಗಿದ್ದರೆ, ಪ್ರತೀಕಾರವಾಗಿ ದಲಿತರ ನೂರಾರು ಗುಡಿಸಲುಗಳು ಬೆಂಕಿಗೆ ಆಹುತಿಯಾಗಿವೆ. ಈ ಘಟನೆ ನಮ್ಮ ಸಮಾಜ ವ್ಯವಸ್ಥೆಯಲ್ಲಿನ ಜಾತೀಯತೆಯ ದ್ವೇಷದ ಕಾಯಕ ಮುಖವನ್ನು ಮತ್ತಷ್ಟು ಅನಾವರಣಗೊಳಿಸಿದೆ. ಇಲ್ಲಿನ ದಲಿತ- ವಾಲ್ಮೀಕಿ ಜನಾಂಗಗಳ ಬಹುತೇಕರು ಕಾರ್ಷಿಕ ರಂಗದ ಶ್ರಮಜೀವಿಗಳು, ಕೃಷಿ ಕೂಲಿಕಾರರು ಇಂತಹ ಘಟನೆಗಳು ಜನರಲ್ಲಿ ಐಕ್ಯತೆ ಬೆಸೆಯದೇ ತಡೆಯುತ್ತಿವೆ. ಇಂತದರಲ್ಲಿ ಈ ವಿಚಾರವನ್ನು ಅಂತ್ಯಗೊಳಿಸಿ, ಸೌಹಾರ್ದತೆಯ ವಾತಾವರಣ ನಿರ್ಮಿಸದೇ ಕೆಲವು ಜಾತಿಯ ಸಂಘಟನೆಗಳು ದ್ವೇಷ ಹೆಚ್ಚಿಸುವಂತಹ ಸೇಡಿಗೆ ತಿದಿಯೂದುತ್ತಿವೆ. ಅಲ್ಲಿನ ಭೂಮಾಲೀಕ ಹಣವಂತರ ಉದ್ದೇಶವೂ ಇದೇ ಆಗಿದೆ. ಇಲ್ಲಿ ಪೋಲೀಸರ ನಿರ್ಲಕ್ಷ್ಯ, ಸರ್ಕಾರಗಳ ಬೇಜವಾಬ್ದಾರಿತನವನ್ನು ಈ ಹಿನ್ನೆಲೆಯಲ್ಲೇ ಅರಿಯಬೇಕಿದೆ. ತೀವ್ರ ಅನಭಿವೃದ್ಧಿ, ಅಸಮಾನತೆ- ಬಡತನ ಹೆಚ್ಚಿರುವ ಈ ಪ್ರದೇಶದಲ್ಲೇ, ಕೆಳಜಾತಿ ಜನರಲ್ಲಿ ಎಚ್ಚರ ಮೂಡಿ ಜಾಗೃತವಾಗುತಿತಿರುವ ಸಂದರ್ಭದಲ್ಲೇ ಇಂತಹ ಜಾತಿ ಘರ್ಷಣೆ ಹೆಚ್ಚುವುದನ್ನು ಗಮನಿಸಬೇಕು. ಜಾತಿ ವೈಷಮ್ಯವೇ ಪ್ರಧಾನವಾಗಿರುವ ಈ ಘಟನೆಯ ಒಳ-ಹೊರಗುಗಳನ್ನು ವಿಶ್ಲೇಷಿಸಲಾಗಿದೆ.


ವಿಕೃತಿಗೊಳಿಸಿರುವ ಅಂಬೇಡ್ಕರ್ ಪ್ರತಿಮೆ

ಕಮಲಾಪುರ ದುರ್ಘಟನೆ ಜಾತಿ ವೈಷಮ್ಯದ ದಳ್ಳುರಿ

ಕೆ.ಮಹಂತೇಶ್-ಯು.ಬಸವರಾಜು

ಸಣ್ಣ ಕಾರಣವೊಂದೇ ಸಾಕು! ಊರನ್ನು ಇಬ್ಭಾಗಿಸಬಹುದು, ಎರಡು ಜನಾಂಗಗಳ ಮಧ್ಯೆ ಸೇಡಿನ ಕಿಚ್ಚನ್ನು ಹಚ್ಚಿಸಬಹುದು. ಮಾತ್ರವಲ್ಲ, ಶಾಂತಿಯ ಊರಿನಲ್ಲಿ ಅಶಾಂತಿಯನ್ನು ಸೃಷ್ಟಿಸಿ ನೆಮ್ಮದಿಯ ಬದುಕಿಗೆ ಅಡ್ಡಿಯನ್ನುಂಟು ಮಾಡಬಹುದೆಂಬುದಕ್ಕೆ ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಸಮೀಪದ ಕಮಲಾಪುರದಲ್ಲಿ ಎರಡು ಜಾತಿ ಜನಗಳ ಮಧ್ಯೆ ಭುಗಿಲೆದ್ದ ಘರ್ಷಣೆ, ಸಾವು ಬದುಕಿನ ನಡುವಿರುವ ವಾಲ್ಮೀಕಿ ಯುವಕ, ನೂರಾರು ದಲಿತರ ಗುಡಿಸಲು ಬೆಂಕಿಗಾಹುತಿಯಾಗಿರುವುದೇ ಸಾಕ್ಷಿ.

ಕಳೆದೆರಡು ವರ್ಷಗಳಿಂದ ಇಂತಹುದೇ ಯುವ ಪ್ರೇಮಿಗಳ ಕ್ಷುಲ್ಲಕ ಕಾರಣಕ್ಕಾಗಿಯೇ ದಲಿತ ಮಹಿಳೆ ಬೆತ್ತಲಾಗಿ ಮೆರವಣಿಗೆ ಮಾಡಲಾಗಿತ್ತು. ಈಗ ಅಂತಹುದೇ ಕಾರಣದಿಂದ ಅದೇ ಕೋಮಿನ ಇನ್ನೊಂದು ಗುಂಪು ಕಮಲಾಪುರದಲ್ಲಿ ದಲಿತಕೇರಿಗೆ ನುಗ್ಗಿ ನೂರಾರು ಗುಡಿಸಲುಗಳಿಗೆ ಬೆಂಕಿ ಹಾಕಿತು!

ಅವತ್ತು ನಾಯಕ ಜನಾಂಗದ ಹುಡುಗಿಯೊಬ್ಬಳನ್ನು ಮದುವೆಯಾಗಲು ಹೊರಟ ದಲಿತ ಹುಡುಗನೊಬ್ಬನಿಗೆ ಆಶ್ರಯ ನೀಡಿದಳೆಂಬ ಕಾರಣಕ್ಕಾಗಿ ಬಳ್ಳಾರಿ ವಣೆನೂರಿನ ಯರೆಮ್ಮ ಎಂಬ ಮಹಿಳೆಯನ್ನು ಬೆತ್ತಲು ಮಾಡಿ ಊರ ತುಂಬಾ ಮೆರವಣಿಗೆ ನಡೆಸಿದ್ದರೆ, ಇವತ್ತು ಯಾರೋ ದಲಿತ ಕಿಡಿಗೇಡಿಗಳು ಅದೇ ನಾಯಕ ಜನಾಂಗಕ್ಕೆ ಸೇರಿದ ಹುಡುಗಿಯೊಬ್ಬಳನ್ನು ಕೀಟಲೆ ಮಾಡಿದ ತಪ್ಪಿಗೆ ನೂರಾರು ಬಡಜನರ ಗುಡಿಸಲುಗಳು ಅಗ್ನಿ ಸ್ಪರ್ಶ ಕಂಡಿವೆ.

ಕಾರಣಗಳು ಕ್ಷುಲ್ಲಕವಾಗಿರಬಹುದು. ಆದರೆ ಪರಿಣಾಮ ಮಾತ್ರ ದೀರ್ಘಾವಧಿಯದು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಘಟನೆಗಳನ್ನು ಹಲವಾರು ದಶಕಗಳಿಂದ ಮರುಕಳಿಸುತ್ತಿದ್ದರೂ ಜವಾಬ್ದಾರಿಯುತ ಸರ್ಕಾರಗಳು ಮಾತ್ರ ಎಚ್ಚರಗೊಳ್ಳಲಿಲ್ಲ. ಹಣವಂತರು, ಹಲವಾರು ಹಿತಾಸಕ್ತಿಗಳು, ಈ ಘಟನೆಗಳಲ್ಲಿ ಮಧ್ಯ ಪ್ರವೇಶಿಸಿ ದುಡಿವ ಬಡವರನ್ನು ಒಡೆದು ಅದಕ್ಕೆ ಮತ್ತೊಂದು 'ರೂಪ' ನೀಡಲು ಪ್ರಯತ್ನಿಸುತ್ತಿರುವುದು ಇದರ ಹಿಂದಿರುವ ಪ್ರಮುಖ ಕಾರಣ.

ಪ್ರಕರಣದ ಹಿನ್ನೆಲೆ

ಕಮಲಾಪುರ ಪ್ರಸಿದ್ಧ ಪ್ರವಾಸಿ ತಾಣವಾದ ಹಂಪಿ ಸಮೀಪದಲ್ಲಿರುವ ಮತ್ತು ಹೊಸಪೇಟೆಯಿಂದ ಕೂಗಳತೆ ದೂರದಲ್ಲಿರುವ ದೊಡ್ಡ ಊರು. ಬಳ್ಳಾರಿ ಜಿಲ್ಲೆಯಲ್ಲಿ ನಾಯಕ ಜನಾಂಗ ಪ್ರಾಬಲ್ಯವಿರುವಂತೆ, ಈ ಗ್ರಾಮದಲ್ಲಿಯೂ ಸಹಾ 10 ವಾರ್ಡ್‌ಗಳ ಪೈಕಿ 7 ರಲ್ಲಿ ನಾಯಕ ಜನಾಂಗವೇ ಮೇಲುಗೈ ಪಡೆದಿದೆ. ನಾಯಕರಲ್ಲದೆ ದಲಿತರು, ಕುರುಬರು, ಗೊಲ್ಲರು ಹಾಗೂ ಮುಸ್ಲಿಮರು ಸೇರಿದಂತೆ ಎಲ್ಲರೂ ಹಲವಾರು ದಶಕಗಳಿಂದ ಇಲ್ಲಿ ನೆಮ್ಮದಿಯ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ.

ದಾರಿ ತಪ್ಪಿರುವ ದಲಿತ ಜಾಗೃತಿ

ನೂರಾರು ವರ್ಷಗಳಿಂದ ತುಳಿತಕ್ಕೊಳಗಾಗಿರುವ ದಲಿತ ಸಮೂಹ ಇದೀಗ ನಿಧಾನವಾಗಿ ಜಾಗೃತಗೊಂಡು ಎಚ್ಚೆತ್ತುಕೊಳ್ಳುತ್ತಿರುವುದು ಸಕಾರಾತ್ಮಕ ಅಂಶವಾದರೂ ಜಾಗೃತಗೊಳ್ಳುತ್ತಿರುವ ಆ ಜನವಿಭಾಗಕ್ಕೊಂದು ಸ್ಪಷ್ಟ ದಿಕ್ಕನ್ನು ತೋರಿಸುವಲ್ಲಿ ಆ ವಿಭಾಗದ ಮಧ್ಯದಲ್ಲಿ ಬೆಳೆದು ಬಂದ ಚಳುವಳಿಗಳು ವಿಫಲರಾಗಿರುವುದು ಕಮಲಾಪುರದಲ್ಲಿ ದಲಿತರ ಗುಡಿಸಲುಗಳು ಸುಟ್ಟು ಕರಕಲಾಗಿರುವುದಕ್ಕೆ ಮತ್ತು ಘಟನೆಗೆ ಪ್ರಚೋದನೆಯಾದುದಕ್ಕೆ ಪ್ರಮುಖ ಕಾರಣ.

ಕಮಲಾಪುರದಲ್ಲಿರುವ ಅಂಬೇಡ್ಕರ್ ಕಾಲೋನಿಯಲ್ಲಿ ಇತರೆ ಜನಾಂಗದವರಿದ್ದರೂ ದಲಿತರದೇ ಪ್ರಾಬಲ್ಯ. ಆದ್ದರಿಂದಲೇ ಯಲ್ಲಪ್ಪ ಎಂಬುವನೊಬ್ಬ ಆ ವಾರ್ಡಿನಿಂದ ಕೌನ್ಸಿಲರ್ ಆಗಿ ಗೆದ್ದು ಈಗ ಪೋಲಿ ಗುಂಪಿನ ನಾಯಕನಾಗಿದ್ದಾನೆ ಎನ್ನುತ್ತಾರೆ ಅಲ್ಲಿನವರು. ಅಲ್ಲಿರುವ ಬಹುಪಾಲು ಜನರು ಕೃಷಿ ಕಾರ್ಮಿಕರು ಮತ್ತು ಅನಕ್ಷರಸ್ತರು. ಆದರೆ ಈ ಕೇರಿಯಲ್ಲಿದ್ದ ಕೆಲವು ಯುವ ಪುಂಡರ ಗುಂಪು ಕಳೆದ ಹಲವಾರು ದಿನಗಳಿಂದ ನಡೆಸುತ್ತಿದ್ದ ನಿರಂತರ ಕೀಟಲೆಗಳೇ ಇವತ್ತು ಕಮಲಾಪುರದ ದಲಿತರ ಗುಡಿಸಲುಗಳನ್ನು ಅಗ್ನಿಗಾಹುತಿ ಮಾಡಿದವು!

ದಲಿತ ಕೇರಿಯ ಬಾಟ್ಳಿ ಅಂಜಿನಿ, ಆಟೋ ಕೃಷ್ಣ, ಮೇಸ್ತ್ರಿ ಅಂಜನಪ್ಪ, ರಾಮಾಲಿ, ಬಸವರಾಜ ಆಟೋ ಉದಯ, ತಿಪ್ಪೇಸಿ, ಹುಲುಗಪ್ಪ, ಈರಪ್ಪ... ಮೊದಲಾದ ಪುಂಡರ ಗುಂಪು ಬೆಳಿಗ್ಗೆಯಿಂದ ಸಂಜೆತನಕ ದಾರಿಯಲ್ಲಿ ಹೋಗಿಬರುವ ಹೆಂಗಸರನ್ನು - ಹುಡುಗಿಯರನ್ನು ರೇಗಿಸುವುದನ್ನೇ ತಮ್ಮ ದಿನದ ದಂಧೆಯಾಗಿಸಿಕೊಂಡಿದ್ದಾರೆಂಬ ದೂರುಗಳಿವೆ. ಇಂತಹವರನ್ನು ಬಿಗಿ ಮಾಡಿ ಸರಿದಾರಿಗೆ ತರಬೇಕಾಗಿದ್ದ ಕೌನ್ಸಿಲರ್ ಯಲ್ಲಪ್ಪ ಸ್ವತಃ ಪೋಲಿಯಂತೆ ವರ್ತಿಸುತ್ತಿದ್ದನೆಂಬ ಆರೋಪವಿದೆ.

24 ರ ರಾತ್ರಿ....

ಡಿಸೆಂಬರ್ 24 ರ ರಾತ್ರಿ 9 ಗಂಟೆಗೆ ನಾಯಕ ಜನಾಂಗದ ರಾಮಪ್ಪನ ಮಗಳು ನಾಗರತ್ನ ಎನ್ನುವ 16 ವರ್ಷದ ಹುಡುಗಿಯನ್ನು ಚುಡಾಯಿಸುವ ಈ ಪುಂಡರ ಗುಂಪಿಗೆ ಆ ಹುಡುಗಿಯ ಅಣ್ಣ ನಾರಾಯಣ ಎನ್ನುವವರು ಮನೆಯಿಂದ ಹೊರಬಂದು ಎಚ್ಚರಿಕೆ ನೀಡಿದ್ದೇ ತಡ, ಅಲ್ಲೇ ಇದ್ದ ರಾಮಾಲಿ, ಬಾಟ್ಳಿ ಅಂಜಿನಿ, ತಿಪ್ಪೇಸಿ, ಹುಲುಗುಪ್ಪ, ಬಸವರಾಜ್, ಮೊದಲಾದವರು ಅವನೊಂದಿಗೆ ಮಾತಿಗೆ ಮಾತು ಬೆಳೆಸಿ

ಪುಟ 11 ಕ್ಕೆ


ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ದಳದವರು

ಸಿಪಿಐ(ಎಂ) ನಿಯೋಗದ ವರದಿ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸದಸ್ಯರು ಬಳ್ಳಾರಿ ಜಿಲ್ಲಾ ಕಾರ್ಯದರ್ಶಿಗಳಾದ ಯು.ಬಸವರಾಜ ನಾಯಕತ್ವದಲ್ಲಿ ಡಿ.ವೆಂಕಟರಮಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರು, ರಾಮಚಂದ್ರಬಾಬು, ಜಿ.ವಿ.ರಮೇಶ್ ಜಿಲ್ಲಾ ಸಮಿತಿ ಸದಸ್ಯರು, ಎಲ್. ಮಂಜುನಾಥ, ಕೆ.ಕರುಣಾನಿಧಿ ವಕೀಲರು, ಗೋಪಾಲ ಮುಂತಾದವರಿದ್ದ ಸಿ.ಪಿ.ಐ. (ಎಂ) ಪಕ್ಷದ ನಿಯೋಗವು 26.12.2002 ರಂದು ಕಮಲಾಪುರಕ್ಕೆ ಭೇಟಿ ನೀಡಿ ಪರಿಶೀಲಿಸಿದೆ. ಎರಡು ಕಡೆಯ ಜನತೆಯ ಅಭಿಪ್ರಾಯಗಳನ್ನು ಪಡೆಯಲಾಗಿದೆ. ಸಂತ್ರಸ್ತರನ್ನು, ಕೆಲವು ಪೋಲೀಸ್ ಅಧಿಕಾರಿಗಳನ್ನು ಕಂಡು ವಿಚಾರಿಸಲಾಗಿದೆ. ಬೆಂಕಿ ಬಿದ್ದ ಮನೆಗಳವರನ್ನು ಮಾತನಾಡಿಸಲಾಗಿದೆ. ಎರಡೂ ಕಡೆಗೂ ಸೇರದ ಕೆಲ ತಟಸ್ಥ ಜನರ ಅಭಿಪ್ರಾಯಗಳನ್ನು ಪಡೆಯಲಾಗಿದೆ.

ಒಟ್ಟು ಮಾಹಿತಿಯಾಧಾರದಲ್ಲಿ ಹಾಗೂ ಪರಿಶೀಲನೆಯಾಧಾರದಲ್ಲಿ ಈ ಕೆಳಕಂಡ ತೀರ್ಮಾನಕ್ಕೆ ಬಂದಿದೆ.

● ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಜಾತಿಗೆ ಸೇರಿದ ಕೆಲವು ಪ್ರಧಾನವಾಗಿದ್ದ ಉದ್ರಿಕ್ತ ಜನರ ಗುಂಪು ಪರಿಶಿಷ್ಟ ಜಾತಿಗೆ ಸೇರಿದ ಜನಗಳ ಕೇರಿಗೆ ನುಗ್ಗಿ ದಾಂಧಲೆ ನಡೆಸಿ ಕೆಲವೆಡೆ ಬೆಂಕಿ ಹಚ್ಚಿದ, ಹಲ್ಲೆ ನಡೆಸಿದ ಪ್ರಕರಣವನ್ನು ಸಿಪಿಐ(ಎಂ) ಖಂಡಿಸಿದೆ.

● 24.12.2002 ರಂದು ನಡೆದ ಪರಿಶಿಷ್ಟ ಪಂಗಡಕ್ಕೆ ಸೇರಿದ ಹುಡುಗಿಯೊಬ್ಬಳನ್ನು ಪರಿಶಿಷ್ಟ ಜಾತಿಗೆ ಸೇರಿದ ಯುವಕರು ಚುಡಾಯಿಸಿದ್ದು, ಇದನ್ನು ಪ್ರಶ್ನಿಸಿದ ಹುಡುಗಿಯ ಅಣ್ಣನನ್ನು ಮರಣಾಂತಿಕವಾಗಿ ಹಲ್ಲೆ ನಡೆಸಿದ ಪರಿಶಿಷ್ಟ ಜಾತಿಗೆ ಸೇರಿದ ಗುಂಪಿನ ಯುವಕರ ವರ್ತನೆಯನ್ನು ಸಿಪಿಐ(ಎಂ) ನಿಯೋಗ ಖಂಡಿಸಿದೆ.

● ಮರುದಿವಸ ಸಂಜೆ ಉದ್ರಿಕ್ತ ಗುಂಪು ಪರಿಶಿಷ್ಟ ಜಾತಿಗೆ ಸೇರಿದ ಜನರ ಕೇರಿಯ ಮೇಲೆ ದಾಳಿ ನಡೆಸಿದೆ. ಈ ನಡುವೆ ಸುಮಾರು 15-20 ತಾಸುಗಳ ಅವಧಿ ಇದ್ದು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಬಿಗಿಯಾದ ಬಂದೋಬಸ್ತ್ ಹಾಗೂ ಸೂಕ್ತ ಕ್ರಮವಹಿಸಲು ಪೋಲೀಸ್ ಇಲಾಖೆ ವಿಫಲವಾಗಿರುವುದು. ದಾಳಿಯಂತಹ ಘಟನೆ ನಡೆಯಲು ಕಾರಣವಾಗಿದೆಯೆಂದು ಸಿಪಿಐ(ಎಂ) ನಿಯೋಗ ಪೋಲೀಸ್ ವೈಫಲ್ಯವನ್ನು ಎತ್ತಿ ತೋರಿದೆ!

● ಈಗಾಗಲೇ ಠಾಣೆಯ ಪಿ.ಎಸ್.ಐ ಹಾಗೂ ಸಿಪಿಐ ಗಳನ್ನು ಸಸ್ಪೆಂಡ್ ಮಾಡಲಾಗಿರುವುದು ಸ್ವಾಗತವೇ ಆದರೂ ಈಚಿನ ಜಾತಿಯ ಭಾವನೆಗಳು ಇನ್ನೂ ಕೂಡ ದಟ್ಟವಾಗಿರುವ ಈ ಪ್ರದೇಶದಲ್ಲಿ ಮುಖ್ಯವಾಗಿ ಕೆಳಜಾತಿಗಳ ಯುವಕರು- ಪುರುಷರು ಮೇಲ್ಜಾತಿಯ ಹುಡುಗಿಯರು- ಮಹಿಳೆಯ ಚುಡಾಯಿಸುವಿಕೆ, ಪ್ರೇಮ ಪ್ರಕರಣಗಳು ಅಲ್ಲದೆ ಇತರೆ ದೌರ್ಜನ್ಯಗಳು ತುಂಬಾ ಗಂಭೀರ ಸ್ವರೂಪವನ್ನು ಪಡೆಯುತ್ತಿದೆ. ಜಿಲ್ಲೆಯ ಬೇರೆ ಬೇರೆ ಪ್ರದೇಶಗಳ ಅನುಭವ ಇದನ್ನು ಸಾಬೀತುಪಡಿಸಿದೆ.

● ಈ ಹಿನ್ನೆಲೆಯಲ್ಲಿ ಜಿಲ್ಲಾ ಆಡಳಿತವು ಇಂತಹ ಸೂಕ್ಷ್ಮ ಪರಿಸ್ಥಿತಿಯನ್ನು ನಿಭಾಯಿಸುವ ಬಗ್ಗೆ ಅನುಭವಗಳ ಆಧಾರದಲ್ಲಿ ಸೂಕ್ತ ಸಿದ್ಧತೆ, ಬದ್ಧತೆ ಬೇಕು. ಠಾಣಾಧಿಕಾರಿಗಳಿಗೆ ತರಬೇತಿ ನೀಡಲು ಸಿಪಿಐ(ಎಂ) ಸೂಚಿಸಿದೆ. ಅವರು ಸ್ಥಾಪಿತ ಹಿತಾಸಕ್ತಿಗಳತ್ತ ವಾಲದಂತೆ, ವಸ್ತುನಿಷ್ಠವಾಗಿ ಕ್ರಮಕೈಗೊಳ್ಳುವ ಸ್ಪಷ್ಟ ನಿರ್ಧಾರ ಅಗತ್ಯವಿದೆ.

● ಉದ್ರಿಕ್ತ ಗುಂಪು ಅಂಬೇಡ್ಕರ್ ಪುತ್ಥಳಿಯ ಮೇಲೆ ದಾಳಿ ನಡೆಸಲು ಮುಂದಾದಾಗ ಆಗ ತಾನೆ ಬಂದರೆಂದು ಹೇಳಲಾದ ಹೆಚ್ಚುವರಿ ಪೋಲೀಸ್ ಸಿಬ್ಬಂದಿ ಉದ್ರಿಕ್ತ ಜನತೆಯನ್ನು ತಡೆಯಲು ಶಕ್ತಿ ಮೀರಿ ಯತ್ನಿಸಿದೆ. ಹಲವಾರು ಪೋಲೀಸರು ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದಾರೆ. ಈ ಸಂದರ್ಭದಲ್ಲಿ ಸಮರ್ಥವಾಗಿಯೇ ನಿಭಾಯಿಸಲಾಗಿದೆಯೆಂದು

ಪುಟ 11 ಕ್ಕೆ

ಇಗೋ ಇದು ಶಿಕ್ಷಣದ ಕೇಸರೀಕರಣ

ಇತಿಹಾಸವನ್ನು ವಿಕೃತಗೊಳಿಸುವ-ಶಿಕ್ಷಣವನ್ನು ಕೋಮುವಾದೀಕರಿಸುವ ಪ್ರಯತ್ನ ನಮ್ಮ ದೇಶದಲ್ಲಿ ಭರದಿಂದ ಸಾಗಿದೆ. ಉದ್ದೇಶಿತ 'ಹಿಂದೂರಾಷ್ಟ್ರ' ನಿರ್ಮಾಣಕ್ಕೆ ಪೂರಕವಾಗಿ ಜನಸಮುದಾಯಗಳ ಪ್ರಜ್ಞೆಯನ್ನೇ 'ಕೇಸರೀಕರಣ'ಗೊಳಿಸುವ ಕೋಮುವಾದಿ ಷಡ್ಯಂತ್ರಗಳ ಬಗೆಗೆ ನಮ್ಮ ದೇಶದ ಕೋರ್ಟುಗಳು ಕಣ್ಣು ಮುಚ್ಚಿಕೊಂಡು ತೀರ್ಪು ನೀಡುತ್ತಿರುವಾಗ ಶಿಕ್ಷಣ ತಜ್ಞರು-ಪ್ರಜ್ಞಾವಂತರು ಕೇಸರೀಕರಣದ ಹೂರಣವನ್ನು ಶೈಕ್ಷಣಿಕ ಸಮುದಾಯ ಹಾಗೂ ಜನರ ಮುಂದೆ ಇಡುತ್ತಿದ್ದಾರೆ. ಶಿಕ್ಷಣದ ಕೇಸರೀಕರಣ ಫ್ಯಾಸಿಸ್ಟ್ ಮಾದರಿಯು ಹೇಗೆ ನಡೆದಿದೆ ಎಂಬುದರತ್ತ ಬೆಳಕು ಚೆಲ್ಲುವ ಲೇಖನ. ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣರವರಿಂದ

ಶಿಕ್ಷಣದ ಕೇಸರಿಕರಣ ನಡೆದಿದೆಯೇ ಇಲ್ಲವೇ ಎಂಬ ಚರ್ಚೆ ರಾಷ್ಟದಲ್ಲಿ ತೀವ್ರಗೊಂಡಿದೆ. ಶಿಕ್ಷಣ ಕೇಸರೀಕರಣ ಆಗಿದೆ ಎನ್ನುತ್ತಿದ್ದಾರೆ ರಾಷ್ಟ್ರದ ಖ್ಯಾತ ಶಿಕ್ಷಣ ತಜ್ಞರು, ಇತಿಹಾಸಕಾರರು. ಇಲ್ಲ ಎಂದು ತೀರ್ಪು ಕೊಟ್ಟಿದೆ ಸುಪ್ರಿಂಕೋರ್ಟ್. ಎನ್‌ಸಿಇಆರ್‌ಟಿ ಯ ಶಾಲಾ ಪಠ್ಯ ನೀತಿ, ಪಠ್ಯದ ತಿರುಳನ್ನು ಕುರಿತು. ರಾಷ್ಟ್ರೀಯ ಪಠ್ಯಕ್ರಮ ಸಂಶೋಧನೆ ಮತ್ತು ತರಬೇತಿ ಮಂಡಳಿಯ ಈ ಪಠ್ಯಕ್ರಮದ ಕುರಿತು ಮತ್ತಷ್ಟು ಅಧ್ಯಯನಗಳು, ವಿಶ್ಲೇಷಣೆಗಳು ಹೊರಬರುತ್ತಿವೆ.

ಮತಾಂಧತೆಯ ವಿಷವನ್ನು ಬೆರೆಸಿ ಸಾಮರಸ್ಯದ ಬದುಕನ್ನು ಕದಡುವ ದೂರಗಾಮಿ (ದುರ್) ಉದ್ದೇಶದೊಂದಿಗೆ ಸಮಾಜದ ವಿವಿಧ ಸ್ತರಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ಬೇರೆ ಬೇರೆ ಹೆಸರುಗಳು ಹಾಗೂ ಮುಖವಾಡದೊಂದಿಗೆ ಕಾರ್ಯಾಚರಣೆ ನಡೆಸುತ್ತಿರುವ ಸಂಘ ಪರಿವಾರದ ಅಂಗಸಂಸ್ಥೆಗಳು ಆಗಾಗ ತಮ್ಮ ವಿವಿಧ ಛಾಯೆಗಳಲ್ಲಿ, ವಿವಿಧ ಪ್ರಮಾಣಗಳಲ್ಲಿ ತಮ್ಮ ಕೇಸರಿ ಬಣ್ಣವನ್ನು ಹೊರ ಚೆಲ್ಲುತ್ತಿರುತ್ತವೆ. ವಿದ್ಯಾರ್ಥಿಗಳ ನಡುವೆ ಕೆಲಸ ಮಾಡುವ ಸಂಘಪರಿವಾರ ಮುಖವಾಡ ಎ.ಬಿ.ವಿ.ಪಿ. ಮೊನ್ನೆ ಮೊನ್ನೆಯಷ್ಟೇ 'ಕೇಸರೀಕರಣ ಎಂದರೇನು' 'ಏಕೆ ಈ ಕೇಸರೀಕರಣ ಆಗಲೇಬೇಕು' ಎಂಬ ಬಗೆಗೆ ವಿವರಿಸುವ ಕರಪತ್ರ, ಕಿರು ಹೊತ್ತುಗೆಗಳನ್ನು ಪ್ರಕಟಿಸಿ ಪ್ರಚಾರ ನಡೆಸಿದೆ. ಜೊತೆಗೆ ಶಿಕ್ಷಣದ ಆಧ್ಯಾತ್ಮೀಕರಣ, ಭಾರತೀಕರಣವೂ ಆಗಬೇಕೆಂದು ಅದು ಒತ್ತಾಯಿಸಿದೆ.

ಆದರೆ ಈಗ, ಸುಪ್ರೀಂ ಕೋರ್ಟ್‌ನ ತೀರ್ಪು ಹೊರಬಂದ ಮೇಲೆ ಶಿಕ್ಷಣದ ಕೇಸರೀಕರಣ ನಡೆದಿಲ್ಲ. ಇದು ಹುಸಿ ಜಾತ್ಯಾತೀತವಾದಿಗಳು ಮತ್ತು ಎಡಪಂಥೀಯ ಬುದ್ಧಿಜೀವಿಗಳ ರಾಜಕೀಯ ಪ್ರೇರಿತ ಅಪಪ್ರಚಾರ ಎಂದು ಸಾರುತ್ತಿರುವ ಈ ಸಂಘ ಪರಿವಾರದ ಭಂಡತನವನ್ನು ಯಾರಾದರೂ ಮೆಚ್ಚಬೇಕಾದದ್ದೇ.

ಯಾರು ಏನೇ ಹೇಳಲಿ ಶಿಕ್ಷಣ ತಜ್ಞರ ಅಧ್ಯಯನಗಳು ಮಾತ್ರ ಕಣ್ಣಿಗೆ ರಾಚುವಂತೆ ಎದ್ದು ಕಾಣುತ್ತಿರುವ ಶಿಕ್ಷಣದ ಕೇಸರೀಕರಣದ ಹೂರಣವನ್ನು ಎಲ್ಲರ ಮುಂದೆ ತೆರೆದಿಟ್ಟಿವೆ. ಇದು ಕೇಸರೀಕರಣ ಅಲ್ಲದೆ ಕೋಮುವಾದ ಅಲ್ಲದೆ ಮತ್ತೇನು ಎಂಬ ತಜ್ಞರ ಪ್ರಶ್ನೆಗೆ ಶೈಕ್ಷಣಿಕ-ಬೌದ್ಧಿಕ ಉತ್ತರಗಳಿಗಿಂತ 'ನಂಬಿಕೆ' 'ಭಾವನೆ' 'ಶ್ರದ್ಧೆ' ಗಳ ಪ್ರಶ್ನೆಯನ್ನು ಈ ಕಾವಿ ಪಡೆ ಮುಂದೂಡುತ್ತಿದೆ. ಏಕೆಂದರೆ ವೈಚಾರಿಕವಾಗಿ ತಾರ್ತಿಕವಾಗಿ ಉತ್ತರ ಇಲ್ಲದಿರುವಾಗ ನಂಬಿಕೆ ಶ್ರದ್ಧೆ ಭಾವನೆಗಳ ಮೊರೆ ಹೋಗಲೇಬೇಕಲ್ಲವೆ?

ಸಾಮ್ರಾಜ್ಯಶಾಹಿ ಅಮೆರಿಕಾಕ್ಕೆ ಡೊಗ್ಗು ಸಲಾಮು

ಇತಿಹಾಸ ಮಾತ್ರವಲ್ಲ ವರ್ತಮಾನವೂ ಸಹ ಇಂದು ಕೇಂದ್ರದಲ್ಲಿರುವ ಅಧಿಕಾರ ಸರಕಾರದ ನೀತಿಗಳ ಗಾಢವಾದ ಛಾಪನ್ನು ಪಡಿಮೂಡಿಸಿ ಕೊಂಡಿರುವುದನ್ನು ಗುರುತಿಸಬಹುದು. ಹೊಸ ಪಠ್ಯದಲ್ಲಿ ವಿದೇಶಾಂಗ ನೀತಿಯ ವಿಚಾರದಲ್ಲಿ ಅಮೇರಿಕಾ ಮತ್ತು ಭಾರತಗಳ ನಡುವಿನ ಮೈತ್ರಿಗೆ ವಿಶೇಷವಾದ ಒತ್ತು ಸಿಕ್ಕಿದೆ. (ಹಸಿ ಹಸಿ ಕೋಮುದ್ವೇಷವನ್ನು ಪ್ರತಿಪಾದಿಸುವ ಹಿಂದೂ ಮೂಲಭೂತವಾದ ಹಾಗೂ ಇಡೀ ಜಗತ್ತಿನ ಮೇಲೆ ತನ್ನ ಯಜಮಾನಿಕೆಯನ್ನು ಸ್ಥಾಪಿಸುವ ಉದ್ದೇಶದಿಂದ ನಗ್ನ ಸಾಮ್ರಾಜ್ಯಶಾಹಿ ದುರಾಕ್ರಮಣಗಳನ್ನು ನಡೆಸುತ್ತಿರುವ ಅಮೇರಿಕಾದ ಸಾಮ್ರಾಜ್ಯವಾದ ಪರಸ್ಪರ ಹೇಗೆ ಹೊಂದಿಕೊಳ್ಳಬಲ್ಲವು ಎಂಬುದಕ್ಕೆ ಈ ವಿಚಾರ ಒಂದು ಒಳ್ಳೆಯ ಉದಾಹರಣೆಯಾಗಿದೆ. ಇದು ಆಳುವ ಎನ್.ಡಿ.ಎ ಸರ್ಕಾರದ ಹಿರಿಯಣ್ಣ ಅಮೆರಿಕಾಗೆ ಡೊಗ್ಗು ಸಲಾಮು ಹಾಕುವ ನೀತಿಯ ಪ್ರತಿಫಲನವೇ ಆಗಿದೆ.

ಕೇಸರಿ ಛಾಪಿನ ಶಿಕ್ಷಣ : ನಿರ್ಧಿಷ್ಟ ಸಾಕ್ಷಿ- ಪುರಾವೆಗಳು

6ನೇ ತರಗತಿಗೆ ನಿಗದಿಗೊಳಿಸಲಾಗಿರುವ 'ಭಾರತ ಮತ್ತು ಜಗತ್ತು' ಪಠ್ಯ ಪುಸ್ತಕದ 10ನೇ ಅಧ್ಯಾಯವಾದ 'ಭಾರತೀಯ ನಾಗರೀಕತೆ- ಹರಪ್ಪ ನಾಗರೀಕತೆ' ಎನ್ನುವ ಭಾಗವು ಪ್ರಸಕ್ತ 'ಹಿಂದೂ' ಸಮುದಾಯದ ನಂಬಿಕೆ, ಆಚರಣೆಗಳನ್ನು ಹರಪ್ಪ - ಮೊಹೆಂಜೊದಾರೋ ನಾಗರೀಕತೆಯೊಂದಿಗೆ ಸಮೀಕರಿಸಿದೆ. ಈ ಸಂಸ್ಕೃತಿಯ ಮಣ್ಣಿನ ಮುದ್ರಿಕೆಯ ಚಿತ್ರಗಳು ಮತ್ತು ಮುದ್ರೆಗಳನ್ನು 'ಕಮಂಡಲ' 'ಶಿವಲಿಂಗ' 'ಸ್ವಸ್ತಿಕಾ' ಎಂದು ತಪ್ಪಾಗಿ ವಿವರಿಸಲಾಗಿದೆ. ವೈದಿಕ ಹಾಗೂ ಹರಪ್ಪ ನಾಗರೀಕತೆಗಳು ಎರಡೂ ಒಂದೇ ಎಂದೂ ಹೇಳಲಾಗಿದೆ. ಇದೇ ನಿಟ್ಟಿನಲ್ಲಿ ಈ ನಾಗರೀಕತೆಯನ್ನು ``indus or Hindu-saraswathi-civilisation ಎಂದು ಕರೆಯಲಾಗಿದೆ.


ದುಡಿಯುವ ವರ್ಗದ ಮಹಾನ್ ಕ್ರಾಂತಿಯನ್ನು ತೆಗೆಳುವ ಪಠ್ಯದ ಕೀಳು ಭಾಷೆ

9ನೇ ತರಗತಿಯ ಸಮಾಜಶಾಸ್ತ್ರ ಪಠ್ಯದ 'ಸಮಕಾಲೀನ ಭಾರತದ ಭಾಗ 1 ರಲ್ಲಿ ಮನುಕುಲದ ಚರಿತ್ರೆಯ ಅತ್ಯಂತ ಮಹತ್ವದ ಘಟನೆಗಳಲ್ಲಿ ಒಂದಾದ - ಇಡೀ ಮಾನವ ಸಮಾಜದ ವಿಕಾಸವನ್ನು ಒಂದು ಹೊಸ ಉನ್ನತ ಘಟ್ಟಕ್ಕೆ ಏರಿಸಿದ 1917ರ ರಷ್ಯಾದ ಮಹಾನ್ ಕ್ರಾಂತಿಯ ಕುರಿತು ಈ ಪಠ್ಯವು ಬಳಸಿರುವ ಭಾಷೆ ಅತ್ಯಂತ ಆಕ್ಷೇಪಾರ್ಹವಾಗಿದೆ. ಶೋಷಿತ ವರ್ಗದ, ದುಡಿಯುವ ಜನರ ನೇತೃತ್ವದ ಈ ಮಹಾನ್ ಕ್ರಾಂತಿಯನ್ನು 'ಕ್ಷಿಪ್ರಕ್ರಾಂತಿ' (Coup) ಎಂದು ಇಲ್ಲಿ ಕರೆಯಲಾಗಿದೆ. ಮಾತ್ರವಲ್ಲ ಇದೊಂದು 'ಪಿತೂರಿ' ಎಂಬಂತಹ ಅರ್ಥಗಳನ್ನು ಹೊರಡಿಸಲಾಗಿದೆ. ಈ ಬಗೆಯ ನಿರೂಪಣೆಯ ಉದ್ದೇಶವೇನೆಂದು ವಿವರಿಸಿ ಹೇಳಬೇಕಾಗಿಲ್ಲವಷ್ಟೆ.

ಜಗತ್ತಿನ ಇತಿಹಾಸದುದ್ದಕ್ಕೂ ಶೋಷಕ ವರ್ಗಗಳಿಂದ ದಮನಕ್ಕೆ ಗುರಿಯಾದ, ಶೋಷಣೆಗೆ ತುತ್ತಾದ, ನೊಂದ, ವಂಚಿತ, ಅನ್ಯಾಯ, ಅತ್ಯಾಚಾರಗಳಿಗೆ ಗುರಿಯಾದ ಕೋಟಿ ಕೋಟಿ ದುಡಿಯುವ ಜನರ ಪರವಾಗಿ ಹೊಸ ಜಗತ್ತೊಂದನ್ನು ಕಟ್ಟುವ ಕನಸಿನ ಮನುಕುಲದ ಮೊಟ್ಟ ಮೊದಲ ದಿಟ್ಟ ಹೆಜ್ಜೆಯಾದ ಈ ಅಕ್ಟೋಬರ್ ಕ್ರಾಂತಿಯನ್ನು ಒಂದು 'ಪಿತೂರಿ' ಎಂಬ ಕರೆಯುವ ಹಿಂದುತ್ವ ಶಕ್ತಿಗಳ ಉದ್ದೇಶವೇನು?

'ಆರ್ಯರ ಆಗಮನ'ದ ಸದ್ದೇ ಇಲ್ಲ

ಇದುವರೆಗಿನ ಇತಿಹಾಸ ಪಠ್ಯಗಳಲ್ಲಿ ಹರಪ್ಪ ಮೊಹೆಂಜೊದಾರೋ ನಾಗರೀಕತೆಗಳ ನಾಶಕ್ಕೆ 'ಆರ್ಯರ ಆಗಮನ' ಕಾರಣವಾಗಿರುವ ಸಾಧ್ಯತೆ ಇದೆ ಎಂಬ ಹಾಗೂ ಈ ನಾಗರೀಕತೆಯ ಪ್ರಮುಖ ಸ್ಥಳಗಳಾದ ಹರಪ್ಪ-ಮೊಹೆಂಜೊದಾರೋ ಪ್ರದೇಶಗಳು ಭೌಗೋಳಿಕವಾಗಿ ಈಗಿನ ಪಾಕಿಸ್ತಾನದಲ್ಲಿದೆ ಎಂಬ ವಿಚಾರಗಳ ಪ್ರಸ್ತಾಪವಿರುತ್ತಿತ್ತು. ಅತ್ಯಂತ ಪ್ರಜ್ಞಾಪೂರ್ವಕವಾಗಿ ಈ ಅಂಶಗಳನ್ನು ಈಗ ಕೈಬಿಡಲಾಗಿದೆ.



ಕೈಬಿಟ್ಟ ಪ್ರಸ್ತಾಪಗಳ ಬದಲಿಗೆ ಹೊಸ ಪಠ್ಯದಲ್ಲಿ "ಹರಪ್ಪ ನಾಗರೀಕತೆಯ ಹೆಚ್ಚಿನ ಬೀಡುಗಳು (settlements) ಸರಸ್ವತಿ ನದಿ ತೀರದಲ್ಲಿವೆ" ಎಂದು ವಿವರಿಸಲಾಗಿದೆ.

ಹಿಟ್ಲರ್‌ನನ್ನು ನೆನಪಿಸುವ ಸಂಘಪರಿವಾರದ ಭೂಪಟ

ರಾಷ್ಟ್ರೀಯ ಸ್ವಯಂ ಸಂಘ (ಆರ್.ಎಸ್.ಎಸ್), ನಡೆಸುತ್ತಿರುವ ಪ್ರಾಥಮಿಕ ಹಂತದ ಶಿಶು ಮಂದಿರಗಳಲ್ಲಿ 4ನೇ ತರಗತಿ ಪಠ್ಯ 'ಗೌರವ ಗಾಥಾ'ದಲ್ಲಿ 'ಪುಣ್ಯ ಭೂಮಿ ಭಾರತ' ಎಂಬ ತಲೆ ಬರಹದಡಿಯಲ್ಲಿ ಚಿತ್ರಿಸಿರುವ ಭಾರತ ಭೂಪಟದಲ್ಲಿ ಭಾರತ ದೇಶದ ಗಡಿಗಳು ಎಷ್ಟೆಲ್ಲಾ ವಿಸ್ತರಿಸಿವೆ ಎಂದರೆ ಇಂದಿನ ಪಾಕಿಸ್ತಾನ, ಅಫಘಾನಿಸ್ತಾನ, ನೇಪಾಳ, ಬರ್ಮಾ, ಬಾಂಗ್ಲಾ ದೇಶ, ಭೂತಾನ್, ಶ್ರೀಲಂಕಾ, ಚೀನಾ ದೇಶದ ಒಂದಷ್ಟು ಭಾಗಗಳನ್ನು ಅದು ಒಳಗೊಂಡಿದೆ!

ವೇದಗಳ ಉಲ್ಲೇಖಗಳ ನಿರಾಕರಣೆ - ಜಾತಿ ವ್ಯವಸ್ಥೆ, ಸ್ತ್ರೀ ಶೋಷಣೆಯ ಮರೆಮಾಚುವಿಕೆ

ಆರ್ಯರ ಕಾಲದ ಸಾಮಾಜಿಕ - ಆರ್ಥಿಕ - ವಿಚಾರಗಳಲ್ಲಿ ಹಾಗೂ ಆಹಾರಾಭ್ಯಾಸಗಳ ವಿಚಾರದಲ್ಲಿ ಹಲವು ಅಂಶಗಳನ್ನು ಹೊಸ ಪಠ್ಯದಲ್ಲಿ ಬದಲಿಸಲಾಗಿದೆ. ಸಾಮಾಜಿಕ ಆರ್ಥಿಕ ಅಸಮಾನತೆಗೆ ಕಾರಣವಾಗಿದ್ದ ಜಡ 'ವರ್ಣ ವ್ಯವಸ್ಥೆ' ಯ ಬಗೆಗೆ ಪ್ರಸ್ತಾಪಗಳನ್ನು ಹೊಸ ಪಠ್ಯದಲ್ಲಿ ಕೈಬಿಡಲಾಗಿದೆ ಅದೇ ರೀತಿ, ಋಗ್ವೇದದ ನಂತರದ ಕಾಲದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಬಲಗೊಂಡು ಮಹಿಳೆಯ ಸ್ಥಾನ ಮಾನಗಳು ಕುಸಿದ ಅಂಶಗಳನ್ನು ಕೈಬಿಡಲಾಗಿದೆ.

ವೇದ ಕಾಲದ ಸಾಹಿತ್ಯಗಳಲ್ಲಿ ಯಾವುದೇ ಬಗೆಯ ಅನುಮಾನಗಳಿಗೂ ಅವಕಾಶವಿಲ್ಲದಂತೆ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟ ವಿಚಾರ ಗೋಮಾಂಸ ಸೇವನೆ. ಈ ವಿಚಾರದ ಬಗೆಗಿನ ಪ್ರಸ್ತಾಪವನ್ನು ತಿರುಚಿ, ಇಂದಿನ 'ಹಿಂದೂಗಳ' ನಂಬಿಕೆಗೆ ಅನುಗುಣವಾಗಿ 'ಗೋವು' ವೇದಕಾಲದಲ್ಲಿ ಒಂದು ಪವಿತ್ರ ಪ್ರಾಣಿಯೆಂದು ಪೂಜಿಸಲ್ಪಡುತ್ತಿತ್ತೆಂದು ತಿಳಿಸಲಾಗಿದೆ.

ಅಶ್ವಮೇಧ ಯಾಗಗಳಲ್ಲಿ ಕುದುರೆ, ದನಗಳು ಮುಂತಾದ ಪ್ರಾಣಿಗಳನ್ನು ಹೇರಳ ಬಲಿ ನೀಡುತ್ತಿದ್ದ, ಆಹಾರವಾಗಿ ಸೇವಿಸುತ್ತಿದ್ದ , ಆಶ್ರಮಕ್ಕೆ ಅತಿಥಿಗಳಾಗಿ ಬಂದ ಋಷಿ ಮುನಿಗಳ ಸತ್ಕಾರದಲ್ಲಿ ದನದ ಮಾಂಸದ ಆಹಾರವನ್ನು ಒದಗಿಸಿದ ಬಗ್ಗೆ ಇತ್ಯಾದಿಯಾಗಿ ಗೋಮಾಂಸ ಸೇವನೆ ಕುರಿತು ವೇದ ಕಾಲದ ಸಾಹಿತ್ಯದಲ್ಲಿ ಸಾಕಷ್ಟು ಉಲ್ಲೇಖ-ಆಧಾರಗಳಿವೆ.

ಮುಸ್ಲಿಂ ಮತಾಂಧತೆಯ ಬಗೆಗೆ ಮಾತ್ರವೇ?

ಇದೇ ಈಗಿನ ಹೊಸ ಪಠ್ಯದ ಅಧ್ಯಾಯ 16 ರ 'ಭಾರತದ ಸಾಂಸ್ಕೃತಿಕ ಸಂಬಂಧಗಳ ಬಗೆಗೆ ವಿವರಿಸುವ ಭಾಗದಲ್ಲಿ ಇಂದಿನ ಅಫಘಾನಿಸ್ತಾನದ 'ಬಮಿಯಾನ್' ನಲ್ಲಿದ್ದ ಬೃಹತ್ ಬುದ್ಧನ ಪ್ರತಿಮೆಯ ಚಿತ್ರವನ್ನು ನೀಡಲಾಗಿದ್ದು, 2001 ರಲ್ಲಿ ಮತಾಂಧ ತಾಲಿಬಾನ್‌ರಿಂದ ಈ ವಿಗ್ರಹವು ನಾಶಗೊಳಿಸಲ್ಪಟ್ಟ ಬಗೆಗೆ ವಿವರಣೆ ನೀಡಲಾಗಿದೆ. ತಾಲಿಬಾನ್ ಮೂಲಭೂತವಾದಿಗಳ ಈ ವಿಗ್ರಹ ನಾಶದ ಕೃತ್ಯ ಖಂಡನಾರ್ಹ ಮತಾಂಧತೆಯ ಉದಾಹರಣೆ ಎಂಬ ಬಗೆಗೆ ಯಾರಿಗೂ ಅನುಮಾನ ಬೇಕಿಲ್ಲ. ಆದರೆ ಮುಸ್ಲಿಂ ಮೂಲ ಭೂತವಾದಿಗಳ ಕ್ರಮವನ್ನು ಮಾತ್ರವೇ ಪ್ರಸ್ತಾಪಿಸುವ ಪಠ್ಯದ ಉದ್ದೇಶವೇ ಅತ್ಯಂತ ಪ್ರಶ್ನಾರ್ಹವಾಗಿದೆ.

ಈ ಕೋಮು ಪಕ್ಷಪಾತ ಧೋರಣೆಯ ಮುಂದುವರಿಕೆ ಎಂದರೆ 9 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದ 'ಸಮಕಾಲೀನ ಭಾರತ' ಅಧ್ಯಾಯದಲ್ಲಿ ಮಹಾತ್ಮ ಗಾಂಧಿ ಹತ್ಯೆಯು ಹಿಂದೂ ಮತಾಂಧನಿಂದ ನಡೆಯಿತೆಂಬ ಬಗೆಗೆ ಪ್ರಸ್ತಾಪವೇ ಇಲ್ಲದಂತೆ ಮಾಡಿರುವುದು ಮತ್ತು ಯಾವ ಕಾರಣಕ್ಕಾಗಿ ಈ ಹತ್ಯೆ ನಡೆಯಿತು ಎಂಬ ಪ್ರಸ್ತಾಪವೂ ಇಲ್ಲದಿರುವುದು. ತನ್ನ ಎಲೆಯಲ್ಲಿ ಬಿದ್ದ ಹೆಗ್ಗಣವನ್ನು ಮರೆ ಮಾಚಿ, ಪರರ ಎಲೆಯಲ್ಲಿ ಬಿದ್ದಿರುವ ಇಲಿಯನ್ನು ತೋರುವಂತಿದೆ ಸಂಘ ಪರಿವಾರದ ಈ ಪಠ್ಯ.

ಪ್ರತಿಭಟನೆಯ ಪರಂಪರೆಗಳನ್ನೇ ನುಂಗಿ ಹಾಕುವ ಪುರೋಹಿತಶಾಹಿ ಷಡ್ಯಂತ್ರಗಳು

ಈ ಪಠ್ಯದಲ್ಲಿ ವಿವರಿಸಲಾದ ಬೌದ್ಧ ಧರ್ಮ-ಜೈನಧರ್ಮಗಳ ಉದಯದ ಕುರಿತ ವಿವರಣೆಗಳು ಸಹ ಐತಿಹಾಸಿಕ ಸತ್ಯಕ್ಕೆ ಅಪಚಾರವೆಸಗುವಂಥದ್ದೇ ಆಗಿದೆ. ಅಂದಿನ ಕಮಠ ಬ್ರಾಹ್ಮಣಶಾಹಿ ವ್ಯವಸ್ಥೆಯ ಸಂಪ್ರದಾಯಗಳು, ಯಜ್ಞ ಯಾಗಗಳ ದುಂದು ಡಾಂಬಿಕತೆ, ಜನ ಸಾಮಾನ್ಯರು ಭರಿಸಲಾರದ ದುಬಾರಿ ಧಾರ್ಮಿಕ ಆಚರಣೆಗಳು, ಪ್ರಾಣಬಲಿ, ಇತ್ಯಾದಿಗಳನ್ನು ಬೌದ್ಧ-ಜೈನ ಧರ್ಮಗಳು ನಿರಾಕರಿಸಿದವು. ಜೊತೆಗೆ 'ವೇದ ಪ್ರಾಮಣ್ಯ'ವನ್ನು ಸಂಪೂರ್ಣವಾಗಿ ನಿರಾಕರಿಸಿ ಈ ಹೊಸ ಧರ್ಮಗಳು ಉದಯಿಸಿದವು ಎಂಬ ಸತ್ಯವನ್ನು ಹೊಸ ಪಠ್ಯದಲ್ಲಿ ಮರೆ ಮಾಚಲಾಗಿದೆ.

ಇದಕ್ಕೆ ಬದಲಿಗೆ, ಆ ಹೊತ್ತಿಗೆ ಆಗಲೇ 'ಹಿಂದೂ' ಪರಂಪರೆಯ ಉಪನಿಷತ್ತುಗಳಲ್ಲಿ ಪ್ರತಿಪಾದಿಸಲಾಗಿದ್ದ 'ಜ್ಞಾನ ಮಾರ್ಗದ ಮೂಲಕ ಮೋಕ್ಷ ಗಳಿಕೆ' ಯನ್ನೂ ಪ್ರತಿಪಾದಿಸಿ ಈ ಧರ್ಮಗಳು ಹುಟ್ಟಿಕೊಂಡವು ಎಂದು ವಿವರಿಸಲಾಗಿದೆ.

ಹಿಂದುತ್ವ ಪುನರುತ್ಥಾನದ ಚಾಲಕ ಶಕ್ತಿ ಶೋಷಕ ವ್ಯವಸ್ಥೆಯ ರಕ್ಷಣೆ ಅಲ್ಲವೇ?

ಹಾಗಿದ್ದರೆ ತಥಾತಥಿಕ ಹಿಂದುತ್ವ ಪುನರುತ್ಥಾನದ ಚಾಲಕ ಶಕ್ತಿ ಏನು? 'ಹಿಂದುತ್ವ'ದ

ಪುಟ 11 ಕ್ಕೆ

ಮೂಲ ತಾತ್ವಿಕ ತಿರುಳು ಏನು? ಶೋಷಕ ವರ್ಗಗಳ ಶೋಷಣೆಯನ್ನು ಬೆಂಬಲಿಸುವುದೇ ಅಲ್ಲವೆ? ಶತಶತಮಾನಗಳ ಅವ್ಯಾಹತ ಶೋಷಣೆಯ ವಿರುದ್ಧ ಮೈ ಕೊಡವಿ ಎದ್ದು ನಿಲ್ಲುತ್ತಿರುವ ಶೋಷಿತ ವರ್ಗವನ್ನು ಮತಾಂಧತೆಯ ಮಂಕು ಬೂದಿ ಎರಚಿ ಶೋಷಕ ಆರ್ಥಿಕ-ಸಾಮಾಜಿಕ ವ್ಯವಸ್ಥೆಗೆ ಅವರನ್ನು ವಿಧೇಯರನ್ನಾಗಿಸುವುದೇ ಅಲ್ಲವೆ?

ಫ್ಯಾಸಿಸಂ-ನಾಝಿವಾದದ ಪೈಶಾಚಿಕತೆಯನ್ನು ಮುಚ್ಚಿಹಾಕುವಿರೇಕೆ?

ಅನ್ಯಾಯ-ವಂಚನೆಯ ವಿರುದ್ಧದ ಹೋರಾಟಗಳಿಗೆ ಇಂದಿಗೂ- ಎಂದಿಗೂ ಸ್ಫೂರ್ತಿಯಾದ ಅಕ್ಟೋಬರ್ ಕ್ರಾಂತಿಯ ಚಾರಿತ್ರಿಕ ಮಹತ್ವವನ್ನು ಕುಗ್ಗಿಸುವ 'ಹಿಂದುತ್ವ'ವಾದಿಗಳ ಈ ಪಠ್ಯ ಮನುಕುಲ ತನ್ನ ಚರಿತ್ರೆಯಲ್ಲಿ ಕಂಡು ಕೇಳರಿಯದಂತಹ ಪೈಶಾಚಿಕ ಹಿಂಸಾಚಾರ, ನರಮೇಧಗಳನ್ನು ಸಂಘಟಿಸಿದ, ಕೋಟಿ, ಕೋಟಿ ಜನರ ಮಾರಣ ಹೋಮಗೈದಂತಹ ಎರಡು ಜಾಗತಿಕ ಯುದ್ಧಗಳಿಗೆ ಕಾರಣವಾದ ನಾಜಿವಾದ, ಫ್ಯಾಸಿಸಂ ಬಗೆಗೆ ಏನನ್ನು ಹೇಳುತ್ತಿದೆ ಎಂಬುದು ಅತ್ಯಂತ ಆಘಾತಕಾರಿಯಾಗಿದೆ. ನಾಜಿವಾದದ ಬಗೆಗೆ ಮಾತನಾಡುವ ಪಠ್ಯ, 6 ಮಿಲಿಯ ಯಹೂದಿಗಳ ನರಭೇಟೆಯಾಡಿದ ಹಿಟ್ಲರ್ ನೇತೃತ್ವದ ನಾಜಿ ಪಡೆಯ ಕುಕೃತ್ಯಗಳ ಬಗೆಗೆ ಪ್ರಸ್ತಾಪಿಸುತ್ತಿಲ್ಲ. ಈ ಅಮಾನುಷ ಬೀಬತ್ಸ ಹಿಂಸೆಗೆ ಮೂಲವಾದ 'ಆರ್ಯ ಜನಾಂಗ ಶ್ರೇಷ್ಟತೆ'ಯ ರಾಕ್ಷಸೀ ಸಿದ್ಧಾಂತದ ಬಗೆಗೂ ಈ ಪಠ್ಯ ಏನನ್ನು ಹೇಳುತ್ತಿಲ್ಲ. ಫಾಸಿಸಂ, ನಾಜಿವಾದಗಳು ಸರ್ವಾಧಿಕಾರಿ ಪ್ರವೃತ್ತಿಗಳೆಂದು ವಿವರಿಸಿ ಪಠ್ಯ ಕೈತೊಳೆದುಕೊಳ್ಳುತ್ತದೆ (ಮೊನ್ನೆ ಮೊನ್ನೆಯ ಗುಜರಾತಿನ ನರಮೇಧ ನೆನಪಾಗುತ್ತಿದೆ ಯಲ್ಲವೇ?). ಈ ಪಠ್ಯ ಸಮಾಜವಾದಿ ಕ್ರಾಂತಿ, ಸಮಾಜವಾದಿ ವ್ಯವಸ್ಥೆಯನ್ನು ಇದೇ 'ಸರ್ವಾಧಿಕಾರಿ' ಗುಂಪಿಗೆ ಸೇರಿಸುತ್ತದೆ.

ದ್ವಿರಾಷ್ಟ್ರ ಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದವರು ಯಾರು?

ಬ್ರಿಟೀಷರ ನೀತಿಗಳು ಹಾಗೂ ಭಾರತದ ಸ್ವಾತಂತ್ರ್ಯ ಚಳುವಳಿಯ ಬಗೆಗೆ ವಿವರಿಸುವ ಸಂದರ್ಭದಲ್ಲಿ ಮುಸ್ಲಿಂ ಕೋಮುವಾದದ ಕುರಿತು ಹಲವು ಪ್ರಸ್ತಾಪಗಳಿವೆ. ಪಠ್ಯವು ಭಾರತದ ರಾಜಕೀಯವು ಕೋಮುವಾದೀ ಕರಣಗೊಳ್ಳಲು ಮುಸ್ಲಿಂ ಲೀಗನ್ನು ಹೊಣೆ ಮಾಡಿದೆ. ಆದರೆ ಮುಸ್ಲಿಂ ಲೀಗ್‌ನ ಜೊತೆಜೊತೆಗೆ ಸ್ಥಾಪಿಸಲ್ಪಟ್ಟು ಹಿಂದೂ ರಾಷ್ಟ್ರ-ಮುಸ್ಲಿಂ ರಾಷ್ಟ್ರವೆಂಬ ದ್ವಿರಾಷ್ಟ್ರ ಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದ 'ಹಿಂದೂ ಮಹಾಸಭಾ' ಬಗೆಗಾಗಲಿ, ರಾಷ್ಟ್ರೀಯ ಸ್ವಯಂ ಸಂಘ-ಆರೆಸ್ಸೆಸ್ ಬಗೆಗಾಗಲಿ ಯಾವುದೇ ಪ್ರಸ್ತಾಪವಿಲ್ಲ.

ಅಸ್ಪೃಶ್ಯತೆ-ಸತೀ ಪದ್ಧತಿಗಳ ಸಮರ್ಥನೆ!

ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಜಾರಿಗೆ ತರಲಾಗಿರುವ ಪಠ್ಯಗಳಲ್ಲಿ, ರಜಪೂತ ಮಹಿಳೆಯರ 'ಸತಿ' ಕ್ರಮವನ್ನು ಆತ್ಮಗೌರವವನ್ನು ಕಾಪಾಡಿಕೊಳ್ಳುವ ಕ್ರಮವೆಂದು ಬಣ್ಣಿಸಲಾಗಿದೆ! ದಲಿತರ ಹಿಂದುಳಿದಿರುವಿಕೆಗೆ ದಲಿತ ಸಮುದಾಯದ ನಡುವೆ ಶಿಕ್ಷಣ ಪಡೆಯುವ ವಿಚಾರದಲ್ಲಿರುವ ಅನಾದರ, ನಿರಾಸಕ್ತಿಯೇ ಕಾರಣವೆಂದೂ ಪತ್ತೆಹಚ್ಚಲಾಗಿದೆ. ಮುಸ್ಲಿಂ, ಕ್ರಿಶ್ಚಿಯನ್‌ರನ್ನು ವಿದೇಶಿಯರು ಎಂದು ಈ ಪಠ್ಯಗಳು ಕರೆದಿವೆ. ಇಂತಹ ವಿಚಾರಗಳ ಆಧಾರಗಳ ಮೇಲೆ ಕಟ್ಟಲ್ಪಡುವ ಹಿಂದೂ ರಾಷ್ಟ್ರದ ವೈಭವ, ಸೊಬಗು ಏನಿರಬಹುದೆಂಬ ಕುತೂಹಲ ಇರುವವರಿಗೆ ಈಗಾಗಲೇ ಅವುಗಳನ್ನು ಕೆಲವೆಡೆ ಪರಿಚಯಿಸಲಾಗುತ್ತಿದೆ.

ಮೊನ್ನೆ ಮೊನ್ನೆ ಸತ್ತ ದನಗಳ ಚರ್ಮ ಸುಲಿಯುತ್ತಿದ್ದರು ಎಂಬ ಕಾರಣಕ್ಕೆ ಐವರು ದಲಿತರನ್ನು ಹರ್ಯಾಣ ರಾಜ್ಯದಲ್ಲಿ 'ವಿಶ್ವ ಹಿಂದೂ ಪರಿಷತ್' ಜನ ಕಲ್ಲು ಹೊಡೆದು ಕೊಂದಿದ್ದಾರೆ. (ಸತ್ತ ಪ್ರಾಣಿಗಳನ್ನು ಹೂಳುವುದೇ ಕೆಲವು ನಿರ್ದಿಷ್ಟ ಜಾತಿಗಳ ಪರಮ ಕರ್ತವ್ಯ ಎಂದು 'ಮನುಸ್ಮೃತಿ' ಕಟ್ಟಳೆ ವಿಧಿಸಿದೆ) ಇಂದು ಜೀವಂತ ಇಲ್ಲ ಎಂದು ಭಾವಿಸಲಾಗಿದ್ದ ಕ್ರೂರ 'ಸತೀ' ಆಚರಣೆಗಳು ರಾಜಸ್ತಾನ, ಮಧ್ಯಪ್ರದೇಶ ಮುಂತಾದ ಕಡೆಗಳಲ್ಲಿ ಮರುಕಳಿಸುತ್ತಿವೆ. ಮೊನ್ನೆ ಮೊನ್ನೆ ಗುಜರಾತಿನಲ್ಲಿ ಮಹಿಳೆಯರ ಮೇಲೆ ಲೆಕ್ಕವಿಲ್ಲದ ಅತ್ಯಾಚಾರಗಳು, ಸಾವಿರಾರು ಅಮಾಯಕ ಮಕ್ಕಳು, ಮಹಿಳೆಯರು, ಮುಗ್ಧರ ಸಜೀವ ದಹನ, ಹೀನ ಸರ್ಕಾರಿ ಪ್ರೇರಿತ ಭಯೋತ್ಪಾದನೆಯನ್ನು ಕಂಡಿದ್ದೇವೆ.

ಮಿತ್ರರ ಜೊತೆ ಅಧಿಕಾರ ಹಂಚಿಕೊಂಡಿರುವುದರಿಂದ ಈಗ 'ಇಷ್ಟೇ ಸಾಕು' ಎಂದು ಪ್ರಧಾನಿಯವರು ಅಸಮಾಧಾನಗೊಂಡಿದ್ದರೆ, 'ಹಿಂದುತ್ವ' ವಾದಿ ಉಗ್ರರು ಇದು ಸಾಲದೆಂದು ಹೂಂಕರಿಸುತ್ತಿದ್ದಾರೆ. ಪ್ರಧಾನಿಯವರ 'ಅಸಮಾಧಾನ'ದ ಬಗೆಗೆ ಇವರಿಗೆ 'ತೀವ್ರ ಅಸಮಾಧಾನ'ವಾಗಿದೆ. ಪರಸ್ಪರರ ವಿರುದ್ಧ ಬಾಣ ಬಿರುಸುಗಳ ತೂರಾಟ ನಡೆದಿದೆ. ಆದರೆ ಶಿಕ್ಷಣದ ಕೇಸರೀಕರಣದ ಮೂಲಕ ಪ್ರಧಾನಿಗಳೂ ಸಹ 'ತಮ್ಮದಾರಿ'ಯಲ್ಲೇ ಇರುವ ಬಗೆಗೆ ಮಾತ್ರ ಒಳಗೊಳಗೇ ಇವರಿಗೆ ಸಮಾಧಾನವೂ ಆಗಿದೆ ಎಂದು ದೇಶದ ಪ್ರಜ್ಞಾವಂತ ಜನರಿಗೆ ಚೆನ್ನಾಗಿ ಗೊತ್ತಿದೆ. ಕೇಂದ್ರದಲ್ಲಿ - ರಾಜ್ಯಗಳಲ್ಲಿ ಬಿಜೆಪಿ, ಬಿಜೆಪಿ ನೇತೃತ್ವದ ಸರಕಾರಗಳು ಇರುವಷ್ಟು ದಿನ ಇಂತಹ ಪಠ್ಯಪಸ್ತಕಗಳಿಗೆ ವಿಷ ಸುರಿಯುವ 'ವಿಷ ಪ್ರಾಶಾನ' ತಪ್ಪದೆಂದು ತೋರುತ್ತಿದೆ.

ಕಮಲಾಪುರ ದುರ್ಘಟನೆ.......

ಪುಟ 9.ರಿಂದ

ನಾರಾಯಣನ ತಲೆಗೆ ಸನಿಕೆಯ ಹಿಡಿಯಿಂದ ಸಿಕ್ಕಂತೆ ಬಡಿದು ಪಕ್ಕದಲ್ಲಿರುವ ಗಟಾರಕ್ಕೆ ಎಸೆದಿದ್ದಾರೆ. ರಕ್ತಸಿಕ್ತನಾದ ಅವನು ಸ್ಥಳದಲ್ಲೇ ಮೂರ್ಛೆ ಹೋಗಿದ್ದಾನೆ.

ಮರಣಾಂತಿಕ ಸ್ಥಿತಿ
ಚಿಕಿತ್ಸೆಗೆ ಹಣ ಸಂಗ್ರಹ

ಗಟಾರದಲ್ಲಿ ನಾರಾಯಣ ಬಿದ್ದಿರುವುದನ್ನು ಗಮನಿಸಿದ ಕೇರಿಯ ಹುಡಗರ್‍ಯಾರೋ ಅವರ ಮನೆಗೆ ಸುದ್ದಿ ಮುಟ್ಟಿಸಿದ್ದಾರೆ. ಮರಣಾಂತಿಕ ಸ್ಥಿತಿಯಲ್ಲಿದ್ದ ಅವರನ್ನು ಮನೆಯವರು ಮೊದಲು ಬಳ್ಳಾರಿಯ ವಿಮ್ಸ್ (VIMS) ಆಸ್ಪತ್ರೆಗೆ ತಂದಿದ್ದಾರೆ. ಅಲ್ಲಿನ ವೈದ್ಯರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದರಿಂದ ನಂತರ ಅವನನ್ನು ದಾನಮ್ಮ ಎಂಬ ಆಸ್ಪತ್ರೆಗೆ ತಂದು ದಾಖಲು ಮಾಡಿದಾಗ ನಾರಾಯಣ ಜೀವ ಉಳಿಸಲು ತಕ್ಷಣ ಅಪರೇಷನ್ ಅಗತ್ಯವಿರುವುದರಿಂದ 25 ಸಾವಿರ ಹಣ ತನ್ನಿ ಎಂದು ವೈದ್ಯರು ಹೇಳಿದ್ದಾರೆ. ಈ ವಿಷಯವನ್ನು ತಿಳಿದ ಊರಿನ ನಾಯಕ ಜನಾಂಗದ ಮುಖಂಡರೆಲ್ಲಾ ಸೇರಿ 25 ಸಾವಿರ ಹಣವನ್ನು ಕೊಡಿಸಲು ಬಡವನಾದ ರಾಮಪ್ಪನೊಬ್ಬನಿಂದ ಅಸಾಧ್ಯವೆಂದು ಚರ್ಚಿಸಿ ಜನಾಂಗದ ಪ್ರತಿಯೊಂದು ಕುಟುಂಬವು ತಲಾ 10 ರೂಪಾಯಿ ಹಣ ನೀಡಬೇಕೆಂದು ಮತ್ತು ಮರುದಿನ ಜನಾಂಗದ ಮುಖಂಡರ ನೇತೃತ್ವದಲ್ಲಿ ಸಭೆ ಸೇರಲು ನಿರ್ಧರಿಸಿ ಪ್ರಚಾರ ನಡೆಸಿದ್ದಾರೆ.

ಸತ್ತೇ ಹೋದನೆಂಬ ಸುಳ್ಳು ಸುದ್ದಿ ?
ದಲಿತ ಕೇರಿಗೆ ಬೆಂಕಿ

ಡಿಸೆಂಬರ್ 25 ರ ಸಂಜೆ 4 ರ ಹೊತ್ತಿಗೆ ಗಾರಭಾವಿ ಅಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ ಸೇರಿದ ನಾಯಕ ಜನಾಂಗದ ಸಭೆಗೆ ಸಾವಿರಾರು ಜನರು ಜಮಾಯಿಸಿದರು. ಅದೇ ವೇಳೆಗೆ ಬಳ್ಳಾರಿಯ ಆಸ್ಪತ್ರೆಯಲ್ಲಿ ಅಪರೇಷನ್‌ಗಾಗಿ ಸೇರಿದ್ದ ಹುಡುಗಿಯ ಅಣ್ಣ ನಾರಾಯಣ ಸತ್ತನೆಂಬ ಸುಳ್ಳು ಸುದ್ದಿಯೊಂದು ಅದೇಗೋ ಸಭೆಯೊಳಗೆ ನುಸುಳಿತು. ತಕ್ಷಣದಲ್ಲೇ ಯೋಚಿಸಲು, ವಸ್ತುಸ್ಥಿತಿ ತಿಳಿಯಲು ವ್ಯವಧಾನವಿಲ್ಲದ ಜನರ ಗುಂಪೊಂದು ಸಿಟ್ಟಿನಿಂದ ಪ್ರತಿಕಾರದ ಕ್ರಮ ಕೈಗೊಳ್ಳಲು ದಿಢೀರನೆ ದಲಿತರ ಕೇರಿಗೆ ನುಗ್ಗೇಬಿಟ್ಟಿತು.

ಕಲ್ಲು ತೂರುತ್ತಾ, ಲೂಟಿ ಮಾಡುತ್ತಾ, ಸಿಕ್ಕ ಸಿಕ್ಕ ಹೆಂಗಸರು, ಮುದುಕರು, ಮಕ್ಕಳನ್ನು ಒದೆಯುತ್ತಾ ಒಂದು ಗುಂಪು ಸಾಗಿದರೆ, ಮಚ್ಚು, ದೊಣ್ಣೆಯಂತಹ ಮಾರಕಾಸ್ತ್ರ, ಪೆಟ್ರೋಲ್, ಸೀಮೆಎಣ್ಣೆ ಡಬ್ಬಗಳನ್ನು ಹಿಡಿದ ಇನ್ನೊಂದು ಗುಂಪು ದಲಿತಕೇರಿಯೊಳಗೆ ನುಗ್ಗಿ ಗುಡಿಸಲುಗಳಿಗೆ ಬೆಂಕಿ ಇಟ್ಟಿತು. ಸಮಾಧಾನ ಸಂಗತಿಯೆಂದರೆ ಅನಿರೀಕ್ಷಿತವಾಗಿ ಎರಗಿ ಬಂದ ಈ ಧಾಳಿಯಲ್ಲಿ ವಯಸ್ಸಾದವರು, ಮಕ್ಕಳು ಹಲ್ಲೆಗೀಡಾಗಿದ್ದರೂ ಆ ಸಮಯದಲ್ಲಿ ಕೇರಿಯ ಬಹುಪಾಲು ಹೆಂಗಸರು, ಗಂಡಸರು ಕೂಲಿ ಮಾಡಿಕೊಂಡು ಮನೆಯತ್ತ ಧಾವಿಸುತ್ತಿದ್ದರು. ಇಲ್ಲದಿದ್ದಲ್ಲಿ ಎಷ್ಟು ಜೀವಗಳು ಬೆಂಕಿಗಾಹುತಿಯಾಗುತ್ತಿದ್ದವೊ ಗೊತ್ತಿಲ್ಲ. ಮತ್ತೊಂದು ಕಂಬಾಲಪಲ್ಲಿ ನಡೆದೇ ಬಿಡುತ್ತಿತ್ತೇನೋ. ಇದ್ದ ಸಂದರ್ಭದಿಂದ ಹಾಗಾಗಲಿಲ್ಲ. ಆದರೂ ಈ ಅನಾಹುತದಲ್ಲಿ 162 ದಲಿತರ ಗುಡಿಸಲುಗಳು ಸುಟ್ಟು ಭಸ್ಮವಾಗಿವೆ. ಸುಮಾರು 25 ಲಕ್ಷ ರೂಪಾಯಿ ಆಸ್ತಿ-ಪಾಸ್ತಿ ಹಾನಿಯಾಗಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ನೂರಾರು ದಲಿತ ಕುಟುಂಬಗಳು ಬೀದಿಗೆ ಬಿದ್ದಿವೆ. ಊರಿನಲ್ಲಿ ಶಾಂತಿ-ನೆಮ್ಮದಿ ಹಾಳಾಗಿದೆ. ಮನಸ್ಸುಗಳು ಒಡೆದುಹೋಗಿವೆ. ಮುಖ್ಯವಾಗಿ **ಸಹೋದರರಂತೆ ಬಾಳಬೇಕಾಗಿದ್ದ ದಲಿತರು ಮತ್ತು ನಾಯಕ ಜನಾಂಗದ(ಎಸ್.ಟಿ) ಜನರ ಮನಸ್ಸುಗಳಲ್ಲಿ ದ್ವೇಷದ ಕಿಡಿ ಹೊತ್ತಿಕೊಂಡಿದೆ.**

ನಿರ್ಲಕ್ಷ್ಯ ಪೋಲೀಸು / ಬೇಜವಾಬ್ದಾರಿ ಸರ್ಕಾರ

ಗ್ರಾಮದಲ್ಲಿ ಹುಡುಗಿಯ ಅಣ್ಣ ನಾರಾಯಣನ ಮೇಲೆ ಹಲ್ಲೆಯಾದಾಗ ಅಲ್ಲಿಯ ಜನರು ಪೋಲಿಸ್ ಠಾಣೆಗೆ ಹೋಗಿ ವಿಷಯ ತಿಳಿಸಿದಾಗಲೂ ಅಲ್ಲಿನ ಪೋಲೀಸ್ ಇನ್‌ಸ್ಪೆಕ್ಟರ್ ಎಚ್ಚರಗೊಳ್ಳಲಿಲ್ಲ. ಅಲ್ಲಿನ ಸರ್ಕಲ್ ಇನ್‌ಸ್ಪೆಕ್ಟರ್ ಸಹ ಮುಂಜಾಗ್ರತೆವಹಿಸಲಿಲ್ಲ. ಪೋಲೀಸ್ ಅಧಿಕಾರಿಗಳ ನಿರ್ಲಕ್ಷ್ಯತನಕ್ಕೆ ಸಾಕ್ಷಿಯಾಗಿ ನೂರಾರು ಗುಡಿಸಲುಗಳು ಭಸ್ಮವಾದವು.

ಇನ್ನು ಕೋಲಾರ ಜಿಲ್ಲೆಯ ಕಂಬಾಲಪಲ್ಲಿ... ನಾಗಲಾದಲ್ಲಿ, ಬಳ್ಳಾರಿ ಜಿಲ್ಲೆಯ ವಣೆನೂರು, ಕಮಲಾಪುರ ಹೀಗೆ ನಿರಂತರವಾಗಿ ದಲಿತರ ಮೇಲೆ ಧಾಳಿ, ದಬ್ಬಾಳಿಕೆಗಳು ನಡೆದರೂ ಸರ್ಕಾರ ಮಾತ್ರ ಗಂಭೀರವಾಗಿಲ್ಲ. ಈ ಮಧ್ಯೆ ಇಂತಹ ಅನಾಹುತಗಳು ನಡೆದಾಗಲೆಲ್ಲಾ ಮೂಗು ತೂರಿಸುವ ದಲಿತ ಮುಖಂಡರುಗಳು ಮತ್ತಷ್ಟು ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸುವುದೇ ಜಾಸ್ತಿಯಾಗಿದೆ. ಕಮಲಾಪುರ ಘಟನೆಯ ನಂತರವಂತೂ ರಕ್ಷಣೆಗಾಗಿ ದಲಿತರಿಗೆ ಬಂದೂಕು ಇಟ್ಟುಕೊಳ್ಳಲು ಅನುಮತಿಗಾಗಿ ಕೆಲವರು ಒತ್ತಾಯಿಸುತ್ತಿದ್ದಾರೆ. ದಲಿತರ ಕೂಲಿ, ಭೂಮಿ, ವಸತಿ, ಅವರ ಮಕ್ಕಳ ಶಿಕ್ಷಣ, ಉದ್ಯೋಗ ಪ್ರಶ್ನೆಗಳ ಆಧಾರದಲ್ಲಿ ಹೋರಾಟಗಳನ್ನು ಸಂಘಟಿಸಿ, ಆ ಸೌಲತ್ತುಗಳನ್ನು ಕೊಡಿಸುವಂತ ಮತ್ತು ಅಸಮಾನತೆಯಿಂದ - ಸಮಾನತೆ, ಸಾಮಾಜಿಕ ನ್ಯಾಯಕ್ಕಾಗಿ ಅವರ ಜಾಗೃತಿಯನ್ನು ಬಳಸುವ ಬದಲು ಮತ್ತೊಂದು ಜನಾಂಗದ ವಿರುದ್ಧ ದಲಿತರನ್ನು ಉದ್ರೇಕಿಸುವುದು ಸರಿಯಾದ ಮಾರ್ಗವಲ್ಲ.

ರಾಜ್ಯದ ಕಾಂಗ್ರೆಸ್ (ಐ) ಸರ್ಕಾರವಂತೂ ದಲಿತರ ಮೇಲೆ ಮತ್ತು ಹಲವಾರು ಜನಾಂಗಗಳ ಮಧ್ಯೆ ಹೆಚ್ಚುತ್ತಿರುವ ಗಲಭೆಗಳನ್ನು ತಡೆಯುವಲ್ಲಿ ಸಂಪೂರ್ಣ ನಿರ್ಲಕ್ಷವಹಿಸಿದೆ. ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆ, ಸಮಾಜ ಕಲ್ಯಾಣ ಸಚಿವ ಎ.ಕೃಷ್ಣಪ್ಪ ಕಮಲಾಪುರಕ್ಕೆ ಭೇಟಿ ನೀಡಿ ಮಾಡಿದ ಮಹತ್ತರ ಕೆಲಸವೆಂದರೆ ಎಂಟು ಜನ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತು ಗೊಳಿಸಿದ್ದು. ಈ ಕ್ರಮ ಸ್ವಾಗತಾರ್ಹ. ಆದರೆ ಕೇವಲ ಅಮಾನತ್ತಿನಿಂದ ಸೌಹಾರ್ದತೆ ಬೆಳೆಯುವುದಿಲ್ಲ. ಬದಲಿಗೆ ಸರ್ಕಾರದ ನಿರಂತರವಾದ ಗಮನ, ಎಚ್ಚರ ಜಾಗೃತಿ, ಕೆಳ ಹಂತದಲ್ಲಿ ಎಲ್ಲಾ ಸಮೂಹಗಳೊಂದಿಗೆ ಸೇರಿ ನಡೆಯಬೇಕು. ಆಗ ಸೌಹಾರ್ದತೆ ನೆಲೆಸಲು ಸಾಧ್ಯ. ಹಾಗೇ ಉಭಯ ಜನಾಂಗಗಳು ಶತ್ರುಗಳಲ್ಲ. ಭಾದಿಸುವ ಸಾಮಾನ್ಯ ಸಮಸ್ಯೆಗಳ ವಿರುದ್ಧ ದುಡಿವ ಈ ಸಮುದಾಯ ಐಕ್ಯ ಹೋರಾಟ ನಡೆಸುವಂತಾಗಬೇಕು. ○

ಸಿಪಿಐ(ಎಂ) ನಿಯೋಗದ ವರದಿ

ಪುಟ 9 ರಿಂದ

ಸಿಪಿಐ(ಎಂ) ನಿಯೋಗದ ಅಭಿಪ್ರಾಯ.

. ಸಭೆ ಸೇರಿದ ಜನರ ಉದ್ವಿಗ್ನ ಸ್ಥಿತಿ ಹೆಚ್ಚಲು ಯುವಕ ಸತ್ತನೆಂಬ ವದಂತಿ ಹರಡಿದುದು. ಅಂಬೇಡ್ಕರ್ ಪುತ್ಥಳಿ ಮೇಲೆ ದಾಳಿ ನಡೆಸಲು ಮುಂದಾದುದು. ಟೆಲಿಫೋನ್ ಸಂಪರ್ಕ ಕಡಿತ, ವಿದ್ಯುತ್ ಕಡಿತ ಮಾಡಿದುದು. ದಾಳಿ ನಡೆಸುವವರಿಗೆ ಕಲ್ಲುಗಳ ಸರಬರಾಜು, ಗ್ರಿಲ್ ಕಿತ್ತು ಹಾಕಲು ತಂದ ಉಪಕರಣಗಳು ಇವೆಲ್ಲವೂ ಯೋಜಿತವ್ರೋ ಎಂಬಂತೆ ಕಂಡು ಬರುವುದಲ್ಲದೇ ಕೆಲವು ಕೋಮುವಾದಿಗಳ ಮೆದುಳು ಇಲ್ಲಿ ಕೆಲಸ ಮಾಡಿರುವ ಸಾಧ್ಯತೆ ಕಂಡುಬರುತ್ತಿದೆ! ಕೆಲ ಶ್ರೀಮಂತರ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವೂ ಕಂಡುಬರುತ್ತಿದೆ. ಗುಡಿಸಲಿಗೆ ಬೆಂಕಿ ಹಚ್ಚಲಾದ ವಿಚಾರವೂ ಗಂಭೀರವಾದ ಆರೋಪ - ಪ್ರತ್ಯಾರೋಪ ವಿವಾದಗಳಿಗೊಳಗಾಗಿದೆ.

ಈ ಎಲ್ಲಾ ಅಂಶಗಳು ಒಳಗೊಂಡಂತೆ ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೊಳಪಡಿಸಬೇಕೆಂದು ಸಿಪಿಐ(ಎಂ) ನಿಯೋಗ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಸ್ವಾತಂತ್ರ್ಯಾ ನಂತರ 55 ವರ್ಷಗಳೇ ಗತಿಸಿಹೋದರೂ ತೀವ್ರವಾದ ಆರ್ಥಿಕ, ಸಾಮಾಜಿಕ ಅಸಮಾನತೆ ಇದೆ. ಮೇಲುಕೀಳೆಂಬ ಭಾವನೆ ಜಾತಿ ಪದ್ಧತಿ ಆಚರಣೆ ದಟ್ಟವಾಗಿರುವುದೇ ಪಟ್ಟಭದ್ರ ಹಿತಾಸಕ್ತಿಗಳು ಜನತೆಯನ್ನು ಮೂಲೆಗುಂಪು ಮಾಡಲು ಇಂತಹ ಜಾತಿ ಸಂಘರ್ಷಗಳನ್ನು ಹುಟ್ಟು ಹಾಕಲು ಕಾರಣವಾಗಿದ್ದು ಈ ದಿಕ್ಕಿನಲ್ಲಿ ಮನುಷ್ಯ-ಮನುಷ್ಯನನ್ನು ಗೌರವದಿಂದ, ಸಮಾನವಾಗಿ ಕಾಣುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಲ್ಲಿ ಕೇಂದ್ರ- ರಾಜ್ಯ ಸರ್ಕಾರಗಳು ಗಂಭೀರ ಕ್ರಮ ವಹಿಸುವಲ್ಲಿ ವಿಫಲವಾಗಿರುವುದೇ ಇಂತಹ ಘಟನೆಗಳು ಆಗಿಂದಾಗ್ಗೆ ಮರುಕಳಿಸಲು ಕಾರಣವಾಗಿದೆಯೆಂದು ನಿಯೋಗ ವಿವರಿಸಿದೆ. ಈ ದಿಕ್ಕಿನಲ್ಲಿ ಕೇಂದ್ರ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯವನ್ನು ಖಂಡಿಸಿದೆ. ಈಗಲಾದರೂ ಎರಡೂ ಸರ್ಕಾರಗಳು ಸಾಮರಸ್ಯ ಕಾಪಾಡಲು ಸಮಾನ ಮನೋಭಾವ ಬೆಳೆಸಲು ಗಂಭೀರವಾದ ಕ್ರಮ ಕೈಗೊಳ್ಳಲು ಒತ್ತಾಯಿಸಿದೆ.

. ಕೋಮಿನ ಜನತೆ ಹಾಗೂ ಮುಖಂಡರು ಶಾಂತಿಯನ್ನು ಸಾಮರಸ್ಯವನ್ನು ಕಾಯ್ದುಕೊಂಡು ಬರಲು ಶ್ರಮಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಸಿಪಿಐ(ಎಂ) ಮನವಿ ಮಾಡಿದೆ. ಎರಡೂ ಕಡೆ ಹಾನಿಗೊಳಗಾದ ಜನತೆಗೆ ಸಮಾರೋಪಾದಿಯಲ್ಲಿ ತೀವ್ರ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಶಾಂತಿ ಸಭೆಯನ್ನು ನಡೆಸಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಜಿಲ್ಲಾಡಳಿತ ಜನ ಪ್ರತಿನಿಧಿಗಳು ಮುಂದಾಗಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಒಂದು ಜಾತಿಯವರನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವಂತಹ ಕ್ರಮ ಕೈಬಿಡಲು ಮನವಿ ಮಾಡಿದೆ. ಹಾನಿಗೀಡಾದವರಿಗೆ ತಕ್ಷಣ ಪರಿಹಾರ, ಸೂಕ್ತ ಭದ್ರತೆ ಒದಗಿಸಲು ಆಗ್ರಹಿಸಿದೆ. ○


ಸೌಂದರ್ಯ

ಬದುಕಿಗಾಗಿ ಹೆಣ್ಣಿನ ಸಮರ್ಥ ಹೋರಾಟ 'ದ್ವೀಪ'

ಚಿತ್ರ ವಿಮರ್ಶೆ

ನಾ. ಡಿಸೋಜ ಅವರ ಸಣ್ಣ ಕಥೆಯನ್ನಾಧರಿಸಿದ ಚಿತ್ರವೇ ದ್ವೀಪ. ಮಲೆನಾಡಿನ ಹಸಿರು, ನಿರಂತರ ಸುರಿಯುವ ಮಳೆಯ ಸೊಬಗು ಮತ್ತು ಆರ್ಭಟವನ್ನು ನೋಡಬೇಕೆಂದಿದ್ದರೆ ಈ ಚಿತ್ರವನ್ನು ನೋಡಬೇಕು. ಮಳೆಯದೇ ಚಿತ್ರದಲ್ಲಿ ಪ್ರಮುಖ ಪಾತ್ರ. ನಿರ್ದೇಶಕ ಗಿರೀಶ್ ಕಾಸರವಳ್ಳಿ ಮತ್ತು ಛಾಯಾಗ್ರಾಹಕ ರಾಮಚಂದ್ರರವರು ಮಳೆಯ ಪಾತ್ರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಆಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಗೆ ಒಳಗಾಗುವ ಗ್ರಾಮವೊಂದರ ಜನರು ಸರ್ಕಾರ ನೀಡುವ ಪರಿಹಾರದೊಂದಿಗೆ ಹೊಲ-ಮನೆ ಬಿಟ್ಟು ಬೇರೆಡೆ ಹೋಗಿ ಜೀವನಕ್ಕೆ ಬೇರೆ ದಾರಿ ಹುಡುಕಿಕೊಳ್ಳುತ್ತಾರೆ. ವಾಸುದೇವರಾವ್ ಸಣ್ಣ ಗುಡಿಯೊಂದನ್ನು ಕಟ್ಟಿ ಅಲ್ಲಿ ಪೂಜಾರಿಯಾಗಿ ಊರಿನ ಜನತೆಗೆ ಶುಭಹಾರೈಸುವ ದೈವವಾಗಿರುತ್ತಾನೆ. ಊರಿನ ಜನರು ಅವನ ಆಶೀರ್ವಾದ ಬೇಡಿ ಸಣ್ಣಪುಟ್ಟ ಕಾಣಿಕೆಗಳನ್ನು ಅರ್ಪಿಸುತ್ತಿರುತ್ತಾರೆ. ಅದೇ ಅವರ ಜೀವನಾಧಾರ. ಸರ್ಕಾರ ಪರಿಹಾರ ನೀಡುವ ಸಂದರ್ಭದಲ್ಲಿ ದೇವಸ್ಥಾನ ಮತ್ತು ತನ್ನ ದೈವತ್ವವನ್ನು ಮುಂದು ಮಾಡಿ ಹೆಚ್ಚಿನ ಪರಿಹಾರ ಬಯಸುತ್ತಾನೆ. ಆದರೆ ಸರಕಾರ ನಿರಾಕರಿಸುತ್ತದೆ. ಊರಿನ ವ್ಯಾಮೋಹ ಮತ್ತು ಅಲ್ಪಪರಿಹಾರದೊಂದಿಗೆ ಊರು ಬಿಡಲು ನಿರಾಕರಿಸುತ್ತಾನೆ. ತಾನು ನಂಬಿರುವ ದೈವ ತನ್ನ ಕೈ ಬಿಡುವುದಿಲ್ಲ, ಈ ಬೆಟ್ಟ ಗುಡ್ಡಗಳು ಮುಳುಗಡೆಯಾಗುವುದಿಲ್ಲವೆಂದು ಭಾವಿಸುತ್ತಾರೆ. ಮಗನು ಕೂಡ ತಂದೆಗೆ ಒತ್ತಾಸೆಯಾಗಿ ನಿಲ್ಲುತ್ತಾನೆ. ಆದರೆ ಆ ಮನೆಯ ಸೊಸೆಯಾಗಿ ಸೌಂದರ್ಯ ಮುಂದಿನ ಅಪಾಯವನ್ನು ಮನಗಂಡು ಗಂಡ ಮತ್ತು ಮಾವನ ಮನ ಬದಲಾಯಿಸಲು ಪ್ರಯತ್ನಿಸಿ ಸೋಲುತ್ತಾಳೆ. ಅವಳ ಮಾತಿಗೆ ಬೆಲೆಯಿಲ್ಲದಂತಾಗುತ್ತದೆ. ಉಳಿದವರು ಊರು ಬಿಟ್ಟು ಹೋಗುವುದನ್ನು ನಿಸ್ಸಾಹಾಯಕಳಾಗಿ ನೋಡುತ್ತಾ ನಿಲ್ಲುತ್ತಾಳೆ.

ಮಳೆಗಾಲ ಆರಂಭವಾಗಿ ದಿನೇ ದಿನೇ ಮಳೆ ಹೆಚ್ಚಾದಂತೆ ಅಪ್ಪ-ಮಗನ ನಂಬಿಕೆ ಸುಳ್ಳಾಗುತ್ತದೆ. ಇವರ ಮನೆ ಸುತ್ತಲೂ ನೀರು ಆವರಿಸುತ್ತದೆ. ಅವರು ನಂಬಿದ ದೈವ ನೆರವಿಗೆ ಬರುವುದಿಲ್ಲ. ಮುಳುಗಡೆಗೂ ಮುಂಚೆ ಬಂದ್ದದ್ದೆಲ್ಲವನ್ನು ಎದುರಿಸುವ ಛಾತಿ ತೋರಿಸುವ ಗಂಡ ಸಮಸ್ಯೆ ಎದುರಾದಾಗ ಅಸಹಾಯಕನಾಗುತ್ತಾನೆ, ನಿರ್ಲಿಪ್ತನಾಗುತ್ತಾನೆ. ಸಮಸ್ಯೆಗಳೆಡೆಗೆ ಬೆನ್ನು ಮಾಡಿ ಮಲಗುತ್ತಾನೆ. ಆದರೆ ಬದುಕಿಗಾಗಿ ಹೋರಾಟ ನಡೆಸುವ ಆತನ ಹೆಂಡತಿ ದಿಟ್ಟತನ ತೋರಿಸುತ್ತಾಳೆ.

ಇವರ ಬೇಸರಿಕೆ ಕಳೆಯಲೆಂದೇ ಇವರ ಜೊತೆಗಿರಲು ಬಂದ ತಾಯಿಯ ತಮ್ಮನನ್ನು ನೀರಿನಿಂದ ರಕ್ಷಿಸುತ್ತಾಳೆ. ಕಷ್ಟ ಕಳೆಯಲು ಅವನೊಂದಿಗೆ ಪಗಡೆಯಾಡುತ್ತಾಳೆ. ಆದರೆ ಗಂಡ ಅವಳನ್ನೂ ಗುಮಾನಿಯಿಂದ ನೋಡುತ್ತಾನೆ. ಕಣ್ಮರೆಯಾದ ಮಾವನನ್ನು ಅವಳೇ ಹುಡುಕಿಕೊಂಡು ಹೊರಡುತ್ತಾಳೆ. ತಾನು ನಂಬಿದ ದೈವ ಕೈ ಕೊಟ್ಟಿದ್ದಕ್ಕೆ ಕಂಗಾಲಾದ ಮಾವ ಗುಡಿಗೆ ಹೋಗಿ ದುರಂತಮಯ ಅಂತ್ಯ ಕಂಡಿರುತ್ತಾನೆ. ಗಂಡನ ನಿರ್ಲಿಪ್ತತೆ ಮತ್ತು ಗುಮಾನಿಯು ಅವಳನ್ನು ಸಾಕಷ್ಟು ಕಾಡಿದರೂ ಬದುಕುಳಿಯಲೇಬೇಕೆಂಬ ಹಠದಿಂದ ದಿಟ್ಟತನ ತೋರುತ್ತಾಳೆ. ಹುಲಿ ಮನೆ ಪ್ರವೇಶಿಸಬಹುದೆಂಬ ಭಯದಿಂದ ಮನೆಯ ಸುತ್ತ ಬೆಂಕಿ ಹಾಕುತ್ತಾಳೆ, ಶಬ್ದ ಮಾಡಿದರೆ ಹುಲಿ


ಗಿರೀಶ್ ಕಾಸರವಳ್ಳಿ

ಕೇಂದ್ರ-ರಾಜ್ಯ ಪ್ರಶಸ್ತಿಗಳನ್ನು ಬಾಚಿಕೊಂಡ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಕನ್ನಡ ಚಲನಚಿತ್ರ ಡಬ್ಬದ ಬಂಧನದಿಂದ ಬಿಡುಗಡೆಯಾಗಿ ತೆರೆಕಂಡಿದೆ. ಇಂದಿನ ಸಮಾಜದಲ್ಲಿ ಬದುಕಿಗಾಗಿ ನಿತ್ಯ ಸತತ ಹೋರಾಟ ನಡೆಸುವ ಹೆಣ್ಣಿನ ದಿಟ್ಟತನವನ್ನು ಪ್ರತಿಬಿಂಬಿಸುವ ಚಿತ್ರ ಹಾಗೆಯೇ ಅವಳ ಹೋರಾಟವನ್ನು ಪುರುಷ ಪ್ರಧಾನ ಸಮಾಜ ಏನೇನೂ ಅಲ್ಲವೆಂಬಂತೆ ಕಡೆಗಣಿಸುವುದನ್ನು ಸೂಚ್ಯವನ್ನು ಹೇಳಿದೆ.

ಬರುವುದಿಲ್ಲವೆಂದು ರಾತ್ರಿಯಿಡೀ ದಮಡಿ ಬಾರಿಸುತ್ತಾ ಕೂರುತ್ತಾಳೆ.

ನಂತರದ ದಿನದಲ್ಲಿ ಆಣೆಕಟ್ಟು ತುಂಬಿದ್ದರಿಂದ ನೀರನ್ನು ಹೊರ ಬಿಡಲಾಗುತ್ತದೆ. ಆಗ ಇವರ ಸುತ್ತ ಆವರಿಸಿದ್ದ ನೀರು ಕಡಿಮೆಯಾಗಿದ್ದನ್ನು ಕಂಡ ಅವಳು ಗಂಡನನ್ನು ಎಳೆದು ತಂದು ತೋರಿಸುತ್ತಾಳೆ. ತಾವು ಪಾರಾಗಿದ್ದನ್ನು ಕಂಡ ಗಂಡ ದೈವವೇ ತಮ್ಮನ್ನು ಬದುಕಿಸಿದ್ದು, ತಾವು ನಂಬಿದ್ದ ದೇವರು ನಮ್ಮನ್ನು ಕೈಬಿಡಲಿಲ್ಲವೆಂದು ಭಾವಿಸುತ್ತಾನೆ. ಹೆಂಡತಿ ತಾನು ಪಟ್ಟ ಪರಿಪಾಟಲನ್ನು ಹೇಳಿದಾಗ ನೀನು ನಿಮಿತ್ತ ಮಾತ್ರ ಎಂದು ಅವಳ ಹೋರಾಟವನ್ನು ಏನೇನೂ ಅಲ್ಲವೆಂಬಂತೆ ತಿರಸ್ಕರಿಸುವುದರೊಂದಿಗೆ ಚಿತ್ರ ಮುಕ್ತಾಯವಾಗುತ್ತದೆ.

ಪ್ರಶಸ್ತಿಗಳನ್ನು ಬಾಚಿಕೊಂಡ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಕನ್ನಡ ಚಲನಚಿತ್ರ ಡಬ್ಬದ ಬಂಧನದಿಂದ ಬಿಡುಗಡೆಯಾಗಿ ತೆರೆಕಂಡಿದೆ.

ಇಂದಿನ ಸಮಾಜದಲ್ಲಿ ಬದುಕಿಗಾಗಿ ನಿತ್ಯ ಸತತ ಹೋರಾಟ ನಡೆಸುವ ಹೆಣ್ಣಿನ ದಿಟ್ಟತನವನ್ನು ಪ್ರತಿಬಿಂಬಿಸುವ ಚಿತ್ರ ಹಾಗೆಯೇ ಅವಳ ಹೋರಾಟವನ್ನು ಪುರುಷ ಪ್ರಧಾನ ಸಮಾಜ ಏನೇನೂ ಅಲ್ಲವೆಂಬಂತೆ ಕಡೆಗಣಿಸುವುದನ್ನು ಸೂಚ್ಯವನ್ನು ಹೇಳಿದೆ. ಗ್ಲಾಮರ್ ತಾರೆ ಸೌಂದರ್ಯ ತನ್ನ ನಿಲುವನ್ನು ಸಂಪೂರ್ಣ ಬದಲಿಸಿಕೊಂಡು ಮಲೆನಾಡಿನ ಹೆಣ್ಣಾಗಿ ಗಮನ ಸೆಳೆಯುತ್ತಾರೆ. ಅವಳ ಗಂಡನಾಗಿ ಅವಿನಾಶ್ ಅಭಿನಯವೂ ಉತ್ತಮ. ಆದರೆ ಇವರೆಲ್ಲರಿಗಿಂತ ಅಜ್ಜನಾಗಿ ವಾಸುದೇವರಾವ್ ಅವರ ಅಭಿನಯ ಮನೋಜ್ಞ. ಛಾಯಾಗ್ರಹಣದ ಬಗ್ಗೆ ಹೇಳುವಂತೆಯೇ ಇಲ್ಲ. ಅದಕ್ಕಾಗಿ ಈಗಾಗಲೇ ರಾಷ್ಟ್ರ ಪ್ರಶಸ್ತಿ ದಕ್ಕಿದೆ. ಜಯಂತ ಕಾಯ್ಕಿಣಿ ಮತ್ತು ಗಿರೀಶ್ ಕಾಸರವಳ್ಳಿಯವರ ಸಂಭಾಷಣೆ ಗಮನ ಸೆಳೆದರೂ ನಗರವಾಸಿಗಳಿಗೆ ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಷ್ಟವೆನಿಸುತ್ತದೆ. ಒಮ್ಮೊಮ್ಮೆ ಚಿತ್ರ 'ಬೋರ್' ಎನಿಸಿದರೂ ಒಟ್ಟಾರೆಯಾಗಿ ಸಮರ್ಥ ಚಿತ್ರವಾಗಿ ಮೂಡಿಬಂದಿದೆ.

- ಎಂ.ರಾಮು

ಅಯೋಧ್ಯೆಯಲ್ಲಿ ಲೆಕ್ಕಪತ್ರ

ಹದಿನಾಲ್ಕು ವರ್ಷದ ವನವಾಸದಿಂದ ಮರ್ಯಾದಾ ಪುರುಷೋತ್ತಮ ರಾಮಚಂದ್ರನು ಅಯೋಧ್ಯೆಗೆ ಆಗಮಿಸಿದಾಗ ಎಲ್ಲೆಡೆ ಸಂಭ್ರಮ, ಸಡಗರ, ಸ್ವಾಗತದ ಭರಾಟೆ. ಆದರೆ.... ಅಲ್ಲಿನ ವ್ಯಾಪಾರಿ ವರ್ಗದಲ್ಲಿ ದೊಡ್ಡ ಕೋಲಾಹಲವೇ ಉಂಟಾಯಿತು. ಇಂತಹ ಸತ್ಯವಂತ, ಪ್ರಾಮಾಣಿಕ ರಾಮನ ಆಡಳಿತದಲ್ಲಿ (!?) ಕಳ್ಳ ಲೆಕ್ಕ ಇಡಲು ಸಾಧ್ಯವಾಗುವುದಿಲ್ಲ. ತಾವೆಲ್ಲ ಸಿಕ್ಕಿ ಬೀಳುತ್ತೇವೆಂಬ ಆತಂಕ. ದಿಕ್ಕೇತೋಚದ ಸ್ಥಿತಿ!. ಆದರೆ ರಾಮರಾಜ್ಯದಲ್ಲಿ ಬುದ್ಧಿವಂತರಿಗೆ(?) ಬರವೇ? ಅವರು ಅಲ್ಲಿಯೂ ಒಂದು ಒಳಮಾರ್ಗದ ಉಪಾಯ ಹುಡುಕಿಯೇ ಬಿಟ್ಟರು...!

ರಾಮರಾಜ್ಯದ ಸುಖೀ ಆಡಳಿತವೆಂಬ ಕಲ್ಪನೆಯನ್ನು ವಿಡಂಬಿಸುವ ಪ್ರಖರ ವಿಶ್ಲೇಷಣೆಯ ಕಥೆ.

ಖ್ಯಾತ ಕಥೆಗಾರ
ಹರಿಶಂಕರ ಪರ್ಸಾಯಿಯವರಿಂದ
ಜನವಾದಿ ಪ್ರಕಾಶನ, ಗುಂಡ್ಮಿ - ಯ
ಪ್ರಕಟಿತ ಸಂಕಲನದಿಂದ

ರಾವಣನನ್ನು ಜಯಿಸಿ ಅಯೋಧ್ಯೆಗೆ ಬಂದ. ದಿನವಿಡೀ ನಗರವೇ ಜಗಮಗಿಸುತ್ತಿತ್ತು. ಈ ದೀಪಾವಳಿ ಹಬ್ಬವನ್ನು ಅನಂತ ಕಾಲದ ತನಕ ಆಚರಿಸಲಾಗುವುದು. ಆದರೆ ಇದೇ ಹಬ್ಬದಲ್ಲಿ ವ್ಯಾಪಾರಿಗಳು ಲೆಕ್ಕಪತ್ರವನ್ನು ಬದಲಾಯಿಸುತ್ತಾರೆ ಮತ್ತು ಲೆಕ್ಕಪತ್ರಗಳ ರಿಜಿಸ್ಟರ್‌ಗಳನ್ನು ಕೆಂಪು ಬಟ್ಟೆಯಲ್ಲಿ ಸುತ್ತಿಡಲಾಗುತ್ತದೆ.

ಪ್ರಶ್ನೆ ಇದು: ರಾಮನು ಅಯೋಧ್ಯೆಗೆ ಬರುವುದಕ್ಕೂ ಲೆಕ್ಕಪತ್ರ ಬದಲಾಯಿಸುವುದಕ್ಕೂ ಏನು ಸಂಬಂಧ? ಮತ್ತು ಅದನ್ನು ಕೆಂಪು ಬಟ್ಟೆಯಿಂದ ಏಕೆ ಕಟ್ಟಿಡಲಾಗುತ್ತದೆ?

ವಿಷಯವಿಷ್ಟೆ: ರಾಮನು, ಅಯೋಧ್ಯೆಗೆ ಬರುವ ಸಮಾಚಾರ ತಿಳಿದು ವ್ಯಾಪಾರಿ ವರ್ಗದಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಅವರು ಹೇಳತೊಡಗಿದರು. "ಈಗ ಭಾರೀ ನಮ್ಮ ಸ್ಥಿತಿ ಗಂಡಾಂತರ. ಭರತನ ರಾಜ್ಯದಲ್ಲಿ ನಮ್ಮ ರಹಸ್ಯ ಹೇಗೋ ಉಳಿಯಿತು. ಆದರೆ ರಾಮ ಮರ್ಯಾದಾ ಪುರುಷೋತ್ತಮ. ಅವನು ಟ್ಯಾಕ್ಸ್ ಕಳ್ಳತನವನ್ನು ಸಹಿಸುವುದಿಲ್ಲ. ನಮ್ಮ ಲೆಕ್ಕಪತ್ರಗಳನ್ನು ಇನ್ಸ್‌ಪೆಕ್ಷನ್ ಮಾಡುತ್ತಾನೆ. ನಮಗೆ ಖಂಡಿತ ಶಿಕ್ಷೆಯಾಗುತ್ತದೆ."

ಆಗ ಒಬ್ಬ ವ್ಯಾಪಾರಿ ಎಂದ "ಹಾಗಾದರೆ ನಂಬರ್ ಎರಡರ ವಿಚಾರವೂ ಸಿಕ್ಕಿ ಬೀಳುತ್ತದೆ".

ಅಯೋಧ್ಯೆಯ ಸ್ತ್ರೀ ಪುರುಷರು ರಾಮನ ಸ್ವಾಗತಕ್ಕೆ ತಯಾರಿ ನಡೆಸುತ್ತಿದ್ದರು. ಆದರೆ ವ್ಯಾಪಾರಿ ವರ್ಗ ಗಾಬರಿಗೊಂಡಿತ್ತು. ಅಯೋಧ್ಯೆಗೆ ಬರುವ ಮುಂಚೆಯೇ ಇಲ್ಲಿ ಭಾರೀ ಮೋಸ ನಡೆಯುತ್ತಿದೆ ಎಂದು ರಾಮನಿಗೆ ಗೊತ್ತಿತ್ತು. ಅವನು ಹನುಮಂತನನ್ನು ಕರೆದು ಹೇಳಿದ.

ಕೇಳು ಪವನಸುತ. ಲಂಕೆಯಲ್ಲಿ ಯುದ್ಧವನ್ನಂತೂ ಗೆದ್ದೆವು. ಆದರೆ ಅಯೋಧ್ಯೆಯಲ್ಲಿ ರಾವಣನಿಗಿಂತ ದೊಡ್ಡ ಶತ್ರುವನ್ನು ಎದುರಿಸಬೇಕಾಗಿದೆ. ಅದು ವ್ಯಾಪಾರಿ ವರ್ಗದ ಭ್ರಷ್ಟಾಚಾರ. ದೊಡ್ಡ ದೊಡ್ಡ ವೀರರೂ ವ್ಯಾಪಾರಿವರ್ಗದ ಎದುರು ಸೋತು ಹೋಗುತ್ತಾರೆ. ನೀನು ಅತುಲಬುದ್ಧಿಸಂಪನ್ನ, ನಾನು ನಿನ್ನನ್ನು ಎನ್‌ಫೋರ್ಸ್‌ಮೆಂಟ್ ಬ್ರಾಂಚ್‌ನ ಡೈರೆಕ್ಟರ್ ಆಗಿ ನೇಮಕ ಮಾಡುತ್ತೇನೆ. ನೀನು ಅಯೋಧ್ಯೆಗೆ ಹೋಗಿ ವ್ಯಾಪಾರಿಗಳ ಲೆಕ್ಕಪತ್ರ ತಪಾಸಣೆ ಮಾಡು. ಸುಳ್ಳು ಲೆಕ್ಕವನ್ನು ಕಂಡು ಹಿಡಿದು ಅವರಿಗೆ ಕಠಿಣ ಶಿಕ್ಷೆ ವಿಧಿಸು.

ಇತ್ತ ವ್ಯಾಪಾರಿಗಳು ಕಂಗಾಲಾಗಿದ್ದರು.

ವ್ಯಾಪಾರಿಗಳು ಮಾತಾಡಿಕೊಳ್ಳುತ್ತಿದ್ದರು : 'ಏ ಮಾರಾಯ, ನಾವು ಸತ್ತೆವು. ಹನುಮಾನರು ಏನ್‌ಫೋರ್ಸ್‌ಮೆಂಟ್ ಬ್ರಾಂಚ್‌ನ ಡೈರೆಕ್ಟರ್ ಆಗಿ ನೇಮಕಗೊಂಡಿದ್ದಾರೆ. ಬಹಳ ಕಠಿಣ ಮನುಷ್ಯ. ಮದುವೆ ಮಾಡಿಕೊಳ್ಳಲಿಲ್ಲ. ಮಕ್ಕಳು ಮರಿಯಿಲ್ಲ. ಲಂಚ ಕೊಡುವ ಹಾಗಿಲ್ಲ.'

ವ್ಯಾಪಾರಿಗಳ ಕಾನೂನು ಸಲಹೆಗಾರರು ಕುಳಿತು ವಿಚಾರ ಮಾಡತೊಡಗಿದರು. ಕೊನೆಗೆ ಲೆಕ್ಕಪತ್ರವನ್ನೇ ಬದಲಾಯಿಸಿ ಬಿಡುವುದೆಂದು ತೀರ್ಮಾನಿಸಿದರು. ಇಡೀ ರಾಜ್ಯದ ಚೇಂಬರ್ ಆಫ್ ಕಾಮರ್ಸ್‌ನಿಂದ ಒಳಗಿಂದೊಳಗೇ ಆದೇಶ ಹೊರಟಿತು. 'ದೀಪೋತ್ಸವದ ಸಮಯದ ಒಳಗೆ ಲೆಕ್ಕಪತ್ರಗಳು ಬದಲಾಯಿಸಲ್ಪಡಬೇಕು.' ಆದರೂ ವ್ಯಾಪಾರಿ ವರ್ಗದ ಚಿಂತೆ ದೂರವಾಗಿಲ್ಲ. ಹನುಮಾನರನ್ನು ಮೋಸಗೊಳಿಸುವುದು ಸುಲಭ ಕಾರ್ಯವಲ್ಲ. ಅವರು ಅಲೌಕಿಕ ಬುದ್ಧಿಸಂಪನ್ನರು. ಹೇಗಾದರೂ ಮಾಡಿ ಅವರನ್ನು ಖುಷಿಪಡಿಸಲೇಬೇಕು. ವ್ಯಾಪಾರಿ ವರ್ಗದಲ್ಲಿ ಚರ್ಚೆ ನಡೆಯಿತು.

ಕೈಬಿಸಿ ಮಾಡುವುದರಿಂದ ಕೆಲಸವಾಗುವುದಿಲ್ಲ.

ಅವರು ದುಡ್ಡು ತೆಗೆದುಕೊಳ್ಳುವುದಿಲ್ಲ. ಅವರು ತೆಗೆದುಕೊಳ್ಳದಿದ್ದರೆ ಹೋಗಲಿ, ಅವರ ಹೆಂಡತಿ?

ಅವರಿಗೆ ಹೆಂಡತಿಯಿಲ್ಲ. ಸಾಹೇಬರಿಗೆ ಮ್ಯಾರೇಜಾಗಿಲ್ಲ. ಯೌವನವೆಲ್ಲಾ ಯುದ್ಧದಲ್ಲೇ ಕಳೆದರು. ಬೇರೇನಾದರೂ ಅಭ್ಯಾಸವಿರಬಹುದು. ಹೆಂಡ ಅಥವಾ ಬೇರೆ....?

ಅವರು ಬಾಲಬ್ರಹ್ಮಚಾರಿಗಳು. ಕಾಲ್‌ಗರ್ಲ್ಸ್‌ಗಳನ್ನು ಹೊಡೆದೋಡಿಸಿಯಾರು. ಸಂಯಮದ ಮನುಷ್ಯ. ಹಾಗಾದರೆ ಏನು ಮಾಡೋಣ?

ಒಬ್ಬ ಬುದ್ಧಿವಂತ ವಕೀಲ ಸಲಹೆ ಕೊಟ್ಟ -- 'ಮನುಷ್ಯ ಎಷ್ಟೇ ದೊಡ್ಡವನಾಗಲಿ ಹೊಗಳುವಿಕೆಗೆ ಉಬ್ಬದೆ ಇರುವುದಿಲ್ಲ. ಹನುಮಾನರು ಇದಕ್ಕೆ ಹೊರತಲ್ಲ. ಅವರು ಶರೀರದ ಮೇಲೆ ಸಿಂಧೂರ ಹಚ್ಚಿಕೊಳ್ಳುತ್ತಾರೆ. ಕೆಂಪು ಲಂಗೋಟಿ ಧರಿಸುತ್ತಾರೆ. ಅವರನ್ನು ತೃಪ್ತಿಗೊಳಿಸುವುದು ಸುಲಭ. ಎಲ್ಲ ರಿಜಿಸ್ಟಿಗಳನ್ನು ಕೆಂಪು ಬಟ್ಟೆಯಲ್ಲಿ ಸುತ್ತಿಬಿಡಿ.'

ರಾತ್ರೋರಾತ್ರಿ ಲೆಕ್ಕಪತ್ರಗಳೆಲ್ಲವೂ ಬದಲಾದವು. ಎಲ್ಲವನ್ನೂ ಕೆಂಪು ಬಟ್ಟೆಯಲ್ಲಿ ಸುತ್ತಿಡಲಾಯಿತು.

ಮಾರನೆಯ ದಿನ ಹನುಮಾನರು ಕೆಲವು ಇನ್ಸ್‌ಪೆಕ್ಟರ್‌ಗಳೊಡನೆ ಅಯೋಧ್ಯೆಯ ಪೇಟೆಗೆ ಬಂದರು. ಮೊದಲು ವ್ಯಾಪಾರಿ ಬಳಿಗೆ ಹೋದರು. ಹನುಮಾನರೆಂದರು- ಮೊದಲು 'ಲೆಕ್ಕಪತ್ರ ತಪಾಸಣೆ ಆಗಬೇಕು' ವ್ಯಾಪಾರಿಗಳು ಕೆಂಪು ಬಟ್ಟೆ ಸುತ್ತಿದ ರಿಜಿಸ್ತ್ರಿಗಳನ್ನು ಎದುರಿಗಿರಿಸಿದರು. ಹನುಮಾನರು ನೋಡಿದರು. ತನ್ನ ಲಂಗೋಟಿಯ ಬಣ್ಣವೂ ಇವುಗಳ ಬಣ್ಣವೂ ಒಂದೇ ಖುಷಿಯಾಯಿತು.

ಕೇಳಿದರು-'ನನ್ನ ಲಂಗೋಟಿಯ ಬಟ್ಟೆಯಿಂದ ಲೆಕ್ಕಪತ್ರವನ್ನು ಸುತ್ತಿಡುತ್ತಿದ್ದಯಾ, ವ್ಯಾಪಾರಿಯಿಂದ - 'ಹೌದು ಬಲಬುದ್ಧಿನಿಧಿಯೇ ನಿಮ್ಮನ್ನು ನಾವು ಪೂಜಿಸುತ್ತೇವೆ' ಹನುಮಾನರು ಗದ್ಗದಿತರಾದರು. ವ್ಯಾಪಾರಿಯೆಂದ 'ರಿಜಿಸ್ಟ್ರಿಯನ್ನು ತೆರೆಯಲೇ, ನೀವು ಇನ್ಸ್‌ಪೆಕ್ಷನ್ ಮಾಡಿರಿ ಸ್ವಾಮಿ,' ಹನುಮಾನರೆಂದರು-- 'ಇರಲಿ ಬೇಡ. ನನ್ನ ಭಕ್ತ ಅಪ್ರಾಮಾಣಿಕನಾಗಲಾರ'.

ಹನುಮಾನರು ಎಲ್ಲಿಗೇ ಹೋದರೂ ಕೆಂಪು ಲಂಗೋಟಿಯ ಬಟ್ಟೆ ಸುತ್ತಿದ ಲೆಕ್ಕಪತ್ರ ರಿಜಿಸ್ಟ್ರಿಗಳೇ ಇದ್ದವು. ಅವರಿಗೆ ಬಹಳ ಸಂತೋಷವಾಯಿತು. ಅವರು ಎಲ್ಲಿಯೂ ಲೆಕ್ಕಪತ್ರಗಳನ್ನು ನೋಡಲಿಲ್ಲ.

ಅಯೋಧ್ಯೆಯ ಎಲ್ಲಾ ವ್ಯಾಪಾರಿಗಳು ಪ್ರಾಮಾಣಿಕರು ಹಾಗೂ ಅವರೆಲ್ಲರ ಲೆಕ್ಕಪತ್ರಗಳು ಸಂಪೂರ್ಣ ಸರಿಯಾಗಿದೆ ಎಂದು ರಾಜಮಹಾರಾಜ ರಾಮಚಂದ್ರರಿಗೆ ರಿಪೋರ್ಟ್ ಕೊಟ್ಟರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee, Editor: S.Y.GURUSHANTH